ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮ ಮುಂದೆ ಒಂದು ಕೋರಿಕೆಯನ್ನು ಮುಂದಿಟ್ಟಿದ್ದೇನೆ. ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕೊಡಬೇಕಾದಂತಹ ಸವಲತ್ತುಗಳನ್ನು ಕಾನೂನಿನ ತೊಂದರೆಯಿಂದಾಗಿ ಕಿತ್ತುಕೊಂಡಂತಹ ಅನ್ಯಾಯವನ್ನು ಸರಿ ಮಾಡುವುದಕ್ಕೆ ನಮಗೆ ಈಗಾಗಲೇ ಸಾಕಷ್ಟು ದಿನಗಳು ಕಳೆದು ಹೋಗಿದೆ. ಇನ್ನು ಮುಂದೆ ಒಂದೊಂದು ದಿವಸಗಳು ಕಳೆದರೂ ಕೂಡ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಅನ್ಯಾಯವನ್ನು ಮಾಡುವುದು ಮುಂದುವರಿಯುತ್ತದೆ. ಅದಕ್ಕಾಗಿ ನಾನು ಸದನದಲ್ಲಿ ಪ್ರಾರ್ಥನೆಯನ್ನು ಮಾಡಿಕೊಂಡಿದ್ದೇನೆ. ಇದರ ಬಗ್ಗೆ ಎಲ್ಲಾ ಸ್ನೇಹಿತರು ಒಪ್ಪಿಕೊಳ್ಳುವುದಾದದರೆ ಅದಕ್ಕೆ ಆದ್ಯತೆಯನ್ನು ಕೊಟ್ಟು ಆ ಬಿಲ್ಲನ್ನು ತೆಗೆದುಕೊಂಡು ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಸದನದ ಒಂದು ಅನುಮತಿಯನ್ನು ಕೇಳಿ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಈಗಲೇ ಆ ಬಿಲ್ಲನ್ನು ತಾವು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು :— ಮಾನ್ಯ ರಾಮಯ್ಯನವರೆ, ಇದರ ಬಗ್ಗೆ ಈಗಾಗಲೇ ಮಂತ್ರಿಗಳು ಹೇಳಿದ್ದಾರೆ, ಈಗ ಬಿಎಸಿ ಮೀಟಿಂಗ್ ನಡೆಯುತ್ತಿದೆ, ಅದು ಬಂದನಂತರ ಆ ಬಿಲ್ಲನ್ನು ತೆಗೆದುಕೊಳ್ಳುತ್ತೇವೆ.

### (5) ನಿಯಮ 69ರ ಮೇರೆಗೆ

*ವಿಷಯ : ನರಹಂತಕ ವೀರಪ್ಪನ್ ಡಾ: ರಾಜ್‌ಕುಮಾರ್‌ರವರನ್ನು ಅಪಹರಿಸಿ ಬಿಡುಗಡೆ ಮಾಡಲಾಗಿರುವುದರಿಂದ ಇನ್ನು ಮುಂದಾದರೂ ವೀರಪ್ಪನ್ ನನ್ನು ಹಿಡಿಯುವ ಬಗ್ಗೆ.*

+ ಶ್ರೀ ಕೆ. ಶ್ರೀನಿವಾಸ ಗೌಡ (ಕೋಲಾರ) :— ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿನ ನಾನು ಮಾತನಾಡಲು ಅವಕಾಶವನ್ನು ಕೊಟ್ಟಿದ್ದು ಮತ್ತೆ ಅಲ್ಲಿ ನನಗೆ ಮಾತನಾಡಲು ಕಾಲಾವಕಾಶವಿಲ್ಲದೆ ಇದ್ದುದರಿಂದ ಈಗ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗ ಸದನದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು, ನಾನು ವೀರಪ್ಪನ್‌ಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂಬ ಮಾತನ್ನು ಹೇಳಿದೆ. ಅದಕ್ಕಾಗಿ ಸರ್ಕಾರದ ಪರವಾಗಿ ದೊಡ್ಡದಾದ ಗಲಾಟೆಯನ್ನು ಮಾಡಿದರು. ಇದಕ್ಕೆ ಪುರಾವೆಯಾಗಿ, ಕಾಂಗ್ರೆಸ್ ಪಕ್ಷದಲ್ಲಿ ಪಾಲುದಾರರಾಗಿದ್ದಂತಹ ಕುಮಾರಿ ಜಯಲಲಿತಾ, ಎಐಎಡಿಎಂಕೆ ಪಕ್ಷದ ಕಾರ್ಯದರ್ಶಿಯವರು ಡಾ. ರಾಜ್‌ಕುಮಾರ್‌ರವರ ಬಿಡುಗಡೆಗೆ ನೂರಾರು ಕೋಟಿ ರೂಪಾಯಿಗಳನ್ನು ವೀರಪ್ಪನ್‌ಗೆ ನೀಡಲಾಗಿದೆ, ಭಾರಿ ಪ್ರಮಾಣದಲ್ಲಿ ಸ್ಫೋಟಕಗಳು ಹಾಗೂ ಮದ್ದುಗುಂಡುಗಳನ್ನು ವೀರಪ್ಪನ್ ಹಾಗೂ ಆತನ ಉಗ್ರವಾದಿ ಗೆಳೆಯರಿಗೆ ಸರಬರಾಜು ಮಾಡಲಾಗಿದೆ ಎಂದು ಹೇಳಿದ್ದಾರೆ. ನಿನ್ನೆ ದಿವಸ ನಾನು ಇದರ ಬಗ್ಗೆ ಮಾತನಾಡುತ್ತಿದ್ದಾಗ ಮಾನ್ಯ ಕಾಗೋಡು ತಿಮ್ಮಪ್ಪನವರು ಇದನ್ನು ತಾವು ಹೇಗೆ ಪ್ರೂವ್ ಮಾಡುತ್ತೀರಿ ಇದನ್ನು ಹೇಗೆ ಹೇಳುತ್ತೀರಿ ಎಂದು ಕೇಳಿದರು. ಇದನ್ನು ಬೇಕಾದರೆ ತಾವು ಸಿಬಿಐಗೆ ರೆಫರ್ ಮಾಡಿ, ನಿಜವಾಗಿಯೂ ಈ ಹಣವನ್ನು ತಾವು ಕಲೆಕ್ಟ್ ಮಾಡಲಿಲ್ಲವೆಂದು ಸಿಬಿಐನವರು ವರದಿಯನ್ನು ಕೊಟ್ಟರೆ ಅದನ್ನು ನಾವುಗಳೆಲ್ಲರೂ ಒಪ್ಪಿಕೊಳ್ಳೋಣ.

ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್.) :— ಮಾನ್ಯ ಉಪಾಧ್ಯಕ್ಷರೆ, ತಮಿಳು ನಾಡಿನ ಮಾಜಿ ಮುಖ್ಯಮಂತ್ರಿಗಳಾದ ಕುಮಾರಿ ಜಯಲಲಿತಾರವರು ನೂರಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂಬ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಗೌಡರವರು ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಗೋಪಾಲ್‌ರವರ ಕಡೆಯಿಂದ ಕರುಣಾನಿಧಿಯವರಿಗೆ 30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳಿಲಿಲ್ಲ. ಅವರು ಕರುಣಾನಿಧಿಯವರು ಗೋಪಾಲ್ ಕಡೆಯಿಂದ

*(ಗೊಂದಲ)*

ಕೊಟ್ಟು ಕಳುಹಿಸಿದ್ದಾರೆ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದ್ದಾರೆ. ಪರ್ಟಿಕ್ಯುಲರ್ ಆಗಿ ಕರುಣಾನಿಧಿಯವರು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆಯೇ ಹೊರತು ಎರಡು ಸರ್ಕಾರಗಳು ಸೇ ಕೊಟ್ಟಿದ್ದಾರೆಂದು ಹೇಳುತ್ತಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ಇದರ ಬಗ್ಗೆ ಸೋಮವಾರದ ೨೦ನೇ ದಿನಾಂಕದ ಪತ್ರಿಕೆಯಲ್ಲಿ ಕುಮಾರಿ ಜಯಲಲಿತಾರವರು ನೇರವಾಗಿ ಹೇಳಿದ್ದಾರೆ. ಡಾ. ರಾಜ್‌ಕುಮಾರ್‌ರವರ ಬಿಡುಗಡೆಗೆ ನೂರಾರು ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಇದರ ಜೊತೆಗೆ ಭಾರಿ ಪ್ರಮಾಣದಲ್ಲಿ ಸ್ಫೋಟಕಗಳು ಹಾಗೂ ಮದ್ದುಗುಂಡುಗಳು ಹಾಗೂ ವೀರಪ್ಪನ್ ಹಾಗೂ ಆತನ ಉಗ್ರವಾದಿ ಗೆಳೆಯರಿಗೆ ಸರಬರಾಜು ಮಾಡಲಾಗಿದೆ ಎಂದು ಕುಮಾರಿ ಜಯಲಲಿತಾರವರು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :— ಮಾನ್ಯ ಉಪಾಧ್ಯಕ್ಷರೆ, ಇವೆಲ್ಲವನ್ನು ಮಾನ್ಯ ಶ್ರೀನಿವಾಸಗೌಡರು ಮಾಡಿದ್ದಾರೆ ಎನ್ನತಕ್ಕಂಥ ಸುದ್ದಿ ನನಗೆ ಬಂತು.

ಶ್ರೀ ಕೆ. ಶ್ರೀನಿವಾಸಗೌಡ :— ತಾವು ನನಗೆ ಅಧಿಕಾರವನ್ನು ಕೊಟ್ಟರೆ ಆ ಬಗ್ಗೆ ಯೋಚನೆಯನ್ನು ಮಾಡುತ್ತೇನೆ. ಸುಪ್ರೀಂಕೋರ್ಟಿನಲ್ಲಿ ಟಾಡಾ ಕೈದಿಗಳ ಬಿಡುಗಡೆ ವಕಾಲತ್ತನ್ನು ವಹಿಸಿಕೊಂಡು ಮಾಡುತ್ತಿರುವ ಲಾಯರ್‌ಗಳಿಗೆ ನೀವು ಹಣವನ್ನು ಕೊಡದೆ ಅವರು ಪುಕ್ಕಟ್ಟೆಯಾಗಿ ವಾದ ಮಾಡಿದ್ದಾರೆಯೇ? ನೀವು ಹಣವನ್ನು ಕಲೆಕ್ಟ್ ಮಾಡಿದ್ದೀರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಸಿಬಿಐ ತನಿಖೆಯನ್ನು ಮಾಡಿದರೆ ಎಲ್ಲಾ ವಿಷಯ ಹೊರಗೆ ಬರುತ್ತದೆ. ಒಂದು ವೇಳೆ ಸಿಬಿಐ ಎನ್‌ಕ್ವಯರಿ ಆಗಿ ನೀವು ಹಣವನ್ನು ಕಲೆಕ್ಟ್ ಮಾಡಿಲ್ಲವೆಂದು ವರದಿಯನ್ನು ಕೊಟ್ಟರೆ ನಾನು ರಾಜೀನಾಮೆಯನ್ನು ಬೇಕಾದರೆ ಕೊಡುವುದಕ್ಕೆ

*12.30 ಪಿ.ಎಂ.*

ತಯಾರಿದ್ದೇನೆ. ನನಗೆ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ರನ್ನನ ಗಧಾಯುದ್ಧದಲ್ಲಿ ಕೊನೆಯ ಹಂತದಲ್ಲಿ ಭೀಮನಿಗೆ ಹೆದರಿದ ದುರ್ಯೋಧನನಿಗೆ ಭೀಷ್ಮರು ಹೇಳುತ್ತಾರೆ, ನೀನು ಭೀಮನಿಗೆ ಕಾಣಿಸದ ಹಾಗೆ ವೈಶಂಪಾಯನ ಸರೋವರದಲ್ಲಿ ಅವಿತುಕೋ

ಎಂದು. ಅದನ್ನು ಅರಿತ ಶ್ರೀ ಕೃಷ್ಣ ಭೀಮನಿಗೆ ಹೇಳುತ್ತಾನೆ, ವೈಶಂಪಾಯನ ಸರೋವರದಲ್ಲಿ ದುರ್ಯೋಧನ ಅಡಗಿಕೊಂಡಿದ್ದಾನೆ ಅವನನ್ನು ಮುಗಿಸು ಎಂದು. ಆಗ ಭೀಮ ದುರ್ಯೋಧನನನ್ನು ಕುರಿತು ಏಯ್ ಹೇಡಿ ಹಾಗೆ ಹೀಗೆ ಎಂದು ಮೂದಲಿಸಲಿಕ್ಕೆ ಹೋದಾಗ, "ನೀರೊಳಗಿರ್ದುಂ ಬೆಮರ್ದುದಂ ಉರಗ ಪಾತಕಂ" ಎಂದು ಭೀಮ ಜೀರೋ ಡಿಗ್ರಿ ಇರತಕ್ಕ ಸರೋವರದೊಳಗೆ ದುರ್ಯೋಧನನಿಗೆ ಬೆವರು ಬರುತಿತ್ತು ಎಂದು ಹೇಳುತ್ತಾನೆ. ಅದೇ ರೀತಿಯಲ್ಲಿ ವಿರೋಧ ಪಕ್ಷದವರು ಮೂದಲಿಸಿದ್ದರಿಂದ ಇಂತಹ ಏರ್‌ಕಂಡೀಷನ್ ಹಾಲ್‌ನಲ್ಲಿದ್ದರೂ ಈ ಸರ್ಕಾರದವರಿಗೆ ಬೆವರು ಬರುತ್ತಿದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಖ್ಯಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿ ಗೋಪಾಲ್‌ರವರು ಕಾಡಿಗೆ ಹೋದರೂ ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬರಲಿಲ್ಲ. ಡಾ: ಭಾನುಮತಿಯವರು ಇರಲಿಲ್ಲವೆಂದು ಹೇಳುತ್ತಾರೆ. ನೂರು ಕೋಟಿ ರೂಪಾಯಿ ಕೊಟ್ಟಿಲ್ಲವೆಂದು ಹೇಳುತ್ತಾರೆ. ಒಂದು ಪೈಸೆಯನ್ನು ಯಾರಿಗೂ ಕೊಟ್ಟಿಲ್ಲವೆಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ನೆಡುಮಾರನ್ ಅವರ ಬಗ್ಗೆ ಡಾ: ರಾಜ್‌ಕುಮಾರ್‌ರವರು ಬಿಡುಗಡೆಯಾಗಿ ಬಂದ ದಿವಸ ನೇರವಾಗಿ ಹೇಳಿದರು. ನೆಡುಮಾರನ್ ಒಬ್ಬ ಡಾ: ರಾಧಾಕೃಷ್ಣನ್ ಇದ್ದಹಾಗೆ ಅವರನ್ನು ನಾನು ಮೊದಲು ನೋಡಿರಲಿಲ್ಲ, ನಾನು ರಾಧಾಕೃಷ್ಣನ್‌ರವರನ್ನು ದೆಹಲಿಯಲ್ಲಿ ಪ್ರಶಸ್ತಿಯನ್ನು ತೆಗೆದುಕೊಳ್ಳುವಾಗ ನೋಡಿದ್ದೆ, ಅವರನ್ನು ನೋಡಿದಹಾಗೆ ನೆಡುಮಾರನ್‌ರವರನ್ನು ನೋಡಿದಾಗ ಆಯಿತೆಂದು ಹೇಳಿದ್ದಾರೆ. ಡಾ: ಭಾನುಮತಿ ಅವರನ್ನು ಶಕ್ತಿ ದೇವತೆಗೆ ಹೋಲಿಸಿದರು. ಮುಖ್ಯ ಮಂತ್ರಿಗಳ ಹೇಳಿಕೆಯಲ್ಲಿ ಅವರ ಹೆಸರು ಇಲ್ಲ. ಹಾಗಾದರೆ ಡಾ: ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬಂದವರು ಯಾರು? ವೀರಪ್ಪನ್‌ಗೆ ಸಾಕಾಗಿ ಅವನೇ ವಾಪಸ್ಸು ಕಳುಹಿಸಿಕೊಟ್ಟಿದ್ದಾನೆಯೇ? ಅವರು ಯಾವ ತರಹ ವಾಪಸ್ಸು ಬಂದರು? ಅವರೇನಾದರೂ ದುಡ್ಡು ಕೊಟ್ಟು ಬಂದರಾ? ದುಡ್ಡು ಕೊಟ್ಟಿದ್ದಾರೆಯೇ, ಗೋಪಾಲ್ ಬಿಡಿಸಿಕೊಂಡು ಬಂದರಾ, ಅಥವಾ ಗ್ರಾನೈಟ್ ಲಾಭಿಯವರು ಏನಾದರೂ ಬಿಡಿಸಿದರಾ? ಇದು ಕರ್ನಾಟಕದ ಜನತೆಗೆ ಗೊತ್ತಾಗಬೇಕು. ನಾನು ಒಂದು ವಿಚಾರವನ್ನು ಜ್ಞಾಪಿಸಿಕೊಳ್ಳುತ್ತೇನೆ. ರಾಜೀವ್ ಗಾಂಧಿಯವರ ಅಸಾಸಿನೇಷನ್ ಬಗ್ಗೆ ನೇಮಕವಾದ ಜೈನ್ ಕಮಿಟಿ ರಿಪೋರ್ಟ್‌ನಲ್ಲಿ ಕರುಣಾನಿಧಿಯವರ ಸರ್ಕಾರ ಇನ್‌ವಾಲ್ವ್ ಆಗಿದೆ ಎನ್ನುವ ಒಂದೇ ಒಂದು ಕಾರಣದಿಂದ ಐ.ಕೆ. ಗುಜ್ರಾಲ್‌ರವರು ಸರ್ಕಾರಕ್ಕೆ ಕೊಟ್ಟಂತಹ ಸಪೋರ್ಟನ್ನು ಇವರು ವಿತ್‌ಡ್ರಾ ಮಾಡುತ್ತಾರೆ. ಇವತ್ತು ಅದೇ ನೆಡುಮಾರನ್‌ರವರು ರಾಜ್‌ಕುಮಾರ್‌ರವರನ್ನು ಬಿಡಿಸಿದ್ದಾರೆ. ಅವರ ಹೆಸರು ಹೇಳುವುದಕ್ಕೆ ಅವರು ಇಚ್ಛೆಪಡುವುದಿಲ್ಲ. ಮುಖ್ಯ ಮಂತ್ರಿಗಳು ಅವರ ಸ್ಟೇಟ್‌ಮೆಂಟ್‌ನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಆದದ್ದು ಆಗಿ ಹೋಯಿತು ಮುಂದಿನ ಭವಿಷ್ಯದ ಬಗ್ಗೆ ನಾವು ದೃಷ್ಟಿ ಹರಿಸಬೇಕಾಗಿದೆಯೆಂದು. ಈ ಘಟನೆಯಿಂದ ಸೂಕ್ತ ಪಾಠಗಳನ್ನು ಕಲಿಯಬೇಕಾಗಿದೆ. ಸಮಾಜಘಾತುಕ ಶಕ್ತಿಗಳು ರಾಷ್ಟ್ರವಿರೋಧಿ ವಿಚ್ಛಿದ್ರಕಾರಕ ಶಕ್ತಿಗಳು ಸಮಾಜದ ಸ್ವಾಸ್ಥ್ಯ, ಸಮತೋಲನಕ್ಕೆ ಧಕ್ಕೆ ತರದಂತೆ ಎಚ್ಚರಿಕೆಯನ್ನು

ವಹಿಸಬೇಕಾಗಿದೆ. ಈ ಸ್ಟೇಟ್‌ಮೆಂಟನ್ನು ಮಾಡುವಾಗ ನೆಡುಮಾರನ್ ಎಂಬ ಒಬ್ಬ ತಮಿಳುನಾಡು ರಾಷ್ಟ್ರವಾದಿ ನಾಯಕನನ್ನು ಕಾಡಿಗೆ ಕಳುಹಿಸಿ ರಾಜ್‌ಕುಮಾರ್‌ರವರನ್ನು ಬಿಡಿಸಿಕೊಳ್ಳುವಂತಹ ಕಾರ್ಯಕ್ರಮವಿದ್ದರೂ ಕೂಡ ಇವತ್ತು ಸರ್ಕಾರ ಅವರ ಹೆಸರು ಹೇಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದೆ ಏಕೆ? ಕಾಂಗ್ರೆಸ್ ಅಧ್ಯಕ್ಷಿಣಿಯವರು ನೆಡುಮಾರನ್ ಅವರನ್ನು ಕರ್ನಾಟಕ ಸರ್ಕಾರ ಕಳುಹಿಸಿರಲಿಲ್ಲ ಎನ್ನುವ ಒಂದು ವಾದಕ್ಕೆ ಎಲ್ಲಾ ವಾಸ್ತವಾಂಶಗಳನ್ನು ಮುಚ್ಚಿಡುತ್ತಿದ್ದಾರೆ. ಈ ರಾಜ್ಯದ ಜನತೆಗೆ ವಾಸ್ತವಾಂಶವನ್ನು ಮುಚ್ಚಿಟ್ಟು ಇಂತಹವರು ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬಂದರೆಂದು ಮುಖ್ಯಮಂತ್ರಿಗಳು ಹೇಳಲಿಲ್ಲವೆನ್ನುವ ಮಾತನ್ನು ಈ ಸಮಯದಲ್ಲಿ ಹೇಳಬೇಕಾಗುತ್ತದೆ. ವಿರೋಧ ಪಕ್ಷದವರು ಇದರ ಬಗ್ಗೆ ಶ್ವೇತಪತ್ರವನ್ನು ಕೊಡಿಯೆಂದು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಹೋಗಿ ನಿಮ್ಮ ಸರ್ಕಾರ ಬರುತ್ತಿದ್ದ ಹಾಗೆ ನಾವು ಯಾರೂ ಕೇಳಲಿಲ್ಲ ನೀವು ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಶ್ವೇತ ಪತ್ರವನ್ನು ಕೊಟ್ಟರಿ ಸಂತೋಷ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಶ್ವೇತ ಪತ್ರವನ್ನು ಕೇಳಿದರೆ ಕಪ್ಪು ಪತ್ರವನ್ನು ಕೊಡೋಣವಾ ಬ್ಲೂ ಪತ್ರವನ್ನು ಕೊಡೋಣವಾ ಎಂದು ಕೇಳಿದರು. ಕಂಡವರ ಮನೆಯ ಬಾವಿ ಆಳ ಎಷ್ಟೆಂದು ನೋಡುವವರು ನೀವು, ನಿಮ್ಮ ಮನೆಯ ಬಾವಿ ಆಳ ಎಷ್ಟೆಂದು ಮೊದಲು ನೋಡಬೇಕು. ಬೇರೆಯವರ ಮನೆಯ ಬಾವಿ ಆಳವನ್ನು ನೋಡುವುದು ಮುಖ್ಯವಲ್ಲ. ಮೊದಲು ನಿಮ್ಮ ಮನೆಯ ಬಾವಿ ಆಳ ನೋಡುವಂತಹ ಕೆಲಸವನ್ನು ಮಾಡಬೇಕು. ಇದು ಬಹಳ ಮುಖ್ಯ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ. ನನ್ನ ಸ್ನೇಹಿತರೊಬ್ಬರು ತಮಿಳುನಾಡಿನ ವೇಲೂರಿಗೆ ಹೋಗಿದ್ದರು. ಆಗ ಇನ್ನು ರಾಜ್‌ಕುಮಾರ್‌ರವರನ್ನು ಬಿಟ್ಟಿರಲಿಲ್ಲ. ವೇಲೂರಿನಲ್ಲಿ ಸಂಬಂಧದ ಸಾಮಾನ್ಯ ಮನುಷ್ಯನೊಬ್ಬನ ಜೊತೆಯಲ್ಲಿ ಮಾತನಾಡುವಾಗ ವೀರಪ್ಪನ್ ಬಗ್ಗೆ ಹೇಗೆ ಹೇಳಿದರೆಂದು ಹೇಳಿದರು. ತಮಿಳಿನಲ್ಲಿ ಅವರು "ಅವ ವೀರಪ್ಪನ್ ನಮ್ಮ ತಮಿಳ್ ಮಕ್ಕಳ್‌ಕ್ಕಾಗಿ ಕೆಟಿರ್‌ಕ್ಕಾರ್ ಅವನ್‌ಗಾಗಿ ಎದುವುಂ ಕೇಕರಿಲ್ಲೆ" ಎನ್ನುವ ಮಾತನ್ನು ಹೇಳಿದನಂತೆ. ವೀರಪ್ಪನ್ ಡಿಮಾಂಡ್ಸ್ ಏನೆಂದರೆ, ಕಾವೇರಿ ಟ್ರಿಬ್ಯುನಲ್ಸ್ ಮಧ್ಯಂತರ ತೀರ್ಪಿನ ಆದೇಶದ ಪರಿಪಾಲನೆಗೆ ಶಾಶ್ವತವಾದ ಪರಿಹಾರ. 1991ರ ಕಾವೇರಿ ಗಲಾಟೆ, ತಮಿಳು ಭಾಷೆಯನ್ನು ಕರ್ನಾಟಕದಲ್ಲಿ ಎರಡನೆಯ ಭಾಷೆಯೆಂದು ಮಾಡುವುದು, ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆಯನ್ನು ಸ್ಥಾಪನೆ ಮಾಡುವುದು. ಎರಡೂ ರಾಜ್ಯಗಳು ಟಾಸ್ಕ್‌ಫೋರ್ಸ್‌ನಿಂದ ಹಿಡಿದಿಟ್ಟಿರುವ ಅಪರಾಧಿಗಳ ಬಗ್ಗೆ ನೇಮಕವಾದ ಜಸ್ಟೀಸ್ ಸದಾಶಿವ ಆಯೋಗದ ತೀರ್ಪಿನ ಆದೇಶದ ಬಗ್ಗೆ ಇನ್ನು ಏನೇನೋ ಡಿಮಾಂಡ್‌ಗಳು ಆ ಜನಗಳಿಗೆ ಈ ತರಹ ಸಿಗ್ನಲ್ಸ್ ಹೋಗಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ನೀವು ತೆಗೆದುಕೊಂಡ ಕೆಲವು ಕ್ರಮಗಳಿಂದ ಅವರ ಜನಗಳಲ್ಲಿ ಯಾರು ಹಣಕ್ಕಾಗಿ ಜೀವನಕ್ಕೋಸ್ಕರ ಆನೆ ದಂತಗಳನ್ನು ದರೋಡೆ ಮಾಡುತ್ತಿದ್ದರೋ ಶ್ರೀ ಗಂಧದ ಮರಗಳನ್ನು ಕಡಿದು ಕಳ್ಳಸಾಗಾಣಿಕೆ ಮಾಡುತ್ತಿದ್ದರೋ ಅಂತಹ ಒಬ್ಬ ಕ್ರಿಮಿನಲ್ ಈ ಸಿಗ್ನಲ್ಸ್ ಕೊಡುವಂತಹ

ಸ್ಥಿತಿಗೆ ತಂದಿದ್ದೇವೆಂದರೆ ಎಂಥೆಂಥವರನ್ನು ಬಲಿ ತೆಗೆದುಕೊಂಡಿದ್ದಾನೆಂದರೆ, ನಮ್ಮ ಕೋಲಾರ ಜಿಲ್ಲೆಗೆ ಒಬ್ಬ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಹರಿಕೃಷ್ಣ ಎಂಬುವರು ಬಂದಿದ್ದರು. ಅವರು ನನ್ನ ಸ್ನೇಹಿತರಿದ್ದರು. ಅವರು ಕೋಲಾರ ಜಿಲ್ಲೆಗೆ ಎಸ್‌ಪಿ ಆಗಿ ಹೋಗುವಾಗ ಹೇಳಿದೆ, ವೀರಪ್ಪ ಒಬ್ಬ ಕ್ರಿಮಿನಲ್ ಇದ್ದಾನೆ ನೋಡಿ ಎಂದು. ಅವರು ಒಂದು ಮಾತನ್ನು ಹೇಳಿದರು. ನೋಡಿ ಶ್ರೀನಿವಾಸಗೌಡರೇ, ನಾನು ಆರ್ಮಿಯಿಂದ ಬಂದಿದ್ದೇನೆ, ನನಗೆ ನನ್ನ ಜೀವದ ಮೇಲೆ ಏನೂ ಆಸೆಯಿಲ್ಲ, ನಾನು ವೀರಪ್ಪನ್‌ನನ್ನು ಜೀವಸಹಿತ ಹಿಡಿದರೆ ಅಥವಾ ಅವನನ್ನು ಸಾಯಿಸಿದರೆ ಅದೇ ಸಾಕೆಂದು ನೇರವಾಗಿ ಹೇಳುತ್ತಿದ್ದರು. ಅಂತಹವರನ್ನು ಸಾಯಿಸಿದರು. ಶಕೀಲ್ ಅಹ್ಮದ್ ಎಂಬ ಪೋಲೀಸ್ ಅಧಿಕಾರಿಯನ್ನು ಸಾಯಿಸಿದಂತಹ ವೀರಪ್ಪನನ್ನು ಹಿಡಿಯುವದಕ್ಕೆ ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಅವನನ್ನು ಹಿಡಿಯಲಿಕ್ಕೆ ಯಾವ ತಂತ್ರಗಳನ್ನು ಹೂಡಬೇಕೋ ಆ ತಂತ್ರಗಳನ್ನು ಹೂಡಿಲ್ಲ. ಆದರಲ್ಲೂ ಸುಪ್ರೀಂ ಕೋರ್ಟ್ ಕರ್ನಾಟಕ ಸರ್ಕಾರಕ್ಕೆ ಛೀಮಾರಿ ಹಾಕಿದೆ. ನಾನು ಕೆಲವು ಉದಾಹರಣೆಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ಉಚ್ಚ ನ್ಯಾಯಾಲಯ, ಶ್ರೇಷ್ಠ ನಾಯ್ಯಾಲಯ ಛೀಮಾರಿ ಹಾಕಿದಾಗ ಬಾಟ್ಲಿಂಗ್ ಹಗರಣದಲ್ಲಿ ರಾಮಕೃಷ್ಣ ಹೆಗಡೆಯವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಫೋನ್ ಟ್ಯಾಪಿಂಗ್‌ನಲ್ಲಿ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರೀಯವರು ಎಲ್ಲಿಯೋ ರೈಲು ಆಕ್ಸಿಡೆಂಟ್ ಆದಾಗ ಮಾರಲ್ ರೆಸ್ಪಾನ್ಸಿಬಿಲಿಟಿಯಿಂದ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಇವತ್ತು ಸುಪ್ರೀಂ ಕೋರ್ಟ್‌ನವರು ಛೀಮಾರಿ ಹಾಕಿದರೂ ಕೂಡ ಈ ಸರ್ಕಾರ ರಾಜೀನಾಮೆಯನ್ನು ಕೊಡಲಿಲ್ಲ. ಇದನ್ನು ಬಂಡು ಸರ್ಕಾರ ಅಥವಾ ಕಿವಿಯಿಲ್ಲದ ಸರ್ಕಾರವೆಂದು ಹೇಳಲೇ. ಯಾವುದೇ ಕೋರ್ಟ್ ಛೀಮಾರಿಯನ್ನು ಹಾಕಿದರೆ ನೇರವಾಗಿ ರಾಜೀನಾಮೆಯನ್ನು ಕೊಡಬೇಕು. ನಿಮ್ಮ ಸರ್ಕಾರಕ್ಕೆ ಕೋರ್ಟ್ ಛೀಮಾರಿ ಹಾಕಿತ್ತು ಎಂದು ನೀವು ಹೇಳಬಹುದು. ನೀವು ಇವತ್ತು ಅಧಿಕಾರದಲ್ಲಿ ಇದ್ದಿದ್ದರೆ ನಮ್ಮ ಸರ್ಕಾರ ರಾಜೀನಾಮೆ ಕೊಡಬೇಕಾಗಿತ್ತು. ಇದರಲ್ಲಿ ಎರಡನೆಯ ಮಾತಿಲ್ಲ. ವೀರಪ್ಪನ್ ಹಿಡಿಯುವ ವಿಚಾರದಲ್ಲಿ ತಮಿಳುನಾಡು ಮತ್ತು ಕರ್ನಾಟಕ ಎರಡೂ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿದೆ. ರಾಜ್ಯಗಳ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಕೊಟ್ಟು ಹೋಗಿಯೊಂದು ಹೇಳಿದ್ದಾರೆ. ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಛೀಮಾರಿ ಹಾಕಿದ್ದಾರೆ. ಈ ಸರ್ಕಾರ ರಾಜೀನಾಮೆಯನ್ನು ಕೊಡುವುದಲ್ಲ, ಅದರ ಬಗ್ಗೆ ಯೋಚನೆ ಕೂಡ ಮಾಡುವುದಕ್ಕೆ ಹೋಗಿಲ್ಲವೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ವೀರಪ್ಪನನ್ನು ಹಿಡಿಯುವುದಕ್ಕೂ ಬಹಳಷ್ಟು ತಂತ್ರಗಳನ್ನು ಮಾಡಬೇಕು. ರಾಜ್ ಕುಮಾರ್‌ರವರನ್ನು ವೀರಪ್ಪನ್ ಹಿಡಿದುಕೊಂಡು ಹೋದಮೇಲೆ ಎಲ್ಲಿ ನೋಡಿದರೂ ಮಂತ್ರಗಳು, ಎಲ್ಲಿ ನೋಡಿದರೂ ದೇವಾಲಯಗಳಲ್ಲಿ ಉರುಳುಸೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ದೇವಾಸ್ಥಾನಕ್ಕೆ ಹೋಗಿದ್ದರು. ಮಂತ್ರಕ್ಕೆ ಮಾವಿನಕಾಯಿ ಬೀಳುವುದಿಲ್ಲ. ಮರಹತ್ತಿ ಕೀಳಬೇಕು, ಇಲ್ಲ ಕಲ್ಲು ತೆಗೆದುಕೊಂಡು ಹೊಡೆದು ಬೀಳಿಸಬೇಕು. ಎಲ್ಲರೂ

ದೇವಸ್ಥಾನಕ್ಕೆ ಹೋಗಿದ್ದು ಹೋಗಲಿ, ಮುಖ್ಯಮಂತ್ರಿಗಳು ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಿ ಪೂಜೆ ಮಾಡಿಸಿದರು. ಸ್ವಾಮಿ 21ನೇ ಶತಮಾನದಲ್ಲಿ ನಾವಿದ್ದೇವೆ. ಆದರಲ್ಲೂ ನಮ್ಮ ಮುಖ್ಯ ಮಂತ್ರಿಗಳು ಹೈಟೆಕ್ ಮುಖ್ಯ ಮಂತ್ರಿಗಳು.

ಶ್ರೀ ಎಂ. ಮಹದೇವ್ (ರೇಷ್ಮೆ, ಜವಳಿ ಸಚಿವರು) :— ಮಲೆಮಹದೇಶ್ವರ ಅವರ ಆರಾಧ್ಯ ದೇವರು. ಅವರು ಯಾವಾಗಲೂ ಅಲ್ಲಿಗೆ ಪೂಜೆ ಮಾಡಿಸುವುದಕ್ಕೆ ಹೋಗುತ್ತಿರುತ್ತಾರೆ.

ಶ್ರೀ ಕೆ. ಶ್ರೀನಿವಾಸ ಗೌಡ :— ವೀರಪ್ಪನ್‌ಗೂ ಕೂಡ ಅದೇ ಆರಾಧ್ಯ ದೇವರು. ಅಲ್ಲಿ ಏನಾದರೂ ಇಬ್ಬರಿಗೂ ಚರ್ಚೆ ನಡೆಯುತ್ತಿದೆಯೇ? ಇದನ್ನು ಹೇಳುವವರು ಅದನ್ನು ಹೇಳಬೇಕಾಗಿತ್ತು.

ಶ್ರೀ ಸಿ.ಎಂ. ಲಿಂಗಪ್ಪ :— ಮಲೆಮಹದೇಶ್ವರ ಅವರಿಬ್ಬರಿಗೆ ಮಾತ್ರ ದೇವರಲ್ಲ. ಲಕ್ಷಾಂತರ ಜನಗಳಿಗೆ ಆರಾಧ್ಯ ದೈವ. ಅದರಲ್ಲಿ ಇವರಿಬ್ಬರೂ ಇರಬಹುದು. ವೀರಪ್ಪನಿಗೆ ಅದೇ ಧೇವರು ಇರಬಹುದು ಎನ್ನುವುದು ತಮಗೆ ಗೊತ್ತಿದೆ. ಆದರೆ ಮುಖ್ಯ ಮಂತ್ರಿಗಳಿಗೆ ಅವರ ಮನೆತನದ ದೇವರು ಮಲೆಮಹದೇಶ್ವರ.

ಶ್ರೀ ಕೆ. ಶ್ರೀನಿವಾಸ ಗೌಡ :— ಉಪಾಧ್ಯಕ್ಷರೇ, ನನ್ನ ಪಾಯಿಂಟ್ ಅದಲ್ಲ. 21ನೇ ಶತಮಾನದಲ್ಲಿ ಇವತ್ತು ಕಂಪ್ಯೂಟರ್ ಯುಗದ ಬಗ್ಗೆ ಹೇಳುವಂಥ ಒಬ್ಬ ಮುಖ್ಯ ಮಂತ್ರಿ ಇವತ್ತು ಯಾವ ನಂಬಿಕೆಗಳಿಗೆ ಒಳಗಾಗಿದ್ದಾರೆ ಎಂಬುದು ಇಲ್ಲಿಯ ಪ್ರಶ್ನೆ. ನಾನು ಕೂಡ ಪೂಜೆ ಮಾಡುತ್ತೇನೆ, ದೇವರ ಮೇಲೆ ನನಗೂ ನಂಬಿಕೆ ಇದೆ. ಆದರೆ ವೀರಪ್ಪನ್‌ನಿಂದ ರಾಜ್ ಕುಮಾರ್ ಅವರ ಬಿಡುಗಡೆಗೋಸ್ಕರ ಪೂಜೆ ಮಾಡಿಸಿದ್ದು ತಪ್ಪು ಎಂದು ನಾನು ಹೇಳುತ್ತಿರುವುದು. ಅದು ಪತ್ರಿಕೆಗಳಲ್ಲಿ ಬಂದಿದೆ...

*(ಗೊಂದಲ - ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)*

ಶ್ರೀ ಕೆ. ಶ್ರೀನಿವಾಸಗೌಡ :— ಇದು ಇದ್ದದ್ದು ಇದ್ದಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದ ಎಂದು ಹೇಳಿದ ಹಾಗೆ ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಉಪಾಧ್ಯಕ್ಷರೇ ಅವರು ಏಕೆ ಪ್ರಸ್ತಾಪ ಮಾಡಿದರು ಎಂದರೆ ಮಲೆಮಹದೇಶ್ವರ ಎಲ್ಲರಿಗೂ ಬೇಕಾದ ದೇವರು. ಇದರಲ್ಲಿ ಅನುಮಾನ ಇಲ್ಲ. ನನ್ನ ಆದಿಯಾಗಿ ಎಲ್ಲರಿಗೂ ಮಹದೇಶ್ವರ ದೇವರು ಬೇಕು. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೋದಂಥ ಸಂದರ್ಭ ಯಾವುದು ಎಂದರೆ ಯಾವಾಗ ರಾಜ್‌ಕುಮಾರ್ ಅವರನ್ನು ಆತ ಸೆರೆಹಿಡಿದನೋ ಆದರ ಮರುದಿವಸವೇ

ಅವರು ಮಹದೇಶ್ವರ ಬೆಟ್ಟಕ್ಕೆ ಹೋಗಿ ಅಲ್ಲಿ ಪೂಜೆ ಮಾಡಿಸಿಕೊಂಡು ಬಂದು ಸೀದಾ ರಾಜ್‌ಕುಮಾರ್ ಅವರ ಮನೆಗೆ ಹೋಗಿ ಪ್ರಸಾದ ಕೊಟ್ಟು ಬಂದರಲ್ಲ, ಅದು ಜನರ ಮೇಲೆ ಏನು ಪರಿಣಾಮ ಬೀರುತ್ತದೆ? ಓಹೋ, ಈ ಸರ್ಕಾರ ದೇವರ ಮೇಲೆ ಪೂರ್ತಿಯಾಗಿ ಅವಲಂಬನೆ ಮಾಡಿದೆ ಎನ್ನುವ ಭಾವನೆ ಇದರಿಂದ ಬರುವ ಹಾಗೆ ಆಯಿತು. ಆ ವಿಚಾರದಲ್ಲಿ ಅವರು ಮಾತನಾಡಿದರು.

ಶ್ರೀ ಎಂ. ಮಹದೇವ್ :— ಅವರು ದೈವಭಕ್ತರು. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಪ್ರಸಾದ ಕೊಟ್ಟರೆ ಅದು ತಪ್ಪಾಗುತ್ತದೆಯೇ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಇಲ್ಲಿ ಒಬ್ಬರದ್ದು ಬಣ್ಣ ಬಯಲಾಗಿದ್ದು ಎಂದರೆ ಜ್ಯೋತಿಷ್ಯ ಹೇಳುವವರದ್ದು. ರಾಜ್‌ಕುಮಾರ್ ಅವರು 26 ದಿವಸದಲ್ಲಿ ಬಿಡುಗಡೆಯಾಗುತ್ತಾರೆ, 40 ದಿವಸಗಳಲ್ಲಿ ಬಿಡುಗಡೆಯಾಗುತ್ತಾರೆ ಎಂದು ಹೇಳಿದವರ ಬಂಡವಾಳ ಎಲ್ಲ ಹೊರಗಡೆ ಬಂದುಬಿಟ್ಟಿತು.

ಶ್ರೀ ವಿ. ಸೋಮಣ್ಣ :— ಮಾನ್ಯ ಶ್ರೀನಿವಾಸಗೌಡರು ಅರ್ಥಮಾಡಿಕೊಳ್ಳಬೇಕು. ಇಡೀ ರಾಷ್ಟ್ರದಲ್ಲಿ ಅತ್ಯಂತ ಸೂಕ್ಷ್ಮವಾದ ವಿಚಾರ ಯಾವ ಸರ್ಕಾರಕ್ಕೆ ಬಂದಿತು ಎಂದರೆ ಅದು ಎಸ್.ಎಂ. ಕೃಷ್ಣ ಅವರ ನಾಯಕತ್ವದ ಸರ್ಕಾರಕ್ಕೆ. ಇಂತಹ ಸೂಕ್ಷ್ಮವಾದ ವಿಚಾರವನ್ನು ಎಲ್ಲೋ ಒಂದು ಕಡೆ ಸರಿಮಾಡಬೇಕದ ಪರಿಸ್ಥಿತಿಯಲ್ಲಿ ಈ ರಾಷ್ಟ್ರದ ಸಂಪ್ರದಾಯ ಏನಿದೆ, ನಮ್ಮ ಪರಂಪರೆ ಏನಿದೆ, ಇತಿಹಾಸ ಏನಿದೆ, ಅದರ ಮೇಲೆ ನಾವೆಲ್ಲ ಮುಂದುವರೆದುಕೊಂಡು ಬಂದಿರತಕ್ಕದ್ದು. ಯಾವುದಾದರೂ ಒಂದು ಸಣ್ಣ ಕ್ಷುಲಕ ವಿಚಾರ ಬಂದೊದಗಿದಾಗಲೂ ಕೂಡ ರಾಜ್ಯದಲ್ಲಿ ಆಗಿರತಕ್ಕಂಥ ಅನೇಕ ಅನಾಹುತಗಳನ್ನು, ಘಟನೆಗಳನ್ನು ನೀವು ಯೋಚನೆ ಮಾಡಬೇಕಾಗುತತ್ತದೆ. ರಾಜ್‌ಕುಮಾರ್ ಅವರಂಥ ರಾಷ್ಟ್ರದ ಒಬ್ಬ ಒಳ್ಳೆಯ ಕಲಾವಿದನನ್ನು ಅಪಹರಣ ಮಾಡಿದಾಗಲೂ ಕೂಡ ಇಡೀ ರಾಜ್ಯದ ಜನತೆ ಮುಖ್ಯಮಂತ್ರಿಗಳ ಮಾತಿಗೆ ಬೆಲೆ ಕೊಟ್ಟು ರಾಜ್ಯದಲ್ಲಿ ಶಾಂತಿ, ನೆಮ್ಮದಿ ನೆಲೆಸುವುದಕ್ಕೆ ಕಾರಣಕರ್ತರಾಗಿರತಕ್ಕವರು ಯಾವುದೋ ದೇವಸ್ಥಾನಕ್ಕೆ ಹೋದರು ಅಂತ ಅಲ್ಲ. ಮಹದೇಶ್ವರ ಬೆಟ್ಟ ಇತಿಹಾಸ ಪ್ರಸಿದ್ಧವಾದದ್ದು. ಕರ್ನಾಟಕದಲ್ಲಿ ಧರ್ಮಸ್ಥಳ ಹೇಗೋ, ತಿರುಪತಿ ಹೇಗೋ, ಹಾಗೆ ಮಹದೇಶ್ವರ ಬೆಟ್ಟ ಕೂಡ. ಶ್ರೀನಿವಾಸಗೌಡರು ವರ್ಷದಲ್ಲಿ ಎಷ್ಟು ಸಾರಿ ತಿರುಪತಿಗೆ ಹೋಗುತ್ತಾರೋ ಗೊತ್ತಿಲ್ಲ. ಆದರೆ ಒಂದು ಸತ್ಯ. ನಮ್ಮ ಪರಂಪರೆ ಏನಿದೆ, ನಮ್ಮ ಸಂಸ್ಕೃತಿ ಏನಿದೆ, ಆ ಸಂಸ್ಕೃತಿಯನ್ನು ಪ್ರತಿಬಿಂಬಿಸತಕ್ಕಂಥ ಕೆಲಸದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಇಂತಹ ಸೂಕ್ಷ್ಮವಾದ ವಿಚಾರದಲ್ಲಿ ಕೂಡ ರಾಷ್ಟ್ರದ ಜನತೆಯ ಮನಸ್ಸನ್ನು ಗೆಲ್ಲತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿದ್ದಕ್ಕಾಗಿ ನಾವೆಲ್ಲರೂ ಕೂಡ ಅವರನ್ನು ಅಭಿನಂದಿಸಬೇಕಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಉಪಾಧ್ಯಕ್ಷರೇ, ದೇವರ ಮೇಲೆ ಭಕ್ತಿ ಇಲ್ಲವೆಂದು ಅವರು ಹೇಳಲಿಲ್ಲ. ನನಗೂ ಕೂಡ ಭಕ್ತಿ ಇದೆಯೆಂದು ಅವರು ಹೇಳಿದರು.

ನಾವೆಲ್ಲರೂ ದೇವರ ಮೇಲೆ ಭಕ್ತಿಯನ್ನು ಇಟ್ಟುಕೊಂಡಿದ್ದೇವೆ. ಶ್ರೀನಿವಾಸಗೌಡರು ಪ್ರಸ್ತಾಪ ಮಾಡಿದ್ದು ಏನೆಂದರೆ ಮೂಢಭಕ್ತಿ ಇರಬಾರದು, ಮುಗ್ಧ ಭಕ್ತಿ ಇರಬೇಕು ಎಂದು. ಬೇಡರ ಕಣ್ಣಪ್ಪನ ಭಕ್ತಿಯನ್ನು ಇಟ್ಟರೆ ತಪ್ಪೇನೂ ಅಲ್ಲ. ಆದರೆ ಮೂಢಭಕ್ತಿ ಇರಕೂಡದು. ಆದರೆ ಇವರು ಮಂತ್ರಿಮಂಡಲ ರಚನೆಯಾದಾಗಿನಿಂದ ನಡೆದುಕೊಂಡುಬಂದ ದಾರಿಯನ್ನು ನೋಡಿದರೆ ಯಾರಾದರೂ ಜ್ಯೋತಿಷಿಗಳು ಬಂದು ಇಲ್ಲಿ ವಿಧಾನಸೌಧದ ಬಾಗಿಲನ್ನು ಇತ್ತಕಡೆ ಹಚ್ಚಿರಿ ಎಂದು ಹೇಳಿ, ಹೀಗೆ ಮಾಡಿದರೆ ನಿಮ್ಮ ಸರ್ಕಾರ ಕಾಯಂ ಆಗಿ ಉಳಿಯುತ್ತದೆ ಎಂದರೆ ಅದನ್ನೂ ಮಾಡುವುದಕ್ಕೆ ಇವರು ತಯಾರಾಗಿದ್ದಾರೆ. ಆ ದೃಷ್ಟಿಯಿಂದ ಅವರು ಹೇಳಿದ್ದು. ಅಂತಹ ಭಕ್ತಿ ಇರಬಾರದು.

ಶ್ರೀ ಎಂ. ಮಹದೇವ್ :— ಮೂಢಭಕ್ತಿಯನ್ನು ನಾವು ಇಟ್ಟುಕೊಂಡಿದ್ದೇವೆ, ಆಧುನಿಕ ಭಕ್ತಿಯನ್ನು ನೀವು ಇಟ್ಟುಕೊಂಡಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ :— ಸಮಾಜದಲ್ಲಿ ನಂಬಿಕೆಯಿಟ್ಟವರು ಮುಖ್ಯಮಂತ್ರಿಗಳಾದ ಕೂಡಲೇ ಅಯ್ಯಪ್ಪನ ಯಾತ್ರೆಗೆ ಜತೆಯಲ್ಲಿ ಹೋಗಿ ಉಘೋ ಉಘೋ ಎಂದು ಬಂದಿರಲ್ಲ, ಆದಕ್ಕೆ ಏನು ಹೇಳುತ್ತೀರಿ?

ಶ್ರೀ ಕೆ. ಶ್ರೀನಿವಾಸಗೌಡ :— ನೀವು ಸಮಾಜವಾದದಿಂದ ಬಂದವರು, ನಾನು ಕೂಡ ಸಮಾಜವಾದದಿಂದ ಬಂದಿದ್ದೇನೆ. ಈ ರೈಟಿಸ್ಟ್ ಥಿಂಕಿಂಗ್‌ನ್ನು ಸ್ವಲ್ಪ ಬದಲಾವಣೆ ಮಾಡಿದರೆ ಆವಾಗ ಅದು ಕ್ರಾಂತಿಯಾಗುತ್ತದೆ. ಯಾವ ಸಮಾಜವಾದ ಈ ದೇಶದಲ್ಲಿ, ಈ ಪ್ರಪಂಚದಲ್ಲಿ ಕಡೆಗಣಿಸುತ್ತಾ ಬಂದಿದೆ ಎಂದರೆ ಅದಕ್ಕೆ ಇದೇ ಕಾರಣ ಯಾವಾಗ ರೈಟಿಸ್ಟ್ ಥಿಂಕಿಂಗ್‌ನ್ನು ಲೆಫ್ಟಿಸ್ಟ್ ಥಿಂಕಿಂಗ್‌ಗೆ ಸ್ವಲ್ಪ ಮಾರ್ಪಾಡು ಮಾಡಿದರೆ ಅದೇ ಒಂದು ಕ್ರಾಂತಿಯಾಗಿ ಕಾಣಿಸುವಂತಾದರೆ, ಅದನ್ನು ಇವತ್ತು ಸಮಾಜವಾದವೆಂದು ತೃಪ್ತಿಪಡುವಂಥ ಪರಿಸ್ಥಿತಿಗೆ ನಾವು ಎಲ್ಲರೂ ಬಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಚಂದ್ರಕಾಂತ್ ಬೆಲ್ಲದ್ ಅವರ ಮನೆಗೆ ಹೋದರೆ ಬಸವಣ್ಣನವರ ಫೋಟೊ ಬಿಟ್ಟರೆ ಬೇರೆ ಒಂದು ಕೂಡ ದೇವರ ಫೋಟೋ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ನನಗೆ ದೇವರ ಮೇಲೆ ಭಕ್ತಿ ಇದೆಯೆಂದು ಹೇಳಿಕೊಂಡೇ ನಾನು ಪ್ರಾರಂಭ ಮಾಡಿದೆ. ಮುಖ್ಯಮಂತ್ರಿಗಳ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ ಅವರು ಇವತ್ತು ಕಂಪ್ಯೂಟರ್ ಯುಗದಲ್ಲಿ ಹೋಗುತ್ತಾ ಇರತಕ್ಕಂಥ ಮನುಷ್ಯ ಮತ್ತು ಅವರು 22ನೇ ಶತಮಾನದ ಬಗ್ಗೆ ಯೋಚನೆ ಮಾಡಬೇಕು. ಅವರು ಯೋಚನೆ ಮಾಡಬೇಕಾದದ್ದು 16 ಅಥವಾ 19ನೇ ಶತಮಾನದ ಬಗ್ಗೆ ಅಲ್ಲ. ಇಲ್ಲದಿದ್ದರೆ ಕಂಪ್ಯೂಟರ್ ಬಗ್ಗೆ ಅವರು ಏನು ಮಾತನಾಡುತ್ತಿದ್ದಾರೆ ಅದು ಬಿಟ್ಟು ನಾನು ಹೈಟೆಕ್ ಮುಖ್ಯಮಂತ್ರಿ ಎಂದು ಹೇಳುವಂಥ ಕೆಲಸವನ್ನೇ ಮಾಡಬಾರದು.

ಶ್ರೀ ಕಾಗೋಡು ತಿಮ್ಮಪ್ಪ :— ಕಂಪ್ಯೂಟರ್‌ಗೂ, ಈ ಚರ್ಚೆಗೂ ಏನು ಸಂಬಂಧ? ಅಮೇರಿಕಾದಲ್ಲಿ ಜನರು ಚರ್ಚಿಗೆ ಹೋಗುವುದಿಲ್ಲರೇಯ ಜಪಾನದಲ್ಲಿ ಜನರು ದೇವಸ್ಥಾನಕ್ಕೆ ಹೋಗುವುದಿಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ :— ಅಲ್ಲಿ ನೂರಕ್ಕೆ ನೂರು ಭಾಗ ವಿದ್ಯಾವಂತರ ಇದ್ದಾರೆ. ಆದರೆ ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತೈದು ಭಾಗದಷ್ಟು ಅವಿದ್ಯಾವಂತರು ಇದ್ದಾರೆ. ಹಾಗಾದರೆ ಇವತ್ತೂ ಕೂಡ ನಾವು ಮೂಢ ನಂಬಿಕೆಯನ್ನು ಇಟ್ಟುಕೊಳ್ಳಬೇಕೇನು? ಇವತ್ತು ಕೂಡ ಹಜಾಮ ಕೆಲಸ ಮಾಡುವವರು ಹಜಾಮರಾಗಿಯೇ ಇರಬೇಕಾ? ಯಾರು ಬಟ್ಟೆ ಒಗೆಯುತ್ತಾರೆ ಅವರು ಬಟ್ಟೆ ಒಗೆಯುತ್ತಲೇ ಇರಬೇಕಾ ಈ ದೇಶದಲ್ಲಿ?

ಶ್ರೀ ಯು.ಆರ್. ಸಭಾಪತಿ :— ಗೌಡರೇ, ಒಂದು ನಿಮಿಷ. ಕಂಪ್ಯೂಟರ್ ಯುಗಕ್ಕೂ, ದೇವರು, ದೇವಸ್ಥಾನಕ್ಕೂ, ಮುಖ್ಯಮಂತ್ರಿಗಳಿಗೂ ಏನು ಸಂಬಂಧ ಎಂದು ನನಗೆ ಅರ್ಥವಾಗುತ್ತಿಲ್ಲ. ಕಂಪ್ಯೂಟರ್ ಇರಲಿ ಏನೇ ಉಪಯೋಗ ಮಾಡಲಿ, ದೈವಿಕವಾದಂಥ ಮನೋಭಾವನೆ ಈ ಸೃಷ್ಟಿಯಲ್ಲಿ ಬಂದಂಥ ಪ್ರತಿಯೊಬ್ಬ ಮನುಷ್ಯನಲ್ಲೂ ಇದೆ. ಆ ಪ್ರಕಾರ ಪ್ರತಿಯೊಬ್ಬರೂ ದೇವಸ್ಥಾನ, ದೇವಲಯಕ್ಕೆ ಹೋಗಿ ಬರುತ್ತಿದ್ದಾರೆ. ಆದೇ ರೀತಿ ಅವರು ಪೂಜೆಯನ್ನು ಅಳವಡಿಸಿಕೊಳ್ಳುತ್ತಾರೆ. ದೇವಸ್ಥಾನಕ್ಕೆ ಹೋಗಿ ಕಂಪ್ಯೂಟರ್ ಅಳವಡಿಕೆ ಮಾಡಬೇಡಿ ಎಂದರೆ ನೀವು ಸುಮ್ಮನೆ ವಿರೋಧಕ್ಕಾಗಿ ವಿರೋಧ ಮಾಡುತ್ತಿದ್ದೀರಿ, ಅಷ್ಟೇ ವಿನಹ ಇದನ್ನು ತಮಾಷೆ, ಗೇಲಿ ಮಾಡಬೇಡಿ ನೀವು ಪರಿವರ್ತಿಸಬೇಡಿ. ಇವತ್ತು ಇಡೀ ದೇಶವನ್ನು ಬೆರಗುಗೊಳಿಸುವ ರೀತಿಯಲ್ಲಿ ಈ ಮೂರು ತಿಂಗಳು ಕಾಲ ರಾಜ್ಯವನ್ನು ಶಾಂತಿಯುತವಾಗಿ ತೆಗೆದುಕೊಂಡು ಹೋದ ಮುಖ್ಯಮಂತ್ರಿಗಳ ಕಾರ್ಯಕಲಾಪ ಏನಿದೆ ಅದನ್ನು ಮೆಚ್ಚಿಕೊಳ್ಳತಕ್ಕಂಥ ಮಾತನ್ನು ನೀವು ಆಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ :— ರಾಜ್‌ಕುಮಾರ್ ಅವರ ಬಿಡುಗಡೆಯಾದ ಕೂಡಲೇ ನಾನು ಮುಖ್ಯಮಂತ್ರಿಗಳ ಮುಖದ ಮೇಲೆ ನಗುವಿನ ಹೂವು ಅರಳಿದೆ ಎಂದ ಹೇಳಿದ್ದೇನೆ. ನಾವು ಕೂಡ ಆ ಸಂತೋಷದಲ್ಲಿ ಭಾಗಿಯಾಗಿದ್ದೇವೆ. ಆದರೆ ಇವತ್ತು ಇದರ ಹಿನ್ನಲೆಗಳನ್ನು ನಾವು ಯೋಚನೆ ಮಾಡಬೇಕಾಗಿದೆ. ಅವರೇ ಹೇಳಿದ್ದಾರೆ ಮುಂದೆ ನಾವ ಏನು ಮಾಡಬೇಕು, ನಮ್ಮ ದೃಷ್ಟಿಯನ್ನು ಎಲ್ಲಿ ಹಾಯಿಸಬೇಕು ಎಂದು. ಇವತ್ತು ರಾಜ್ ಕುಮಾರ್ ಅವರ ಅಪಹರಣ ಆದಮೇಲೆ ನಾರಾಯಣ್ ಭಟ್ ಅವರನ್ನು ಕೋಲಾರದಲ್ಲಿ ಕಿಡ್ ನ್ಯಾಪ್ ಮಾಡಿದರು. ಇದಕ್ಕೆ ಯಾರ ಬೆಂಬಲ? ಇದಕ್ಕೆ ವೀರಪ್ಪನ್ ಪ್ರಚೋದನೆಯಲ್ಲವೆ? ಹೀಗಿರುವಾಗ ರಾಜ್ ಕುಮಾರ್ ಅಂತ ದೊಡ್ಡ ಮನುಷ್ಯರನ್ನು ಆತ ಹಿಡಿದುಕೊಂಡು ಹೋದರೆ, ನಮಸ್ತೆ ಗ್ರೂಪ್‌ನ ಮಾಲೀಕರಾದ ನಾರಾಯಣ್‌ಭಟ್ ಅವರನ್ನು ಇವರು ಹಿಡಿದುಕೊಂಡು ಹೋದರು. ಆಮೇಲೆ ಬೆಂಗಳೂರಿನಲ್ಲಿ 108 ದಿವಸಗಳಲ್ಲಿ 30 ಕೊಲೆಗಳಾದವು. ದೀಪಕ್ ಎನ್ನುವ ಮಗುವನ್ನು ಅಪಹರಣ ಮಾಡಿ ಸಾಯಿಸಿದರು. ಇದೆಲ್ಲ ಹೇಗೆ ಆಯಿತು? ಇದಕ್ಕೆ ಯಾರು ಪ್ರೇರಣೆ ಕೊಟ್ಟಿದ್ದು? ಈ ಅಪಹರಣ ತಂತ್ರವನ್ನು ಯಾರು ವೀರಪ್ಪನ್ ಹೂಡಿದ್ದಾನೆ, ಅದೇ ಇದಕ್ಕೆಲ್ಲ ಕಾರಣ. ನಾನು ಮತ್ತೆ ಹೇಳುತ್ತಿದ್ದೇನೆ. ದೇವರ ಮೇಲೆ ನನಗೆ ನಂಬಿಕೆ ಇದೆ, ನಾನು ಇಲ್ಲವೆಂದು ಹೇಳಲಿಲ್ಲ.

ಆದರೆ ಯಾವ ವಿಷಯವನ್ನು ದೇವರಿಗೆ ತೆಗೆದುಕೊಂಡು ಹೋಗಬೇಕು? ಇದು ಬೀಜ ಮೊದಲು ಹುಟ್ಟಿತ್ತೋ, ಅಥವಾ ಗಿಡ ಮೊದಲು ಹುಟ್ಟಿತ್ತೋ ಎಂದು ಕೇಳಿದರೆ ಯಾರೂ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಒಬ್ಬ ಸೃಷ್ಟಿಕರ್ತ ಅಂತ ಇದ್ದಾನೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಎಲ್ಲ ಧರ್ಮಗಳೂ ಇದನ್ನು ಒಪ್ಪುತ್ತವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಅಮೇರಿಕಾ ಬಗ್ಗೆ ಹೇಳಿದರು. ನೂರಕ್ಕೆ ನೂರರಷ್ಟು ವಿದ್ಯಾವಂತರು ಇರುವ ದೇಶದಲ್ಲಿ ಅಲ್ಲಿ ಹೇಗೆ ಬೇಕಾದರೂ ನಡೆಯುತ್ತದೆ. ಇವತ್ತು ನಮ್ಮಲ್ಲಿ ಶೇಕಡಾ 65 ರಿಂದ 70 ರಷ್ಟು ಅವಿದ್ಯಾವಂತರಿದ್ದಾರೆ. ಇವತ್ತಿಗೂ ಮೂಢನಂಬಿಕೆಗಳು ಇವೆ. ಈಗತಾನೇ ಮಾನ್ಯ ಸಿಂಧ್ಯರವರು ಹೇಳಿದರು, ಏನೆಂದರೆ ಒಬ್ಬ ಹರಿಜನ ಹೆಣ್ಣುಮಗಳನ್ನು ಬೆತ್ತಲೆ ಎಂದರೆ ಲಂಗ ಮತ್ತು ಕುಪ್ಪಸದಲ್ಲಿ ನಿಲ್ಲಿಸಿದರು ಅಂತ. ಇವತ್ತು 21ನೇ ಶತಮಾನದಲ್ಲಿ ಕಾಲಿಟ್ಟಿರತಕ್ಕಂಥ ಈ ದೇಶದಲ್ಲಿ ನಾವು ತಲೆಯೆತ್ತಬೇಕೆ ಅಥವಾ ತಲೆತಗ್ಗಿಸಬೇಕೆ? ಇಂಥಾದ್ದನ್ನು ತಡೆಯುವ ಬಗ್ಗೆ ನಾವು ಚಿಂತನೆ ಮಾಡಬೇಕು. ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕಾದಂಥ ಕಾಲ ಇದಾಗಿದೆ. ಇವತ್ತು ಮೌಲ್ಯಗಳು ಮತ್ತು ಆರ್ಥಿಕ ಹಾಗೂ ಸಾಮಾಜಿಕ ಅಸ್ತಿತ್ವ ಮನುಷ್ಯ ನಿರ್ಮಿತವಾದ ವಸ್ತುಗಳ ಮೇಲೆ ಆಧಾರಪಟ್ಟಿದ್ದೇವೆಯೇ ಹೊರತು ಅವುಗಳು ನಮ್ಮ ಮೇಲೆ ಆಧಾರಪಟ್ಟಿಲ್ಲ, ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಬದುಕಿನ ಗೊಂದಲಕ್ಕೆ ವಿರಾಮವೇ ಇಲ್ಲ. ಇವತ್ತು ಡಾ: ರಾಜ್‌ಕುಮಾರ್‌ರವರು ಪಾಪ ನೂರೆಂಟು ದಿವಸ ಆ ಮನುಷ್ಯ ಅಲ್ಲಿ ಹೇಗೆ ಕಳೆದ ಎನ್ನುವುದನ್ನು ಅವರು ಇನ್ನೂ ಹೇಳುವುದರಲ್ಲೇ ಇದ್ದಾರೆ. ಇವತ್ತು ಇಂತಹ ಪರಿಸ್ಥಿತಿಯಲ್ಲಿ ಕೂಡ ಅವರನ್ನು ಕರೆದುಕೊಂಡು ಬಂದಿರುವುದಕ್ಕೆ ನಮಗೂ ಸಂತೋಷವಿದೆ. 108 ದಿನಗಳಲ್ಲಿ ಈ ರಾಜ್ಯಕ್ಕೆ ಏನೇನು ತೊಂದರೆಯಾಯಿತು? ತಮಿಳುನಾಡಿಗೆ ಕೋಲಾರ ಕಡೆಯಿಂದ ತರಕಾರಿ ಹೋಗಲಿಲ್ಲ. ನಮ್ಮಲ್ಲಿ ಏಷಿಯಾದಲ್ಲೇ ಅತೀ ದೊಡ್ಡ ಟೊಮಾಟೋ ಮಾರುಕಟ್ಟೆ ಕೋಲಾರದಲ್ಲಿದೆ. ನಾಲ್ಕು ದಿನಗಳಿಂದ ಟಮಾಟೋ ತಮಿಳುನಾಡಿನ ಕಡೆ ಹೋಗಲಿಲ್ಲ. ಎಲ್ಲಾ ಈ ಕಡೆ ಬಂದವು. ರಾಜ್‌ಕುಮಾರ್‌ರವರನ್ನು ಕಿಡ್‌ನ್ಯಾಪ್ ಮಾಡಿದ ಮೇಲೆ ಸಾಮಾನ್ಯ ಮನುಷ್ಯನ ಮೇಲೆ ಬಿದ್ದ ಹೊರೆಗಳಿಗೆ ನಾವು ಭಯಪಡಬೇಕಾಗುತ್ತದೆ. ಕೆಜಿಎಫ್‌ನಲ್ಲಿ 100ಕ್ಕೆ 85 ರಷ್ಟು ಜನಸಂಖ್ಯೆ ತಮಿಳಿನವರು ಇದ್ದಾರೆ. ಅಲ್ಲಿ ಅಣ್ಣ ತಮ್ಮಂದಿರ ತರಹ ಇದ್ದರು ರಾಜ್‌ಕುಮಾರ್‌ರವರ ಅಪಹರಣವಾದ ಸಂದರ್ಭದಲ್ಲಿ ನಾನು ಊರಿಗೆ ಹೋದರೆ ಅವರ ದೃಷ್ಟಿಗಳು ಬೇರೆ ಕಡೆ ಕಾಣಿಸುತ್ತಿದ್ದವು. ಇಂತಹ ಪರಿಸ್ಥಿತಿ ಉಂಟು ಮಾಡಿದ ವೀರಪ್ಪನ್ ಇದು ರಾಜ್‌ಕುಮಾರ್‌ರವರನ್ನು ಕಿಡ್‌ನ್ಯಾಪ್ ಮಾಡಿದ್ದರಿಂದ ಆಯಿತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್‌ಕುಮಾರ್ ಅಪಹರಣವಾದಾಗ ನಾನು ದೆಹಲಿಯಲ್ಲಿದ್ದೆ. ಉದಯ ಟಿವಿಯಲ್ಲಿ ಬರೀ ಅದನ್ನೇ ಪ್ರಚಾರ ಮಾಡುತ್ತಿದ್ದರು. ಇವತ್ತು ರಾಜ್‌ಕುಮಾರ್ ಅಂತಹವರಿಗೇ ರಕ್ಷಣೆ ಇಲ್ಲವೆಂದರೆ, ಸಾಮಾನ್ಯ ಮನುಷ್ಯನಿಗೆ ಈ ರಾಜ್ಯದಲ್ಲಿ ರಕ್ಷಣೆ ಇದೆಯೆ ಎಂದು ನಾವು ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. ನಾವು

ಇವತ್ತು ಅದನ್ನು ಚಿಂತನೆ ಮಾಡಬೇಕಾಗಿದೆ. ನಾವು ಅವನನ್ನು ಕ್ಷಮಿಸಬೇಕು, ಅವನು ಹೇಳಿದ ಹಾಗೆ ಟಾಡಾ ಖೈದಿಗಳನ್ನು ಬಿಡುಗಡೆ ಮಾಡಬೇಕು, ಅಥವಾ ಮೈಸೂರಿನಲ್ಲಿರುವ 55 ಜನರನ್ನು ಬಿಡಬೇಕು ಇವು ನಾವು ಸಮಗ್ರವಾಗಿ ಚಿಂತನೆ ಮಾಡಬೇಕಾದ ಪ್ರಶ್ನೆಗಳು. ಈ ವಿಷಯದಲ್ಲಿ ನಾವು ಹೆಚ್ಚಿಗೆ ಆದ್ಯತೆ ಕೊಡಬೇಕಾಗಿದೆ. ಎಲ್‌ಟಿಟಿಇಯಲ್ಲಿ ಪ್ರಭಾಕರ್‌ನನ್ನು ಮೊದಲು ನಾವೇ ಬೆಳೆಸಿದ್ದೇವೆ. ಬೆಳೆಸಿ ಆದಮೇಲೆ ನಾವೇ ಮೊಟಕು ಹಾಕುವ ಕೆಲಸವನ್ನು ಕಲಿಸಿದ್ದೇವೆ. ನಮ್ಮ ದೇಶವೇ ಇದನ್ನು ಮಾಡಿಕೊಂಡ ಕೆಲಸ. ಅದಕ್ಕೆ ಪ್ರತಿಫಲ ರಾಜೀವ್ ಗಾಂಧಿಯವರ ಹತ್ಯೆ. ಯಾವುದೇ ಸರ್ಕಾರಗಳು ತಪ್ಪು ಹೆಜ್ಜೆ ಇಟ್ಟಾಗ ಈ ತರಹ ತೊಂದರೆಯಾಗುತ್ತದೆ. ಪ್ರಭಾಕರನ್ ನಮ್ಮ ದೇಶದ ಸಹಕಾರ ಬೇಕೆಂದು ಕೇಳಲಿಲ್ಲ. ತಮಿಳುನಾಡಿನ ಸಹಕಾರ ಕೇಳಿದ. ನಮ್ಮ ದೇಶದಲ್ಲೇ ರಾಜೀವ್ ಗಾಂಧಿಯವರು ಕರೆದು ಸಪೋರ್ಟ್ ಕೊಟ್ಟ ಮೇಲೆ ಅವರಿಂದ ಸಾವನ್ನು ಎದುರಿಸಬೇಕಾದ ಪರಿಸ್ಥಿತಿಯ ಉದಾಹರಣೆಗಳಿವೆ. ನೀವು ಇಡುವ ಹೆಜ್ಜೆ, ನಾವು ನೋಡುವ ದೃಷ್ಟಿ, ನಾವು ತೆಗೆದುಕೊಳ್ಳುವ ತೀರ್ಮಾನಗಳು ಇವು ಆಧಾರ ಆದಾಗ ಮಾತ್ರ ನೀವು ಇಂತಹ ಕ್ರಿಮಿನಲ್‌ಗಳನ್ನು ಸೆರೆ ಹಿಡಿಯುವುದಕ್ಕೆ ಅವಕಾಶ ಇದೆ. ಸಾವಿರಾರು ಕೋಟಿ ರೂಪಾಯಿಗಳು ನಮ್ಮ ರಾಜ್ಯದಲ್ಲಿ ಅನ್ಯಾಯವಾಗಿ ರೈತರಿಗೆ ವ್ಯಾಪಾರಸ್ಥರಿಗೆ ತೊಂದರೆಯಾಗಿದೆ. ಮಹದೇವ ಪ್ರಸಾದ್‌ರವರು ಮೊನ್ನೆ ಹೇಳುತ್ತಿದ್ದರು, ಅವರ ಊರಿನಲ್ಲಿ ಹೂವು ಬೆಳೆಯುವರಿಗೆ ತಮಿಳುನಾಡಿನಲ್ಲಿ ಮಾರ್ಕೆಟ್ ಉತ್ತಮವಾಗಿದೆ. ತಮಿಳುನಾಡಿನವರು ಯಾರೂ ಕೊಳ್ಳುವುದಕ್ಕೆ ಬರಲಿಲ್ಲ. ಫರ್ಟಿಲೈಸರ್ ಡೀಲರ್ ಇರುವುದು ಎಲ್ಲ ತಮಿಳುನಾಡಿನಲ್ಲಿ. ಅವರು ಎಲ್ಲ ಅಂಗಡಿಗಳಿಗೆ ಬೀಗಗಳನ್ನು ಹಾಕಿಕೊಂಡು ಹೊರಟು ಹೋದರು. ಈ ತರಹ ಒಂದಕ್ಕೊಂದು ಅಂಟಿಕೊಂಡಂತೆ ತೊಂದರೆಗಳಾಗಿ ಬಹಳ ಕಷ್ಟದಲ್ಲಿ ಸಿಲುಕಿದ್ದಾರೆ. ವ್ಯಕ್ತಿ ಕೇವಲ ಸಮಾಜದ ಒಂದು ಉಪಕರಣವಾದರೆ ಆಗ ಸಮಾಜ ವ್ಯಕ್ತಿಗಿಂತ ಬಹಳ ಹೆಚ್ಚು ಮುಖ್ಯವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ವೀರಪ್ಪನ್‌ನನ್ನು ಯಾವುದೇ ರೀತಿಯಲ್ಲಿ ಕ್ಷಮಾಪಣೆ ಮಾಡಬಾರದು. ಫೂಲನ್‌ದೇವಿ ಅವರನ್ನು ಅರೆಸ್ಟ್ ಮಾಡಿ ಅವರನ್ನು ಜೈಲಿನಲ್ಲಿಟ್ಟು, ಅವರ ಮನಸ್ಸು ಬದಲಾವಣೆ ಆದಾಗ ಬಿಟ್ಟರು. ಅದೇ ತರಹ ಅವನನ್ನೂ ಮಾಡಬೇಕೆ ವಿನಃ ನೆಡುಮಾರನ್ ಹತ್ತಿರ ಯಾವುದಾದರೂ ಒಡಂಬಡಿಕೆ ಮಾಡಿಕೊಂಡಿರುವುದು ಇರಬಹುದು, ಕರುಣಾನಿಧಿಯವರ ಹತ್ತಿರ ಒಡಂಬಡಿಕೆ ಮಾಡಿಕೊಂಡು ಏನಾದರೂ ಕ್ಷಮಾಪಣೆ ಕೊಟ್ಟರೆ, ರಾಜ್‌ಕುಮಾರ್ ಆಗಬಹುದು, ನಾಳೆ ನಾರಾಯಣ್ ಮೂರ್ತಿ ಆಗಬಹುದು, ನಾಳೆ ಮುಖ್ಯಮಂತ್ರಿಗಳಾಗಬಹುದು, ನಾವಾಗಬಹುದು ಕ್ಷಮಾಪಣೆ ಕೊಡದೆ ಕಾನೂನು ರೀತಿ ಅವನನ್ನು ಹಿಡಿದು ಮಟ್ಟ ಹಾಕಬೇಕೆಂದು ಹೇಳಿ, ಹಿರಿಯರು ಒಂದು ಗಾದೆ ಹೇಳುತ್ತಾರೆ. "ಹೆಚ್ಚು ಜಾಗ್ರತರಾದ ವ್ಯಕ್ತಿಗಳು ಕಡಿಮೆ ನಂಬಿಕೆಗಳನ್ನು ಇಟ್ಟುಕೊಂಡಿರುತ್ತಾರೆ. ಇವತ್ತು ಅವನು ಬಹಳ ಜಾಗ್ರತನಾಗಿದ್ದಾನೆ, ಆದರೆ ಅವನ ನಂಬಿಕೆಗಳು ಬಹಳ ಕಡಿಮೆ. ಅವನು ರಾಜ್‌ಕುಮಾರ್ ಅವರನ್ನು ಯಾವ ಉದ್ದೇಶದಿಂದ

ಬಿಟ್ಟ ಎಂಬುದು ನನಗೆ ಈಗಲೂ ಯಕ್ಷ ಪ್ರಶ್ನೆ ಆಗಿದೆ. ವೈಯಕ್ತಿಕವಾಗಿ ನಾನು ಹೇಳಬೇಕಾದರೆ ಹಣ ಕೊಡದೆ ಅವನು ಬಿಡುವುದಕ್ಕೆ ಸಾಧ್ಯವಿಲ್ಲವೆಂದು ಆ ಸಮಯದಲ್ಲಿ ಹೇಳಿ, ರಾಜ್‌ಕುಮಾರ್‌ರವರನ್ನು ಯಾರು ನೇರವಾಗಿ ಕರೆದುಕೊಂಡು ಬಂದರು? ಯಾರ ಸಹಾಯದಿಂದ ರಾಜ್‌ಕುಮಾರ್‌ರವರ ಬಿಡುಗಡೆಯಾಯಿತು? ಇದು ಈ ರಾಜ್ಯದ ಜನತೆಗೆ ತಿಳಿಸಬೇಕೆಂದು ಹೇಳಿ ತಾವು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಉಪಾಧ್ಯಕ್ಷರೆ, ತಾವು ಉಪಾಧ್ಯಕ್ಷರಾಗಿ ಆ ಸ್ಥಾನದಲ್ಲಿ ಕುಳಿತಾಗ ನಮ್ಮ ಕೊನೆಯ ಬೆಂಚು ಸ್ವಲ್ಪ ಕಣ್ಣಿಗೆ ಕಾಣುತ್ತದೆ ತಾವು ಅವಕಾಶ ಕೊಟ್ಟಿದ್ದಕ್ಕೆ ಪ್ರಥಮವಾಗಿ ತಮಗೆ ವಂದಿಸುತ್ತೇನೆ. ನಿನ್ನೆ ಕೂಡ ನಾವು ಈ ವಿಷಯದ ಬಗ್ಗೆ ಚರ್ಚೆ ನಡೆಯಿತು ಬಹಳ ಜನ ಮಿತ್ರರು ಬಹಳ ಚೆನ್ನಾಗಿ ಮಾತನಾಡಿದರು; ಸ್ವಾರಸ್ಯಕರವಾಗಿತ್ತು. ನನಗೆ ನನ್ನ ಮನಸ್ಸಿಗೆ ಬಂದ ಒಂದು ಪ್ರಶ್ನೆ ರಾಜ್‌ಕುಮಾರ್ ಪ್ರಕರಣ ಮೂರು ತಿಂಗಳುಗಳಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಗ್ರಹಣ ಹಿಡಿದಹಾಗಿತ್ತು. ಅದು ಇವತ್ತು ಬಿಡುಗಡೆಯಾಗಿದೆ. ಅಲ್ಲಿ ಬಿಡುಗಡೆಯಾದರೂ ಇಲ್ಲಿ ಬಿಡುಗಡೆಯಾಗಿಲ್ಲ. ಇಲ್ಲಿ ಇನ್ನು ಗ್ರಹಣಗಳು ಹಿಡಿದು ಕುಳಿತಿವೆ. ಇಲ್ಲಿ ಕೆಲವು ಇಶ್ಯೂಗಳಿವೆ. ಈ ಇಶ್ಯೂಗಳ ಬಗ್ಗೆ ನನ್ನ ಅಬಿಪ್ರಾಯವನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶ್ರೀಮಾನ್ ಕೃಷ್ಣರವರ ನೇತೃತ್ವದ ಸರ್ಕಾರಕ್ಕೆ ನಾವು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಬೇಕು. ಏಕೆಂದರೆ, ಮೂರು ತಿಂಗಳುಗಳಿಂದ ಈ ನೋವು ಸರ್ಕಾರಕ್ಕೆ ಇತ್ತು. ಆರ್ಥಿಕ ಬೆಳವಣಿಗೆ ಕುಂಠಿತವಾಗಿತ್ತು, ಆರ್ಥಿಕ ಪ್ರಕ್ರಿಯೆ ಕೂಡ ಕಡಿಮೆಯಾಗಿತ್ತು. ಇವುಗಳ ನಿವಾರಣೆಗಾಗಿ ಸಮಸ್ಯೆಯನ್ನು ಅವತ್ತಿನ ಸಂದರ್ಭಕ್ಕೆ ಅನುಸಾರವಾಗಿ ಎಷ್ಟು ತಾಳ್ಮೆಯಿಂದ ವರ್ತಿಸಬಹುದಾಗಿತ್ತು ಅಷ್ಟು ತಾಳ್ಮೆಯಿಂದ ವರ್ತಿಸಿದ್ದಾರೆ. ಇದಲ್ಲದೆ ಬೇರೆ ಏನೂ ಮಾಡುವುದಕ್ಕಾಗುತ್ತಿರಲಿಲ್ಲ. ನಾವು ಬೆಂಕಿ ತರಹ ಹೊರಟಿದ್ದರೆ ಬೆಂಕಿ ಉಂಡೆಯಾಗಿ ಜ್ವಾಲೆಯಾಗಿ ಹತ್ತಿ ಬಿಡುತ್ತಿತ್ತು. ಅವರು ಬಹಳ ಸಂಯಮದಿಂದ ವರ್ತಿಸಿದ್ದಾರೆ. ಎಲ್ಲ ರೀತಿಯ ಟೀಕೆಗಳನ್ನು ಮತ್ತು ಎಲ್ಲಾ ರೀತಿಯ ಅವಹೇಳನವನ್ನು ಕೃಷ್ಣರವರು ಅನುಭವಿಸಿಕೊಂಡು ಕೊನೆಗೆ ರಕ್ತರಹಿತವಾಗಿ ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಸ್ವಲ್ಪವಾದರೂ ಎಡವಿದ್ದರೆ ಬಹುಶ: ರಕ್ತಪಾತವಾಗುತಿತ್ತು. ಅದರಲ್ಲಿ ಎರಡು ಮಾತಿಲ್ಲ. ಅಲ್ಲಿ ಕನ್ನಡದವರನ್ನು ಕೊಲ್ಲುತ್ತಿದ್ದರು, ಇಲ್ಲಿ ತಮಿಳುನವರನ್ನು ಕೊಲ್ಲುತ್ತಿದ್ದರು. ಬಹಳ ಅನಾಹುತವಾಗುವ ಪರಿಸ್ಥಿತಿ ಇತ್ತು. ಆದರೂ ಸಹ ಅವರು ಬಹಳ ತಾಳ್ಮೆಯಿಂದ ವರ್ತಿಸಿದ್ದಾರೆ. ಇವರು ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸಿರುವ ಪ್ರಯತ್ನಕ್ಕೆ ಮೊದಲು ಸದನ ಒಂದು ಠರಾವು ಮಾಡಿ ಮುಖ್ಯಮಂತ್ರಿಗಳನ್ನು ಅಭಿನಂದಿಸುವುದು ಬಹಳ ಮುಖ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಮಾತನ್ನು ಹೇಳಬೇಕಾದ

ಸಂದರ್ಭದಲ್ಲಿ ನನಗೆ ಕೆಲವು ಘಟನೆಗಳು ನೆನಪಿಗೆ ಬರುತ್ತವೆ. ರಾಜ್‌ಕುಮಾರ್ ಅಂತಹವರನ್ನೂ ಕೂಡ ಅಪಹರಣ ಮಾಡಿಕೊಂಡು ಎರಡು ಸಿವಿಲೈಸ್ಡ್ ಸರ್ಕಾರಗಳನ್ನು ಡೆಮಾಕ್ರಟಿಕಲಿ ಎಲೆಕ್ಟೆಡ್ ಸರ್ಕಾರಗಳನ್ನು ಅಲ್ಲಾಡಿಸುವ ಶಕ್ತಿ ಆ್ಯಂಟಿ ಗೂಡ್ಸ್‌ಗೆ ಕೂಡ ಬಂದುಬಿಟ್ಟಿತು ಎಂಬ ನೋವು ನನಗೆ ಕಾಡುತ್ತಿದೆ. ಒಬ್ಬ ಕ್ರಿಮಿನಲ್ ಅವನ ಹತ್ತಿರ ಎರಡು- ಮೂರು ಗನ್ ಇರಬಹುದು, ನಮ್ಮ ಹತ್ತಿರ ಸಾವಿರಾರು ಗನ್‌ಗಳಿವೆ. ಪೊಲೀಸ್ ಇದೆ. ಮಿಲಿಟರಿ ಇದೆ, ಫೋರ್ಸ್ ಇದೆ, ಪವರ್ ಇದೆ. ತಮಿಳುನಾಡಿನ ಸರ್ಕಾರದಲ್ಲೂ ಪವರ್ ಇದೆ. ಈ ಎಲ್ಲ ಪವರ್ ಇದ್ದರೂ ಸಹ ಒಬ್ಬ ಕ್ರಿಮಿನಲ್ ಎರಡು ಸರ್ಕಾರಗಳನ್ನು ಅಲ್ಲಾಡಿಸುವ ಸ್ಥಿತಿಗೆ ತಂದು ಜಗ್ಗಿಸುವ ಸ್ಥಿತಿಗೆ ಈ ವ್ಯವಸ್ಥೆ ಬಂದು ಬಿಟ್ಟಿದೆ ಎಂದು ನನಗೆ ಕಾಡುತ್ತಿದೆ. ಇದನ್ನು ಕೊನೆಗಾಣಿಸಲು ಹೇಗೆಂದು ನನ್ನ ಪ್ರಶ್ನೆ. ನನ್ನ ಮಿತ್ರರು ಬಹಳ ಜನ ಇಲ್ಲಿ ಮಾತನಾಡಿದರು ಅದರ ಬಗ್ಗೆ ಸ್ವಲ್ಪ ಸಲಹೆಗಳನ್ನು ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ನನ್ನ ದೃಷ್ಟಿಯಲ್ಲಿ ನನ್ನ ಅನುಭವದ ಮೇಲೆ ಎರಡು-ಮೂರು ವಿಚಾರಗಳನ್ನು ತಮ್ಮ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ನೀವು ವೀರಪ್ಪನ್‌ನನ್ನು ಹಿಡಿಯಬೇಕೆಂದು ಬಹಳ ವರ್ಷಗಳಿಂದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅವನು 10 ವರ್ಷಗಳಿಂದ ಇದ್ದಾನೆ. ಅವನು ಹತ್ತು ವರ್ಷಗಳಿಂದ ಇರಬೇಕಾದರೆ ಅದಕ್ಕೆ ಪೂರಕವಾದ ವ್ಯವಸ್ಥೆ ಇದೆ. ಅದು ರಾಜಕೀಯ ಇರಬಹುದು, ಅಧಿಕಾರಿಗಳಿರಬಹುದು, ಮತ್ತೊಬ್ಬರು ಇರಬಹುದು, ಅದು ಏನಿದೆ ಅದನ್ನು ನಾವು ಮೊದಲು ಕಡೆಗಾಣಿಸಬೇಕು. ಕ್ರಿಮಿನಲ್ ಜ್ಯೂರಿಸ್‌ಡಿಕ್ಷನ್ ನಡೆಯುವ ಪರಿಸ್ಥಿತಿ ಯಾವ ಸರ್ಕಾರಕ್ಕೂ ಬರಬಾರದು ಎಂದು ನನ್ನ ಇಚ್ಛೆ. ಸರ್ಕಾರ ನಡೆಸಿರತಕ್ಕಂತಹ ಜನ ಬಹಳ ಇದ್ದಾರೆ. ಅನುಭವವೂ ಬಹಳ ಇದೆ. ವೀರಪ್ಪನ್ ಹತ್ತು ವರ್ಷಗಳಿಂದ ಹುಟ್ಟಿದ್ದಾನೆ. ಆದರೂ ಸಹ ಅವನ ಬಗ್ಗೆ ಯಾರೂ ಸೀರಿಯಸ್ಸಾಗಿ ಯೋಚನೆ ಮಾಡದೆ ಕಾರ್ಯಕ್ರಮ ಹಮ್ಮಿಕ್ರೊಳ್ಳದೆ ಒಂದು ವರ್ಷದಲ್ಲಿ ನಮಗೆ ಈ ಗ್ರಹಚಾರ ತಂದು ಬಿಟ್ಟು ನೀವು ಏಕೆ ಮಾಡಿಲ್ಲ, ನಿಮ್ಮ ಸರ್ಕಾರ ಏನು ಮಾಡಿತು ಎಂದು ಒಬ್ಬರನ್ನೊಬ್ಬರು ಟೀಕೆ ಮಾಡುವ ಪ್ರಶ್ನೆ ಅಲ್ಲ. ನಾವು

*1.00 ಪಿ.ಎಂ.*

ಅವನನ್ನು ಅರೆಸ್ಟ್ ಮಾಡಬೇಕೆಂದು ಹೊರಟಾಗ ನಮಗೆ ಸಂಬಂಧಪಟ್ಟವರಿಂದ ಸರಿಯಾದ ಸಹಕಾರ ಸಿಕ್ಕಿಲ್ಲ ಎಂಬ ಮಾತುಗಳನ್ನು ನಾವು ಕೇಳಿದ್ದೇವೆ. ಹೀಗಿರುವಾಗ ಸರಕಾರದವರು ಅಂಥ ಕ್ರಿಮಿನಲ್ಸ್‌ನ್ನು ಹಿಡಿಯುವುದಾದರೂ ಹೇಗೆ? ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಇಂಟರ್‌ನ್ಯಾಶನಲ್ ಲೆವಲ್‌ನಲ್ಲಿ ಕ್ರಿಮಿನಲ್ಸ್ ಯಾವ ದೇಶಕ್ಕಾದರೂ ಹೋಗಲಿ, ಅಂಥವರನ್ನು ಹಿಡಿಯಲು ಇಂಟರ್‌ಪೋಲ್ ಎನ್ನತಕ್ಕಂಥ ಒಂದು ವ್ಯವಸ್ಥೆಯಿದೆ. ಇದರ ಮೂಲಕ ಯಾರನ್ನು ಎಲ್ಲಿಂದ ಬೇಕಾದರೂ ತರಬಹುದು. ಒಬ್ಬ ಕ್ರಿಮಿನಲ್ ಅಪರಾಧ ಎಸಗಿ ಬೇರೆ ದೇಶಕ್ಕೆ ಹೋದಲ್ಲಿ ಅವರನ್ನು extradition ಮಾಡಿ ತರುವಂಥ ಕಾರ್ಯಕ್ರಮ ಇದೆ. ಹೀಗಿರುವಾಗ ನಮ್ಮ ಪಕ್ಕದಲ್ಲಿರುವ ಸರಕಾರದವರು ನಮ್ಮ ಹಾಗೆ

ಇರುವವರು ನಮಗೆ ಸಹಕಾರ ಕೊಡುವುದಿಲ್ಲ, ಅವನು ಕ್ರಿಮಿನಲ್ಸ್ ಪರವಾಗಿ ಇದ್ದಾನೋ ಅಥವಾ ಯಾರ ಪರವಾಗಿ ಇದ್ದನೋ, ಅಥವಾ ಅವನ ರಕ್ಷಣೆ ಅವನಿಗೆ ಇದೆ ಎಂಬ ಮಾತುಗಳು ಕೇಳಿ ಬಂದರೆ ಎಷ್ಟರಮಟ್ಟಿಗೆ ಇದು ಸಾಧ್ಯವಾಗುತ್ತದೆ ಎಂಬ ಮಾತನ್ನು ನಾವು ನಮ್ಮಲ್ಲಿಯೇ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿಯು ಬಂದೊದಗಿದೆ. ತಮಗೆ ಗೊತ್ತಿರುವ ಹಾಗೆ ನಮ್ಮ ಸಂವಿಧಾನದಲ್ಲಿ ಒಂದು ಪ್ರಾವಿಶನ್ ಇದೆ. ಈ ರೀತಿಯಾದ ವ್ಯತ್ಯಾಸಗಳು ಬಂದಾಗ ಇಂಟರ್‌ಸ್ಟೇಟ್ ಕೌನ್ಸಿಲ್ ಎಂದು ಇದೆ. ಆದು ಇಂಥ ಡಿಸ್ಪ್ಯೂಟ್‌ಗಳನ್ನು ತೀರ್ಮಾನ ಮಾಡುತ್ತದೆ. ಈ ರೀತಿಯಾಗಿ ರಾಜ್ಯಗಳ ಮಧ್ಯೆ ಬರತಕ್ಕಂಥ ನೀರು, ಗಡಿ, ಮುಂತಾದ ವಿಚಾರಗಳು ಇದ್ದಲ್ಲಿ ತೀರ್ಮಾನ ಮೂಡಲು ಕೌನ್ಸಿಲ್ ಇದೆ. ಆ ಕೌನ್ಸಿಲ್ ಏನು ಮಾಡುತ್ತಿದೆ? ಒಂದು ಫರ್ಮ್ ಆದಂಥ ತೀರ್ಮಾನವನ್ನು ತೆಗೆದುಕೊಂಡು, ನಿರ್ದಿಷ್ಟವಾದ ಪಾಲಿಸಿಯನ್ನು ರಚಿಸಿಕೊಂಡು ಆದರ ಮೂಲಕ ಒಂದು ಸ್ಟೇಟ್‌ನಲ್ಲಿ ಒಬ್ಬ ಕ್ರಿಮಿನಲ್ ಇದ್ದಲ್ಲಿ ಅವನನ್ನು ಹಿಡಿಯುವಂಥಾದ್ದಿ ಅವನ ಮೇಲೆ ಕ್ರಮ ತೆಗೆದುಕೊಳ್ಳುವಂಥಾದ್ದು ಆಗಬೇಕು. ಅಂಥ ಸಲಹೆಯ ಬಗ್ಗೆ ಸರಕಾರಗಳು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತಾ, ದೇಶದಲ್ಲಿ ಡಕಾಯಿತಿ ಮಾಡುವುದರ ಬಗ್ಗೆ ಒಂದು ನಿಗಾವಹಿಸುವ ವ್ಯವಸ್ಥೆಯು ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶಗಳಲ್ಲಿ ಇದೆ. ಈ ಮೂರು ರಾಜ್ಯಗಳು ಸೇರಿದಂತೆ ಆ ಪ್ರದೇಶದ ಡಕಾಯಿತಿ ಮಾಡುವವರು ತಮ್ಮ ಆಕ್ಟಿವಿಟೀಸ್ ಅನು ಮಾಡುತ್ತಾರೆ. ಅದನ್ನು ನಿಗಾವಹಿಸುವ, ನಿಯಂತ್ರಣ ಮಾಡುವ ತಡೆಗಟ್ಟುವ, ಕ್ರಮ ಜರುಗಿಸುವ ಒಂದು ವ್ಯವಸ್ಥೆಯನ್ನು ಆ ರಾಜ್ಯಗಳಲ್ಲಿ ಮಾಡುಕೊಂಡಿದ್ದಾರೆ. ಅಂಥ ಒಂದು ವ್ಯವಸ್ಥೆಯನ್ನು ಇಲ್ಲಿಯೂ ಏತಕ್ಕಾಗಿ ತಂದಿಲ್ಲವೆಂಬ ಪ್ರಶ್ನೆಯು ನನ್ನ ಮನಸ್ಸನ್ನು ಕಾಡುತ್ತಿದೆ. ಇದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾದುದು ಬಹಳ ಮುಖ್ಯವಾದುದು. ನಮ್ಮ ಹಿರಿಯ ಮಿತ್ರರುಗಳು ಬಹಳ ಜನರಿದ್ದಾರೆ. ಅವರುಗಳು ಈ ಕುರಿತು ಯೋಚನೆ ಮಾಡಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು ಎಂದು ಅನ್ನಿಸುತ್ತದೆ. ನಾವು ತಿಳಿದುರುವಂತೆ ವೀರಪ್ಪನ್ ಒಬ್ಬ ಖಾಲಿ ವೀರಪ್ಪನ್ ಅಲ್ಲ. ಅವನ ಹಿಂದೆ ಬೇಕಾದಷ್ಟು ವಿಚಾರಗಳು ಸೇರಿಕೊಂಡಿವೆ. ಇದರಲ್ಲಿ ರಾಜಕೀಯವೂ ಸೇರಿಕೊಂಡಿದೆ. ಇದರಲ್ಲಿ ಪಾಲಿಟಿಕ್ಸ್ ಮತ್ತು ಕ್ರಿಮಿನಲ್ಸ್ ಗ್ಯಾಂಗ್ ಕೂಡ ಇದೆ. ಮಸಲ್ ಪವರ್ಸ್ ಅಂಡ್ ಕ್ರಿಮಿನಲ್ಸ್ ಇನ್‌ವಾಲ್ವ್‌ಮೆಂಟ್ ಕೂಡ ಇದೆ. ಇದೆಲ್ಲಾ ಏತಕ್ಕಾಗಿ ಅಂದರೆ, ಚುನಾವಣಾ ಭೂತ ಎಂದು ನಾವೇನು ಕರೆಯುತ್ತೇವೆ, ಬ್ಯಾಲೆಟ್ ಭೂತ ಎಂದು ನಾವೇನು ಕರೆಯುತ್ತಿದ್ದೇವೆ, ಅದಕ್ಕಾಗಿ ಇದು ನಡೆಯುತ್ತಿದೆ. ಈ ಭೂತಗಳು ನಮ್ಮನ್ನು ವೀರಪ್ಪನ್ ಹತ್ತಿರ ತಂದು ಬಿಟ್ಟಿದೆ. ಈಗಲಾದರೂ ನಾವು ಇದನ್ನು ಕೊನೆಗಾಣಿಸಬೇಕು. ಹೀಗೆ ಕೊನೆಗಾಣಿಸದಿದ್ದರೆ ಯಾವ ಸಿವಿಲೈಸ್ಡ್ ಸರ್ಕಾರಗಳು ಕೂಡ ಕೆಲಸ ಮಾಡಲು ತೊಂದರೆಯಾಗಬಹುದು. ಈ ವಿಚಾರದಲ್ಲಿ ಪಕ್ಷ ರಾಜಕೀಯ ಬೇಡ. ಆ ಬಗ್ಗೆ ಎಲ್ಲರೂ ಕೂಡಿ ಚಿಂತನೆ ಮಾಡಿ ಒಂದು ವ್ಯವಸ್ಥೆ ಮಾಡಿಕೊಳ್ಳಬೇಕು. ಈ ವ್ಯವಸ್ಥೆಯ ಅಡಿಯಲ್ಲಿ ಯಾರೂ ಅಪರಾಧಿಗಳೆಂದು ಪರಿಗಣಿಸುತ್ತಾರೋ

ಅವರುಗಳು ತಪ್ಪಿಗೆ ತಕ್ಕ ಶಿಕ್ಷೆಯನ್ನು ಅನುಭವಿಸಲೇ ಬೇಕು. ಆ ಕೆಲಸವನ್ನು ಮಾಡುವುದರ ಜೊತೆಗೆ ನಮ್ಮ ರಾಜ್ಯ ಎಂಬ ಬಗ್ಗೆ ನಮ್ಮಲ್ಲಿ ಅಭಿಮಾನ ಮೊದಲು ಬರಬೇಕು. ದೇಶ ಮತ್ತು ರಾಜ್ಯ ಎಂಬ ಅಭಿಮಾನ ನಮ್ಮಲ್ಲಿ ಮೂಡಿ ಬಂದಾಗ ಏನಾದರೂ ಒಂದು ವ್ಯವಸ್ಥೆಯಾಗುತ್ತದೆ ಎಂಬ ಮಾತನ್ನು ಒತ್ತಿ ಹೇಳಬಯಸುತ್ತೇನೆ. ಕೊನೆಯಲ್ಲಿ ದೇವರ ಸೃಷ್ಟಿಯ ಬಗ್ಗೆ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. ನಮ್ಮ ಮಿತ್ರರು ನಿನ್ನೆಯಿಂದ ನಮಗೆ ಅಂದರೆ ಲಾಸ್ಟ್ ಬೆಂಚ್‌ನವರಿಗೆ ಸಾಕಷ್ಟು ಮಾತಿನ ತಿವಿತವನ್ನು ಕೊಟ್ಟಿದ್ದಾರೆ. ಇಲ್ಲಿ ನಾವುಗಳು ಮಾಡುವ ಟೀಕೆ ಟಿಪ್ಪಣಿಗಳು ತುಂಬಾ ಕನ್‌ಸ್ಟ್ರಕ್ಟೀವ್ ಆಗಿರಬೇಕೆಂಬ ಬಗ್ಗೆ ನನ್ನ ಮನಸ್ಸು ಕೊರೆಯುತ್ತಾ ಇದೆ. ಒಂದು ಬಾಂಬು ಹಾಕುವ ಕುರಿತಾದ ಕನ್‌ಸ್ಟ್ರಕ್ಟೀವ್ ಸಜೆಶನ್ ಬಂದರೆ ಆ ಬಗ್ಗೆ ಕೂಡ ಒಪ್ಪಿಕೊಳ್ಳೋಣ. ಅದನ್ನು ಬಿಟ್ಟು ಸುಮ್ಮನೆ ಟೀಕೆ ಮಾಡುವುದಕ್ಕಾಗಿ ಟೀಕೆ ಮಾಡುವುದು ಸರಿಯಲ್ಲವೆಂದು ನನ್ನ ಭಾವನೆ. ಹಾಗೆ ಮಾಡಿದರೆ ಅದು ಕ್ರಿಟಿಸಿಸಂನ ಉತ್ತಮ ಪ್ರಿನ್ಸಿಪಲ್ ಅಲ್ಲ ಎಂದು ನನಗನ್ನಿಸುತ್ತದೆ. ಪಾರ್ಲಿಮೆಂಟರಿ ಪ್ರಾಕ್ಟೀಸ್ ಬುಕ್‌ನ್ನು ತೆಗೆದು ಓದಿದಾಗ ನಮಗೆ ಅದರ ಅರಿವಾಗುತ್ತದೆ. ಬ್ರಿಟಿಶ್ ಪಾರ್ಲಿಮೆಂಟ್‌ನಲ್ಲಿಯೂ ಕೂಡ ಡಿಸ್‌ಕಸ್ ಮಾಡುವಾಗ ಚರ್ಚೆಯಾಗುತ್ತದೆ, ಅದೇ ಅಲ್ಲಿನ ನ್ಯಾಶನಲ್ ಇಂಟ್ರೆಸ್ಟ್‌ನ ವಿಚಾರ ಬಂದಾಗ ಎಲ್ಲರೂ ಒಂದಾಗುತ್ತಾರೆ. ಸೆನೆಟ್ ಎಲೆಕ್ಷನ್ ಡಿಸ್‌ಕಶನ್ಸ್ ಆಗುವಾಗ ಸ್ಟೇಟ್‌ನಲ್ಲಿ ಎಲ್ಲರೂ ಒಂದಾಗುತ್ತಾರೆ.

ಶ್ರೀ ಕೆ. ಶ್ರೀನಿವಾಸ ಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವುದು ನೋಡಿದರೆ ನಾವೇನು ದೇಶದ್ರೋಹಿಗಳೇ? ಎಂದು ಕೇಳಬೇಕಾಗುತ್ತದೆ. ಡಾ: ರಾಜ್‌ರವರನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ಎಲ್ಲಾ ಪಕ್ಷಗಳವರು ಒಂದಾದ ಕಾರಣ ಸಾಧ್ಯವಾಯಿತಲ್ಲವೆ? ನೀವು ಭಿನ್ನ ಅಭಿಪ್ರಾಯಗಳನ್ನು ಬರುವಂಥ ಮಾತನ್ನು ಆಡಬಾರದು....

ಶ್ರೀ ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಮಾತನಾಡುವ ರೀತಿ ಅವರ ಡ್ರೆಸ್ ಇತ್ಯಾದಿಗಳನ್ನು ನೋಡಿದರೆ ವೀರಪ್ಪನ್ ಕಾರ್ಯಾಚರಣೆಗೆ ಹೊರಟಿರುವಂತೆ ಕಾಣುತ್ತದೆ. ಆ ಒಂದು ಸಂಶಯ ನಮ್ಮಲ್ಲಿ ಮೂಡುತ್ತಿದೆ. ಅಂಥ ಸೂಚನೆಯೇನಾದರೂ ಅವರಲ್ಲಿದೆಯೇ ಒಂದು ಕೇಳಬಯಸುತ್ತೇನೆ..

ಶ್ರೀ ಎ.ಎನ್. ಗುರುಸ್ವಾಮಿ :— ಅಂಥ ಯಾವ ವಿಚಾರವೂ ನನ್ನಲ್ಲಿ ಇಲ್ಲ. ನಾನು ಈ ಮಾತನ್ನು ಏತಕ್ಕಾಗಿ ಹೇಳಿದ್ದೇನೆ ಅಂದರೆ, ಇದೊಂದು ಸಿಂಪಲ್ ಲಾಜಿಕಲ್ ವಿಚಾರ. ಇಂಥ ವಿಚಾರಗಳು ಬಂದಾಗ ಕನ್‌ಸ್ಟ್ರಕ್ಟೀವ್ ಸಜೆಶನ್ಸ್ ಕೊಡದೆ ನಿಮ್ಮ ಸರಕಾರದವರು ಮಾಡಿಲ್ಲ, ಅವರು ಮಾಡಿಲ್ಲ, ಇವರು ಮಾಡಿಲ್ಲ ಎಂದು ಹೇಳುವ ಮಾತುಗಳೇಕೆ ಬರಬೇಕು? ಆ ವಿಚಾರವನ್ನು ಇಟ್ಟುಕೊಂಡು ನಾನು ಆ ಮಾತುಗಳನ್ನು ಹೇಳಿದ್ದೇನೆ ಅಷ್ಟೆ. ಯಾರ ಸರಕಾರ ಇದ್ದರೆ ಏನು? ನಾವೆಲ್ಲರೂ ಜನರ ಪ್ರತಿನಿಧಿಗಳು,

ಅವರಿಂದ ಎಲೆಕ್ಟ್ ಆಗಿ ಬಂದವರು, ನಾನು ಆ ಒಂದು ಚಿಂತನೆಯ ಬಗ್ಗೆ ಹೇಳಿದ್ದೇನೆ. ದೇವರು ನಮಗೆ ಎರಡು ಕಣ್ಣು, ಎರಡು ಕಿವಿ, ಎರಡು ಕೈ ಎರಡು ಕಾಲುಗಳನ್ನು ಕೊಟ್ಟಿದ್ದಾನೆ. ಒಂದು ಕೊಟ್ಟರೆ ಎಲ್ಲಾದರೂ ಎಡವಟ್ಟಾದೀತು ಎಂದು ದೇವರ ಚಿಂತನೆ. ನಾವುಗಳು ಕೂಡ ಎರಡು ಅಂಗಗಳಿಂದಲೇ ಕೇಳಿದಾಗ, ನೋಡಿದಾಗ ಮಾತ್ರ ಅದು ಚೆನ್ನಾಗಿರುತ್ತದೆ. ಆದ್ದರಿಂದ ನಮ್ಮ ಮಿತ್ರರುಗಳು ಕೂಡ ಒಂದು ಒಳ್ಳೆಯ ದೃಷ್ಟಿಯಿಂದ ಸರಕಾರದ ಕೆಲಸಗಳನ್ನು ನೋಡಲು ಪ್ರಯತ್ನಿಸಬೇಕು. ಎಲ್ಲರೂ ಸೇರಿ ರಾಜ್ಯದ ಪ್ರಗತಿಗೆ ಶ್ರಮಿಸಬೇಕು ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ವಂದಿಸುತ್ತೇನೆ. ಕೊನೆಯ ಬೆಂಚ್‌ನಲ್ಲಿ ಕುಳಿತಿರುವ ನಮಗೆ ಕೂಡ ಅವಕಾಶವನ್ನು ತಾವುಗಳು ಕೊಟ್ಟಿದ್ದೀರಿ ನಮ್ಮನ್ನು ಮೂಲೆಗುಂಪು ಮಾಡದೇ ಆಗಾಗ ಇಂಥ ಅವಕಾಶಗಳನ್ನು ಕೊಡಬೇಕೆಂದು ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ) :— ಸನ್ಮಾನ್ಯ ಅಧ್ಯಕ್ಷರೇ, ಡಾ: ರಾಜ್‌ಕುಮಾರ್‌ರವರ ಅಪಹರಣ ಪ್ರಕರಣವು ದೇಶದ, ಸರಕಾರದ ಕಣ್ತೆರೆಸುವ ಒಂದು ಐತಿಹಾಸಿಕ ಘಟನೆ ಎಂದು ನಾನು ಹೇಳಬಯಸುತ್ತೇನೆ. ಈ ಘಟನೆಯಿಂದ ಜಗತ್ತಿಗೆ ಒಂದು ಸಂದೇಶ ಹೋಗಿದೆ. ರಾಜ್ಯಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ತಮ್ಮ ವ್ಯವಸ್ಥೆಗಳ ಪುನರಾವಲೋಕನೆ ಮಾಡತಕ್ಕಂಥ ಘಟನೆ ಇದಾಗಿದೆ. ನಮ್ಮನ್ನು ನಾವು ಯಾವ ರೀತಿಯಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕೆನ್ನುವುದರ ಬಗ್ಗೆ ನಮ್ಮ ಕಣ್ತೆರೆಸುವ ಘಟನೆ ಇದಾಗಿದೆ ಎಂದು ನಾನು ಹೇಳಬಯಸುತ್ತೇನೆ. ದೇಶದ ಯಾವುದೇ ಒಬ್ಬ ಪ್ರಜೆಗೂ ಕೂಡ ಒಂದು ಗಂಡಾಂತರ ಬಂದಾಗ ಸ್ವಾಭಾವಿಕವಾಗಿ ನಾವು ಮೊದಲು ದೇವರನ್ನು ಪ್ರಾರ್ಥನೆ ಮಾಡುಕೊಳ್ಳುತ್ತೇವೆ, ಒಮ್ಮೆ ಪೂಜ್ಯ ಧರ್ಮಸ್ಥಳ ಡಾ: ವೀರೇಂದ್ರ ಹೆಗ್ಗಡೆಯವರು ಒಂದು ಮಾತನ್ನು ಹೇಳಿದರು. ದೇವರು ದೇವಸ್ಥಾನದಲ್ಲಿರುವುದಿಲ್ಲ. ದೇವರು ಆಸ್ಪತ್ರೆಯಲ್ಲಿದ್ದಾನೆ ಎಂದು ಎಂದು ಆಸ್ಪತ್ರೆ ಉದ್ಘಾಟನಾ ಸಂದರ್ಭದಲ್ಲಿ ಅವರು ಹೇಳಿದರು. ಅದಕ್ಕೆ ಅವರು ಕಾರಣವನ್ನು ಕೊಡುತ್ತಾರೆ. ಒಬ್ಬ ಮನುಷ್ಯನಿಗೆ ತನ್ನ ಆರೋಗ್ಯದ ಗಂಡಾಂತರ ಬಂದಾಗ ಆಸ್ಪತ್ರೆಗೆ ಅಡ್ಮಿಟ್ ಆಗಿ ಅಲ್ಲಿ ಗುಣಮುಖವಾಗಿ ಬರುವ ತನಕವು ದೇವರ ಧ್ಯಾನವನ್ನು ಮಾಡುತ್ತಿರುತ್ತಾನೆ. ಅವನ ಒಟ್ಟಿಗೆ ಇರತಕ್ಕಂಥವರು ಸಹೋದ್ಯೋಗಿಗಳು, ಬಂಧುಗಳು ಮುಂತಾಗಿ ಪ್ರಾರ್ಥನೆ ಹರಕೆ ಇತ್ಯಾದಿಗಳನ್ನು ಮಾಡುತ್ತಾ ಇರುತ್ತಾರೆ. ಆದ್ದರಿಂದ ಅಲ್ಲಿ ದೇವರಿದ್ದಾನೆ ಎಂಬುದನ್ನು ತೋರಿಸಿಕೊಡುತ್ತಾರೆ. ಆದ್ದರಿಂದ ಯಾವುದೇ ಸಂದರ್ಭದಲ್ಲಿಯೂ ಕೂಡ ರಾಜ್ಯಕ್ಕೆ ಗಂಡಾಂತರ ಬಂದಾಗ ನಾವು ದೇವರನ್ನು ಪ್ರಪ್ರಥಮವಾಗಿ ಪ್ರಾರ್ಥಿಸದೇ ಇನ್ಯಾರನ್ನು ಪ್ರಾರ್ಥನೆ ಮಾಡಿಕೊಳ್ಳುವುದು? ನಾವುಗಳು ಯಕಶ್ಚಿತ್ ಮಾನವರು. ನಮ್ಮಿಂದ ದೈನಂದಿನ ತಪ್ಪುಗಳು ಆಗುತ್ತಾ ಇರುತ್ತವೆ. ಅದು ತಿಳಿದೋ ಅಥವಾ ತಿಳಿಯದೆಯೋ ಆಗುತ್ತಿರುತ್ತವೆ. ನಾವು ಸಣ್ಣ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡುವಾಗಲೂ ದೇವರ ಭಯವೇ

ಜ್ಞಾನದ ಆರಂಭ ಎಂದು ಹೇಳಿಕೊಡುತ್ತೇವೆ. ಅದೇ ರೀತೀಯಲ್ಲಿ ನಾವು ಈ ಘಟನೆಯಲ್ಲಿಯೂ ಅವರವರ ನಂಬಿಕೆಗೆ ಸರಿಯಾಗಿ ಪೂಜೆ ಇತ್ಯಾದಿಗಳನ್ನು ಮಾಡಿ ದೇವರನ್ನು ಪ್ರಾರ್ಥಿಸಿಕೊಂಡಿರುವುದು ಸರಿಯಲ್ಲ ಎಂದು ಅತಿಶಯೋಕ್ತಿಯ ರೀತಿಯಲ್ಲಿ ಹೇಳುವುದು ಸರಿಯಲ್ಲ. ಡಾ: ರಾಜ್‌ಕುಮಾರ್‌ರವರ ಮೇಲೆ ಅಭಿಮಾನ ಇಡೀ ಕರ್ನಾಟಕದ ಜನರಲ್ಲಿ ಇದೆ. ಅವರ ಅಪಹರಣ ನಡೆದ ಕಾರ್ಯವ್ಯಾಪ್ತಿಯು ಕೂಡ ತಮಿಳುನಾಡಿನಲ್ಲಿ ಇತ್ತು. ಹಾಗಾಗಿ ತಮಿಳುನಾಡಿನಲ್ಲಿ ನಡೆದಂಥ ಘಟನೆಗೆ ನಾವು ಬಾಧ್ಯರಾಗುವುದಿಲ್ಲ. ಆದರೂ ಕೂಡ ನಮ್ಮ ಕರ್ತವ್ಯದ ದೃಷ್ಟಿಯಿಂದ ಡಾ: ರಾಜ್‌ಕುಮಾರ್‌ರವರ ಕುಟುಂಬಕ್ಕೆ ನಿರ್ದೇಶನವನ್ನು ಸರಕಾರದವರು ಮೊದಲೇ ಕೊಟ್ಟಿತ್ತು ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಯಾವುದೇ ಸಂದರ್ಭದಲ್ಲಿಯ ಕೂಡ ಗಾಜನೂರಿಗೆ ಹೋಗುವಂಥ ಸಂದರ್ಭದಲ್ಲಿ ಪೊಲೀಸ್ ರಕ್ಷಣೆಯಲ್ಲಿ ಹೋಗಬೇಕೆಂಬ ನಿರ್ದೇಶನವನ್ನು ಸರಕಾರವು ಕೊಟ್ಟ ಮೇಲೆ, ತಮಗೆ ಏನಾಗುತ್ತದೆ ಎಂಬ ಧೋರಣೆಯಿಂದ ಅವರು ಹೋಗಿದ್ದಾರೆ. ಘಟನೆ ನಡೆದು ಹೋಗಿದ್ದಾಗಿದೆ. ಘಟನೆ ನಡೆದು ಹೋದ ನಂತರ ಇಡೀ ಕರ್ನಾಟಕದಲ್ಲಿ ಏನಾಗಬಹುದಾಗಿತ್ತು ಎಂಬುದನ್ನು ಕೂಡ ನಾವೆಲ್ಲರೂ ಯೋಚನೆ ಮಾಡಬೇಕಾಗಿತ್ತು. ಇಡೀ ಕರ್ನಾಟಕ ಬೆಂಕಿಯಲ್ಲಿ ಧಗಧಗ ಎಂದು ಉರಿಯಬೇಕಾಗಿತ್ತು, ಬೆಂಗಳೂರು ಪೂರ್ಣ ಸುಟ್ಟು ಬೂದಿಯಾಗಬೇಕಾಗಿತ್ತು, ತಮಿಳುನಾಡಿನಲ್ಲಿ ಕನ್ನಡಿಗರನ್ನು ಕೊಲೆ ಮಾಡುವಂಥ ಘಟನೆ ನಡೆಯಬೇಕಿತ್ತು ಎಂದು ಭಾವಿಸುದಾಗಿದ್ದಲ್ಲಿ ಅಂಥ ಯಾವುದೇ ಘಟನೆಗಳಿಗೆ ಆಸ್ಪದ ಕೊಡದ ಆಡಳಿತ ಕಾರ್ಯಶೈಲಿಯನ್ನು ಎಲ್ಲರೂ ಮೆಚ್ಚಬೇಕಲ್ಲವೆ? ತಮಿಳುನಾಡಿನಲ್ಲಿ ಕನ್ನಡಿಗರನ್ನು ಕೊಲೆ ಮಾಡತಕ್ಕ ಒಂದು ಘಟನೆ ನಡೆಯಬಹುದಿತ್ತು. ಇಷ್ಟೊಂದು ದೊಡ್ಡ ಗಂಡಾಂತರಗಳನ್ನು ಕೂಡ ನಿಭಾಯಿಸತಕ್ಕ ತಾಕತ್ತು ಶ್ರೀ ಎಸ್.ಎಂ. ಕೃಷ್ಣರವರಿಗೆ ಕೊಟ್ಟಿದ್ದರೆ ಅದು ಮಹದೇಶ್ವರ ಬೆಟ್ಟದಲ್ಲಿ ಇರುವ ದೇವರೇ ಕೊಟ್ಟಿರಬಹುದು ಎಂದು ನಾನು ಹೇಳಬಯಸುತ್ತೇನೆ. ಇದರಲ್ಲಿ ಅವರು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿದ ಕೂಡಲೇ ಅದಕ್ಕೂ ಇದಕ್ಕೂ ಹಾಸ್ಯಾಸ್ಪದವಾಗಿ ಹೋಲಿಸಿ ಅವರು ಆಡಳಿತ ಯಂತ್ರವನ್ನು ಮಾಹಿತಿ ತಂತ್ರಜ್ಞಾನಕ್ಕೆ ಅಳವಡಿಸಿಕೊಳ್ಳಲು ಹೋಗುವವರು, ಇದಕ್ಕೂ ಅದಕ್ಕೂ ಏನು ಸಂಬಂಧ? ಇವರು ದೇವಸ್ಥಾನಕ್ಕೆ ಹೋಗಲಿ. ಮಾಹಿತಿ ತಂತ್ರಜ್ಞಾನಕ್ಕೂ ದೇವಸ್ಥಾನಕ್ಕೂ ಏನು ಸಂಬಂಧ? ಇದನ್ನು ವಿರೋಧ ಪಕ್ಷದವರು ವಿರೋಧಕ್ಕಾಗಿಯೇ ಹೇಳತಕ್ಕ ಒಂದು ಹೀಯಾಳಿಸುವ ಮಾತು ಎಂದು ನಾನು ಹೇಳಬಯಸುತ್ತೇನೆ. ಇವತ್ತು ಇಡೀ ದೇಶಕ್ಕೆ ಒಂದು ಮೆಸೇಜ್ ಹೋಗಿದೆ. ಇಂಥ ಒಂದು ಸಂದಿಗ್ಧ ವಾತಾವರಣದಲ್ಲಿ ಒಬ್ಬ ಮುಖ್ಯಮಂತ್ರಿಯಾದವನ ಜವಾಬ್ದಾರಿ ಸ್ಥಾನ ಏನಿದೆ, ಅವನ ತಾಳ್ಮೆ ಎಷ್ಟರಮಟ್ಟಿಗೆ ಪರೀಕ್ಷೆಗೆ ಈಡಾಗಿದೆ? ಅವನ ಆಡಳಿತ ವ್ಯವಸ್ಥೆಯಲ್ಲಿ ಯಾವ ರೀತಿ ಮುಂದಕ್ಕೆ ಹೋಗಬೇಕು ಎನ್ನುವ ಬಗ್ಗೆ ಆ ಒಂದು ಘಟನೆ ನಡೆದದ್ದನ್ನು ಆಧರಿಸಿ ಇಡೀ ದೇಶಕ್ಕೆ ಸಂದೇಶವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು

ಕೊಟ್ಟಿದ್ದಾರೆ. ಇಲ್ಲಿ ಹಾಸ್ಯದ ಮಾತಿಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಜಯಲಲಿತಾರವರು ಹೇಳಿದ್ದಾರೆ, ಡಾ: ಸುಬ್ರಮಣ್ಯಸ್ವಾಮಿಯವರು ಹೇಳಿದ್ದಾರೆ, ಯಾರ್‍ಯಾರೋ ಹೇಳುತ್ತಾರೆ. ರಾಜಕೀಯವಾಗಿ ಬೇಳೆ ಬೇಯಿಸಲಿಕ್ಕೆ ಆಗದೇ ಇದ್ದಂಥ ವ್ಯಕ್ತಿಗಳು ಇದೇ ರೀತಿ ಪತ್ರಿಕೆಯನ್ನು ಬಳಸಿಕೊಂಡು ತಮಗೆ ಯಾವುದೇ ರೀತಿ ಪುರಾವೆಗಳಿಲ್ಲದಿದ್ದರೂ ಕೂಡ ಅವರು ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇವತ್ತು ಅರವತ್ತು ಕೋಟಿ ಕೊಟ್ಟಿದ್ದಾರೆ, ಮೂವತ್ತು ಕೋಟಿ ಕೊಟ್ಟಿದ್ದಾರೆ ಎಂದು ಹೇಳುವಂಥ ಮಾತುಗಳು ಬರುತ್ತಾ ಇವೆ. ಅದು ಬಂದಕೂಡಲೇ ಈ ಸದನದಲ್ಲಿ ಅದಕ್ಕೋಸ್ಕರ ಸಿಬಿಐ ತನಿಖೆಯನ್ನು ಮಾಡಬೇಕಾಗಿಲ್ಲ. ಅದು ಬಂದ ಕೂಡಲೇ ನೀವು ಏನು ಮಾಡಿದ್ದೀರಿ, ಎಷ್ಟು ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಎಷ್ಟು ಖರ್ಚು ಮಾಡಿದ್ದೀರಿ, ಅದನ್ನು ಹೇಳಬೇಕಾದಂಥ ಅವಶ್ಯಕತೆ ಇಲ್ಲ, ಅದಕ್ಕೆ ಉತ್ತರಿಸುವ ಅಗತ್ಯವೂ ಇಲ್ಲ ಎಂದು ನಾನು ಹೇಳಬಯಸುತ್ತೇನೆ. ಆದರೆ ಈ ಸರ್ಕಾರ ಬಹುಶ: ಇಡೀ ದೇಶದಲ್ಲಿರತಕ್ಕ ಎಲ್ಲಾ ಸರ್ಕಾರಗಳಿಗೆ ಒಂದು ಮಾದರಿಯಾಗಿ ಮುಂದುವರೆದಿದೆ. ಇವತ್ತು ಎಲ್ಲಿ ಘಟನೆಯ ಬಿಂಕಿ ಆಗಬೇಕಿತ್ತೋ ಅಲ್ಲಿ ಕೂಡಲೇ ಡಾ: ರಾಜ್‌ಕುಮಾರ್‌ರವರು ಅಪಹರಣವಾದ ತಕ್ಷಣ ರಾಜ್ಯಾದ್ಯಂತ ಇರತಕ್ಕ ಎಲ್ಲಾ ಪೊಲೀಸರನ್ನು ಇಲ್ಲಿ ಕರೆಸಿ ಒಂದು ವಾರಗಳ ಕಾಲ ಇಡೀ ಬೆಂಗಳೂರಿನಾದ್ಯಂತ ಮೂಲೆ ಮೂಲೆಯಲ್ಲಿರತಕ್ಕ ಎಲ್ಲಾ ಕಡೆ ಎಲ್ಲಿ ಘಟನೆ ನಡೆಯಬಹುದು ಎನ್ನುವ ಮಾಹಿತಿಯನ್ನು ಪಡೆದುಕೊಂಡು ಆ ಮೂಲಕ ಆ ಪೊಲೀಸ್ ಸುವ್ಯವಸ್ಥೆಯನ್ನು ಕಾಪಾಡಿದುದು ಏನಿದೆ ಇದು ದೇಶದ ಪ್ರತಿಯೊಬ್ಬ ಮುಖ್ಯಮಂತ್ರಿಗಳೂ ಕೂಡ ಫಾಲೋ ಮಾಡಬೇಕಾದಂಥ ವಿಚಾರವಾಗಿದೆ. ಆದರ ನಂತರ ಕ್ಷಣಾರ್ಧದಲ್ಲಿಯೇ ಮೂರನೆಯ ದಿವಸವೇ ತಮಿಳುನಾಡಿನ ಮುಖ್ಯಮಂತ್ರಿಗಳ ಹತ್ತಿರ ಧಾವಿಸಿ ಅಲ್ಲಿ ಅವರೊಟ್ಟಿಗೆ ಸ್ಪಂದಿಸಿ ಯಾವ ರೀತಿ ಇದನ್ನು ಟ್ಯಾಕಲ್ ಮಾಡಬಹುದು ಎಂದು ಹೇಳಿ ಮಾಡಿದ್ದಾರೆ. ಇಲ್ಲಿ ವೀರಪ್ಪನನ್ನು ಕೊಲೆ ಮಾಡಿಯೋ ಅಥವಾ ಹಿಡಿದುಕೊಂಡು ಬರುವುದು ಮುಖ್ಯವಲ್ಲ. ಡಾ: ರಾಜ್‌ಕುಮಾರ್‌ರವರನ್ನು ಜೀವಂತವಾಗಿ ನಮ್ಮ ಕರ್ನಾಟಕಕ್ಕೆ ಕರೆತರುವುದು ಮುಖ್ಯ ಉದ್ದೇಶ. ಆಮೇಲೆ ಮುಂದಿನ ದಿನದಲ್ಲಿ ನೋಡೋಣ. ಯಾವ ರೀತಿ ವೀರಪ್ಪನ್‌ನನ್ನು ಕಾರ್ಯಾಚರಣೆ ಮಾಡಬಹುದು ಎನ್ನುವುದಕ್ಕೆ ತೀರ್ಮಾನವನ್ನು ಈಗಾಗಲೇ ಮುಖ್ಯಮಂತ್ರಿಗಳು ತೆಗೆದುಕೊಂಡಿರಬಹುದು. ಅದಕ್ಕೆ ಉತ್ತರ ಇಲ್ಲಿ ಕೊಡಬಹುದು. ಆದರೆ ಇವತ್ತು ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ ಈ ಘಟನೆಯಿಂದ ಈ ಮೂರು ಕೂಡ ಎಚ್ಚರಿಕೆಯ ಮಾತುಗಳನ್ನು ಪಡೆದುಕೊಂಡಿದೆ. ರಾಜ್ಯಾಂಗದ ಆಡಳಿತ ವ್ಯವಸ್ಥೆಯ ನ್ಯೂನತೆಗಳು ಎಲ್ಲೆಲ್ಲಿ ಯಾವ ಯಾವ ರೀತಿಯಲ್ಲಿ ಮುದುವರೆಯುತ್ತವೆ, ಈ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಗೂಂಡಾಗಿರಿಗಳು ನಮ್ಮ ರಾಜ್ಯಾಂಗದೊಳಗೆ ಹೋಗುತ್ತಾರೆ, ನಮ್ಮ ಕಾರ್ಯಾಂಗದೊಳಗೆ ಹೋಗುತ್ತಾರೆ, ನ್ಯಾಯಾಂಗದೊಳಗೆ ಹೊಕ್ಕಿಕೊಂಡು, ಈ ದೇಶವನ್ನು ತಮ್ಮ ಮುಷ್ಠಿಯಲ್ಲಿ

ಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ಸೂಚನೆ ಈ ಘಟನೆಯಿಂದ ಬಂದಿದೆ. ಇದಕ್ಕೋಸ್ಕರವೇ ನಾವು ಮರುವಿಮರ್ಶೆ ಮಾಡಬೇಕಾಗಿದೆ. ಇದಕ್ಕೋಸ್ಕರ ನಾವು ಪುನರಾವಲೋಕನ ಮಾಡೋಣ. ಆಡಳಿತ ವ್ಯವಸ್ಥೆಯಲ್ಲಿರತಕ್ಕ ಲೋಪದೋಷಗಳು ಏನಿವೆ, ಅದರ ಬಗ್ಗೆ ಪುನರಾವಲೋಕನವನ್ನು ಮಾಡಲೇಬೇಕಾಗಿದೆ. ಇವತ್ತು ಫಿಜಿಯಲ್ಲಿ ಮಹೇಶ್ ಚೌಧ್ರಿ, ಪ್ರಧಾನಮಂತ್ರಿಯವರನ್ನು ಸದನದ ಒಳಗೆ ವಿರೋಧಪಕ್ಷದವರು ಬಂದೂಕುಧಾರಿಗಳನ್ನು ಕಳುಹಿಸಿ ಅಲ್ಲಿ ಅವರನ್ನು ಬಂಧಿಸಿಟ್ಟರು. ಇಡೀ ಜಗತ್ತಿಗೇ ಜಗತ್ತೇ ಅಲ್ಲಿ ನೆರವು ಕೊಡಬೇಕೆಂದರೂ ಆಗಲಿಲ್ಲ. ಇಡೀ ಭಾರತೀಯ ಒಬ್ಬ ಪ್ರಜೆಯಾಗಿ ಅಲ್ಲಿ ಹೋಗಿ ಅವರು ಪ್ರಧಾನಮಂತ್ರಿಗಳಾಗಿದ್ದರೂ ಈ ದೇಶದ ವಾಜಪೇಯಿ ಸರ್ಕಾರ ಕೂಡ ಬಹಳಷ್ಟು ಸಲ ಆಲೋಚನೆಯನ್ನು ಮಾಡಿದರು. ಅಲ್ಲೇನಾದರೂ ಮಾಡಿ ಅವರನ್ನು ಹೊರಗೆ ತರೋಣ ಎಂದು. ಆಗಲಿಲ್ಲ. ಸಂಧಾನದ ಮೂಲಕ ದಿನವನ್ನು ದೂಡಿ ದೂಡಿ ಕೊನೆಗೂ ಕೂಡ ಆ ಫಿಜಿಯ ವಿರೋಧ ಪಕ್ಷದ ನಾಯಕರು ಯಾರು ಅವರನ್ನು ಬಂಧನದಲ್ಲಿಟ್ಟಿದ್ದರು, ಅವರು ಮಾನಸಿಕವಾಗಿ ತಳಮಳಗೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಿದ ನಂತರ ಅವರಾಗಿಯೇ ಅವರನ್ನು ಬಿಟ್ಟುಕೊಡುವ ಒಂದು ಪರಿಸ್ಥಿತಿಯ ವಾತಾವರಣ ನಿರ್ಮಾಣದ ಘಟನೆಯೇ ಈ ಹಿಂದೆ ನಡೆದುಹೋಗಿದೆ. ಅದನ್ನು ನಾವು ಕಂಪೇರ್ ಮಾಡುವಾಗ ನಮ್ಮ ಈ ಡಾ: ರಾಜ್‌ಕುಮಾರ್ ಅಪಹರಣ ಏನು ಘಟನೆ ನಡೆದಿದೆ, ಅದು ಕೂಡ ಅದೇ ರೀತಿಯಲ್ಲಿ ಆಲೋಚನೆ ಮಾಡಬೇಕಾದ ಒಂದು ಘಟನೆಯಾಗಿದೆ. ಶಾಂತಿ ಸಂಧಾನಗಳನ್ನು ಮುಂದುವರೆಸಿಕೊಂಡು ಸಾಮ, ದಾನ, ಭೇದ, ದಂಡ, ಕೊನೆಗೆ ದಂಡ ಪ್ರಯೋಗ. ಆದರೆ ಸಾಮ, ದಾನ, ಭೇದ, ಇವು ಮೂರರಲ್ಲಿಯೂ ಕೂಡ ಯಶಸ್ವಿಯಾದ ಸರ್ಕಾರ ಈ ರಾಜ್ಯ ಸರ್ಕಾರವೆಂದು ಹೇಳಬಯಸುತ್ತೇನೆ. ಇವತ್ತು ಇದರ ಹಿನ್ನಲೆಯಲ್ಲಿ ಬಹುಶ: ಇನ್ನೊಂದು ವಾರ ಈ ಚರ್ಚೆಯನ್ನು ಮುಂದುವರೆಸಿದರೆ ಇನ್ನಷ್ಟು ಕತೆಗಳು ಈ ಸದನದಲ್ಲಿ ಬರುತ್ತಿತ್ತೊ ಏನೋ? ಇನ್ನಷ್ಟು ಘಟನೆಗಳು ಪತ್ರಿಕೆಯವರಿಗೆ ಬರುತ್ತಿತ್ತು. ಅವರು ಹಾಗಂತೆ, ಇವರು ಹೀಗಂತೆ, ಅವರನ್ನು ಇವರು ಕಳುಹಿಸಿಕೊಟ್ಟರಂತೆ, ನೂರು ಕೋಟಿ ರೂಪಾಯಿಗಳನ್ನು ಇವರು ಕಲೆಕ್ಟ್ ಮಾಡಿದರಂತೆ, ಇವರು ಇನ್ನೂರು ಕೋಟಿ ರೂಪಾಯಿ ಕಲೆಕ್ಟ್ ಮಾಡಿದರು ಎಂದು ಹೇಳಿ ಇನ್ನೊಂದು ವಾರ ಹೋಗಿದ್ದರೆ ಇನ್ನಷ್ಟು ಹತ್ತು ಹಲವಾರು ಘಟನೆಗಳನ್ನು ಬರೆಯುತ್ತಿದ್ದರು. ಇದು ಡಾ: ರಾಜ್‌ಕುಮಾರ್ ಅಪಹರಣದ ಚರ್ಚೆಯನ್ನು ಅವರ ಬಿಡುಗಡೆಯಾದ ಮೂರನೇ ದಿವಸವೇ ನಾವು ತೆಗೆದುಕೊಂಡಿದ್ದರಿಂದ ಈ ಘಟನೆಯ ಬಗ್ಗೆ ಯಾವ ಒಂದು ಕಪೋಲಕಲ್ಪಿತವಾದಂಥ ಕತೆಗಳು ನಿರ್ಮಾಣ ಇತ್ತಲ್ಲ, ಅವೆಲ್ಲಕ್ಕೆ ಫುಲ್‌ಸ್ಟಾಪ್ ಈಗ ಬಂದಿದೆ. ಆದರಿಂದಾಗಿ ನಾನು ಯಾವ ಸರ್ಕಾರದ ಒಂದು ದಿಟ್ಟವಾದಂಥ ಸಾಹಸ, ಸಾಮ, ದಾನ, ಭೇದ, ದಂಡದಲ್ಲಿ ಅತ್ಯಂತ ನಿಪುಣತನದಿಂದ, ಅತ್ಯಂತ ಜಾಣತನದಿಂದ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿಯೊಂದು ಹಂತದಲ್ಲೂ ಎರಡು ದಿನಕ್ಕೊಮ್ಮೆ ವಿರೋಧ ಪಕ್ಷದ ನಾಯಕರುಗಳನ್ನು ಕರೆಸಿ ಮುಖ್ಯಮಂತ್ರಿಗಳು ಪ್ರತಿಯೊಂದು ಘಟನೆಯನ್ನೂ ವಿವರಿಸಿಕೊಂಡು ಯಾವ ರೀತಿಯಲ್ಲೂ ಹೊರಗೆ ಬಾರದಂತೆ, ನಮಗೆ ಈ ದಿಸೆಯಲ್ಲಿ

ಪತ್ರಿಕೆಯವರೂ ಬಹಳ ಒಳ್ಳೆಯ. ಸಹಕಾರವನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆ ಒಂದು ನೂರು ದಿನಗಳ ಕಾಲಾವಧಿಯಲ್ಲಿ ಪತ್ರಿಕೆಗಳ ಅಪಪ್ರಚಾರಗಳು ಇಲ್ಲದೆ ಪತ್ರಿಕೆಗಳೂ ಕೂಡ ಸರ್ಕಾರದೊಂದಿಗೆ ನಿಂತುಕೊಂಡು ಡಾ: ರಾಜ್‌ಕುಮಾರ್‌ರವರನ್ನು ಚಂದವಾಗಿ ಬಿಡಿಸಿಕೊಂಡು ಬರಬೇಕೆನ್ನುವಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಿವೆಯಲ್ಲ, ಇದೇ ನಮ್ಮ ಕರ್ನಾಟಕ ಕನ್ನಡಿಗರ ಒಂದು ದೊಡ್ಡ ಕೀರ್ತಿ ಪತಾಕೆ ಎಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಆಡಳಿತ ವ್ಯವಸ್ಥೆಯ ನ್ಯೂನತೆಯನ್ನು, ಲೋಪದೋಷಗಳನ್ನು, ಕುಂದುಕೊರತೆಗಳನ್ನು, ಪುನರಾವಲೋಕನ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಇಂದಿನಿಂದಲೇ ಪ್ರಾರಂಭ ಮಾಡಬೇಕಾಗುತ್ತದೆ. ಇದರಲ್ಲಿ ವಿರೋಧಪಕ್ಷದವರು ಕೇವಲ ಒಂದು ವಿರೋಧಕ್ಕಾಗಿ ವಿರೋಧ ಮಾಡದೆ ಎಲ್ಲೆಲ್ಲಿ ಸಂದರ್ಭ ಬಂತೋ ಆಗ ಯಾವ ಸಂದರ್ಭದಲ್ಲಿ ಈ ಅಪಹರಣದ ಸಂದರ್ಭದಲ್ಲ ವಿರೋಧಪಕ್ಷಗಳು ಮುಖ್ಯಮಂತ್ರಿಗಳ ಜೊತೆಗೂಡಿ ನಮಗೆ ಸಹಕಾರವನ್ನು ಕೊಟ್ಟಿದ್ದಾರೋ, ಅದೇ ರೀತಿ ಇನ್ನು ಮುಂದಿನ ದಿನಗಳಲ್ಲೂ ಕೂಡ ಈ ನ್ಯೂನತೆಯನ್ನು ಹೋಗಲಾಡಿಸುವಲ್ಲಿ ವೀರಪ್ಪನ್‌ನನ್ನು ಕರ್ನಾಟಕದಲ್ಲೇ ಬಂಧಿಸುವ ರೀತಿಯಲ್ಲಿ ಕರ್ನಾಟಕದವರು ಕಾಡಿನಲ್ಲಿ ಪ್ರವೇಶವಾದಾಗಲೇ ಬಂಧಿಸುವ ಒಂದು ವ್ಯವಸ್ಥೆಯಾಗುವ ರೀತಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಇನ್ನಷ್ಟು ಹೆಚ್ಚು ಶಕ್ತಿ ಕೊಡಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಏಕೆ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರೆ ಮನುಷ್ಯ ಯಕಶ್ಚಿತ್, ನನ್ನಿಂದಲೇ ಸಾಧ್ಯ, ನಾನು ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್ ಬಲ್ಲೆ ಎಂದು ಹೇಳಿದರೆ ಆಗುವುದಿಲ್ಲ. ದೈವಿಕ ಬಲ ಒಂದು ಬೇಕು. ಅದೃಶ್ಯವಾದಂಥ ಒಂದು ಶಕ್ತಿ ನಮ್ಮ ಗ್ರಹಗತಿಗಳ ಮೇಲೆ ಅದು ಸ್ಪಂದಿಸುವಾಗ ನಮಗೆ ದೈವಿಕ ಶಕ್ತಿಯ ಪ್ರಭಾವ ಇಲ್ಲದಿದ್ದಲ್ಲಿ ನಮ್ಮ ಶಕ್ತಿ ಒಂದೇ ಅಲ್ಲ, ಯಾವ ಶಕ್ತಿಯೂ ನಡೆಯುವುದಿಲ್ಲ. ಆದರೆ ದೈವಿಕ ಬಲ ನಮ್ಮೊಂದಿಗಿದ್ದರೆ ಆಗ ನಮಗೆ ಮನ: ಪ್ರೇರೇಪಣೆ ಮಾಡುತ್ತದೆ. ಇಂಥ ಘಟನೆ ಬಂದಾಗ ಯಾವುದೇ ರೀತಿ ಮನೋವಿಕಲರಾಗದೆ, ಯಾವುದೇ ರೀತಿ ಯದ್ವಾತದ್ವವಾಗಿ ಸ್ಟೇಟ್‌ಮೆಂಟನ್ನು ಕೊಡದೆ, ಯಾವುದೇ ರೀತಿ ಯದ್ವಾತದ್ವವಾಗಿ ಕಾರ್ಯಪ್ರವೃತ್ತರಾಗದೆ ಒಂದು ದಿಟ್ಟವಾದಂಥ ನಿಲುವನ್ನು, ಸಮಗ್ರವಾದಂಥ ನಿಲುವನ್ನು ಈ ರಾಜ್ಯದ ಸಮಸ್ತ ಕನ್ನಡಿಗರ ಪರವಾಗಿ ತೆಗೆದುಕೊಂಡು ಆ ಮೂಲಕ ಡಾ: ರಾಜ್‌ಕುಮಾರ್‌ರವರನ್ನು ಕರ್ನಾಟಕದೊಳಗೆ ಪ್ರವೇಶ ಮಾಡುವಂತೆ ಮಾಡಿದ ಈ ಸರ್ಕಾರಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ಈ ಸದನ ಇದರ ಬಗ್ಗೆ ಯುನಾನಿಮಸ್ ಆಗಿ ಇಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸಬೇಕು. ಮುಖ್ಯಮಂತ್ರಿಗಳಿಗೆ ಹಾಗೆಯೇ ಗೃಹಮಂತ್ರಿಗಳಾಗ ಖರ್ಗೆಯವರೂ ಕೂಡ ಅಷ್ಟೇ ಜವಾಬ್ದಾರಿಯುತವಾಗಿ ಇಬ್ಬರೂ ಅಣ್ಣತಮ್ಮಂದಿರ ಹಾಗೆ ವರ್ತಿಸಿದರು. ಇಲ್ಲೊಂದು ಘಟನೆ ನಡೆಯಿತು. ನಮ್ಮ ಸದನ ಮುಗಿದ ಕೂಡಲೇ ಎಲ್ಲರೂ ಹೊರಟುಹೋಗುವಾಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾಗ ಖರ್ಗೆಯವರು ಬಂದು ಇಬ್ಬರೂ ಆಲಂಗಿಸಿಕೊಂಡರು. ಈ ಇಬ್ಬರೂ ಮಾನ್ಯ ಖರ್ಗೆಯವರು ಮತ್ತು ಮಾನ್ಯ ಕೃಷ್ಣಾರವರು ತೆಗೆದುಕೊಂಡ ಒಂದು ದಿಟ್ಟತನ, ಅಲ್ಲಿಯೂ ಮಧ್ಯದಲ್ಲಿ ಕೆಲವರು ಸ್ವಲ್ಪ ವಿಷವನ್ನು ಹಾಕುವುದಕ್ಕೆ ಹೊರಟರು. ಖರ್ಗೆಯವರಿಗೂ,

ಕೃಷ್ಣರವರಿಗೂ ಭಿನ್ನಾಭಿಪ್ರಾಯ ಬಂದಿದೆ ನೋಡಿ, ಈ ಘಟನೆಯಿಂದ ಎಲ್ಲಾ ಗೊತ್ತಾಗುತ್ತದೆ ಎಂದು ಹೇಳಿ ಒಂದು ವಿಷಬೀಜ ಹಾಕುವುದಕ್ಕೂ ಪ್ರಯತ್ನ ನಡೆದಿತ್ತು. ಆದರೆ ಇದ್ಯಾವುದಕ್ಕೂ ಅವಕಾಶವನ್ನು ಕೊಡದೆ ಅವರಿಬ್ಬರೂ ಅಣ್ಣತಮ್ಮಂದಿರಂತೆ ಈ ರಾಜ್ಯದ ಸಮಸ್ತ ನಾಯಕರು ಎನ್ನುವುದನ್ನು ತೋರಿಸಿಕೊಟ್ಟು ಎಲ್ಲರಿಗೂ ಅಭಿನಂತನಾರ್ಹರು ಎನ್ನುವ ರೀತಿಯಲ್ಲಿ ವರ್ತಿಸಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಉಪಾಧ್ಯಕ್ಷರೆ, ಯಾರು ಹೇಳಿದರು? ಈ ಭಾಗದಲ್ಲಿ ಯಾರೂ ಹೇಳಿಲ್ಲ. ಆ ಭಾಗದಲ್ಲಿ ಯಾರಾದರೂ ಹೇಳಿದ್ದಾರೋ ಏನೋ ಎಂದು ಗೊತ್ತಿಲ್ಲ.

ಶ್ರೀ ಯು.ಆರ್. ಸಬಾಪತಿ :— ನಾನು ಈ ಭಾಗದಲ್ಲಿ ಹೇಳಿದ್ದಾರೆ ಎಂದು ಹೇಳುವುದಿಲ್ಲ. ಆ ಭಾಗದಲ್ಲಿ ಹೇಳಿದ್ದಾರೆ ಎಂದು ನಾನು ಹೇಳಲಿಕ್ಕೆ ಹೋಗಲಿಲ್ಲ. ಇವತ್ತು ಪರಿಸ್ಥಿತಿ ಪ್ರಸ್ತುತವಾಗಿದೆ. ಇವತ್ತು ಶ್ರೀನಿವಾಸಗೌಡರು ಮಾತನಾಡುವಾಗ ಹೇಳಿದರು. ಶ್ರೀನಿವಾಸಗೌಡರು ಹೇಳಿದ್ದನ್ನು ನೀವು ಕೇಳಲಿಲ್ಲವೇ? ಅವರು ಹೇಳಿದರು, ಈ ರಾಜ್ಯದ ಜನ ರಾಜ್‌ಕುಮಾರ್‌ರಂಥವರಿಗೆ ರಕ್ಷಣೆ ಕೊಡುವುದಕ್ಕೆ ಆಗದಿದ್ದಂಥ ಪರಿಸ್ಥಿತಿಯಲ್ಲಿ ಜನ ಸಾಮಾನ್ಯರಿಗೆ ರಕ್ಷಣೆಯನ್ನು ಕೊಡಬಹುದೇ ಎನ್ನುವ ಬಗ್ಗೆ ಆತ್ಮವಂಚನೆ ಮಾಡಬೇಕು ಎಂದು ಹೇಳಿದರು. ರಾಜ್‌ಕುಮಾರ್‌ರವರಿಗೆ ನಾವು ರಕ್ಷಣೆಯನ್ನು ಕೊಡಲಿಲ್ಲವೇ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಈಗ ಪೂಜೆ ಪುನಸ್ಕಾರಗಳ ಬಗ್ಗೆ ಮಾನ್ಯ ಸಭಾಪತಿಯವರು ಹೇಳಿದರು. ಅವರು ನಾಯಕರು ಜನಾರ್ಧನ ಪೂಜಾರಿಯವರು ಕೊಲ್ಲೂರಿನಲ್ಲಿ ಉರುಳು ಸೇವೆಯನ್ನು ಮಾಡಿದರು. ವೀರೇಂದ್ರ ಹೆಗಡೆಯವರು ಅದರ ಬಗ್ಗೆ ಮಾತನಾಡಿದರು. ವೀರೇಂದ್ರ ಹೆಗಡೆಯವರು ಒಂದು ಕಾರ್ಯಕ್ರಮದಲ್ಲಿ ನಾನೂ ಸಹ ಇದ್ದೆ. ಆ ಸಂದರ್ಭದಲ್ಲಿ ಅವರು ಮಾತನಾಡುವಾಗ ಹೇಳಿದರು, ಅನೇಕ ಜನ ಉರುಳು ಸೇವೆ ಮಾಡಿದ್ದಾರೆ, ಬೇರೆ ಬೇರೆ ರೀತಿ ಪೂಜೆ ಪುನಸ್ಕಾರಗಳನ್ನು ಮಾಡಿದ್ದಾರೆ,ಆದೂ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯಾಗಲಿಲ್ಲ, ಏಕೆ? ಅವರುಗಳು ನಿರ್ಮಲವಾದ ಹೃದಯದಿಂದ ಮಾಡಲಿಲ್ಲ, ಕೆಲವರು ಪಬ್ಲಿಸಿಟಿಗೋಸ್ಕರವಾಗಿ ಇದನ್ನು ಮಾಡುತ್ತಿದ್ದಾರೆ, ಆದರಿಂದ ಅದು ದೇವರಿಗೆ ಮುಟ್ಟಲಿಲ್ಲ ಎನ್ನುವ ಮಾತನ್ನು ಹೇಳಿದರು. ನಾನು ಆ ಸಂದರ್ಭದಲ್ಲಿ ಇದ್ದೆ. ಅದಕ್ಕೋಸ್ಕರ ಪೂಜೆ ಪುನಸ್ಕಾರಗಳನ್ನೆಲ್ಲಾ ಮಾಡಿ ಬಿಡುಗಡೆಯಾಗುವುದಾಗಿದ್ದರೆ ಎಲ್ಲಾ ಆಗುತ್ತಿತ್ತು.

ಶ್ರೀ ಯು.ಆರ್. ಸಭಾಪತಿ :— ನಾವು ಈಗ ಮುಖ್ಯಮಂತ್ರಿಗಳು ಪಬ್ಲಿಸಿಟಿಗೋಸ್ಕರ ಪೂಜೆ ಮಾಡಿದರು ಎಂದು ನೀವು ಹೇಳುವುದೇ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನಾನು ಮುಖ್ಯಮಂತ್ರಿಗಳ ಬಗ್ಗೆ ಹೇಳಲಿಲ್ಲ. ಇಡೀ ರಾಜ್ಯಾದ್ಯಂತ ಆದ ಸೇವೆಯ ಬಗ್ಗೆ ನಾನು ಹೇಳಿದೆ.

ಶ್ರೀ ಯು.ಆರ್. ಸಭಾಪತಿ :— ಈಗ ಪೂಜೆ ಪುನಸ್ಕಾರಗಳು, ಉರುಳು ಸೇವೆಗಳು ಇದೆಲ್ಲಾ ಅವರ ಅಭಿಮಾನಿಗಳು ಒಂದೊಂದು ರೀತಿಯಲ್ಲಿ ಅವರು ಮಾಡಿಕೊಂಡು ಹೋಗಿದ್ದಾರೆ. ಅವನ್ನು ನಾವು ಇಲ್ಲೇಕೆ ತರಬೇಕೆಂದು ಕೇಳಿದನಷ್ಟೇ ಹೊರತು ಬೇರೆ ಇನ್ನೇನೂ ಅಲ್ಲ. ಅವರು ಮಾತನಾಡುತ್ತಾ ಡಾ: ರಾಜ್‌ಕುಮಾರ್ ಅವರಂಥ ಒಬ್ಬ ದೊಡ್ಡ ಕಲಾವಿಧನಿಗೆ ಸರ್ಕಾರ ರಕ್ಷಣೆ ಕೊಡುವುದಕ್ಕೆ ಆಗದಿದ್ದ ಮೇಲೆ ಇನ್ನು ಜನಸಾಮಾನ್ಯರಿಗೆ ರಕ್ಷಣೆ ಕೊಡುವುದಕ್ಕೆ ಹೇಗೆ ಸಾಧ್ಯವಾದೀತೆಂದು ಹೇಳಿದರು. ಅವರ ವಾದ ಸರಿಯಲ್ಲ, ತಪ್ಪು ಎಂದು ನಾನು ಹೇಳಬಯಸುತ್ತೇನೆ. ವಿರೋಧಿಸುವದಕ್ಕೋಸ್ಕರ ವಿರೋಧ ಮಾಡುವುದು ಸರಿಯಲ್ಲ. ಅತ್ಯಂತ ಹೆಮ್ಮೆ ಪಡತಕ್ಕಂಥ ಕಾರ್ಯವನ್ನು ಸರ್ಕಾರ ಮಾಡಿದೆಯೆಂದು ತಿಳಿಸುತ್ತಾ ಇದಕ್ಕಾಗಿ ನಾನು ಸರ್ಕಾರಕ್ಕೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶವಿತ್ತ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಗುಂಡಪ್ಪ ವಕೀಲ್ (ಬಿರಾದಾರ್) :— ಸನ್ಮಾನ್ಯ ಉಪಾಧ್ಯಕ್ಷರೇ, ನಾವೆಲ್ಲರೂ ಚಿಕ್ಕಮಕ್ಕಳು ಚಾಕಲೇಟ್ ತಿನ್ನುವುದನ್ನು ನೋಡಿದ್ದೇವೆ. ಮಕ್ಕಳು ಚಾಕಲೇಟನ್ನು ಬಾಯಿಯಲ್ಲಿ ಹಾಕಿಕೊಂಡ ತಕ್ಷಣವೇ ಗಬಗಬನೆ ನುಂಗುವುದಿಲ್ಲ. ಬಾಯಿಯಲ್ಲಿರುವ ಚಾಕಲೇಟನ್ನು ನಾಲಿಗೆಯಿಂದ ಅತ್ತಿಂದಿತ್ತ ಹೊರಳಾಡಿಸುತ್ತಾ, ನಾಲಿಗೆಯಲ್ಲಿ ನೀರು ಬರಿಸಿಕೊಂಡು ಅದರ ರುಚಿ ಸವಿಯುತ್ತಾ ಮೆಲ್ಲಮೆಲ್ಲನೆ ನಿಧಾನವಾಗಿ ತಿನ್ನುತ್ತಾರೆ. ಅದೇ ರೀತಿ ಇವೊತ್ತು ಡಾ: ರಾಜ್‌ಕುಮಾರ್‌ಅವರ ಅಪಹರಣ ಪ್ರಕರಣವನ್ನು ಒಂದಕ್ಕೊಂದು ಇರುವ ಸಂಬಂಧದ ಬಗ್ಗೆ ನಮ್ಮ ಮೆದುಳಿನಲ್ಲಿ ವಿಚಾರವನ್ನು ಪೋಸ್ಟ್ ಮಾರ್ಟೆಂ ಮಾಡಿಕೊಂಡು ಹೋಗಬೇಕಾಗುತ್ತದೆ. ಡಾ: ರಾಜ್‌ಕುಮಾರ್‌ರವರು ದೊಡ್ಡ ಮನುಷ್ಯರೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಇದುವರೆಗೂ ವೀರಪ್ಪನ್ ಕೈಯಲ್ಲಿ 130 ಜನರು ಹತರಾದರಲ್ಲ, ಅವರೆಲ್ಲರೂ ಈ ಭಾರತ ದೇಶದ ಪ್ರಜೆಗಳು. ಇವರುಗಳಿಗೂ ಮತ್ತು ಡಾ: ರಾಜ್‌ಕುಮಾರ್ ಅವರಿಗೂ ಅಂತಹ ವ್ಯತ್ಯಾಸವೇನೂ ಇಲ್ಲ. ರಾಜ್‌ಕುಮಾರ್ ಅಪಹರಣದ ಹಿನ್ನಲೆಯಲ್ಲಿ ಕಳೆದ ಸುಮಾರು 30-35 ವರ್ಷಗಳಿಂದಲೂ ತಾಂಡವಾಡುತ್ತಿರುವ ವೀರಪ್ಪನ್ ಪ್ರವೃತ್ತಿ ಬಗ್ಗೆ ನಾವೆಲ್ಲರೂ ವಿಚಾರ ಮಾಡಬೇಕಾಗಿದೆ. ಅಷ್ಟು ವರ್ಷಗಳಿಂದಲೂ ಆತ ಸರ್ಕಾರದ ವಿರುದ್ಧ ಯುದ್ಧ ಸಾರಿದ್ದಾನೆ. ವರ್ಷ, ಎರಡು ವರ್ಷಗಳಿಗೊಮ್ಮೆ ವೀರಪ್ಪನ್‌ನಿಂದ ಇಂತಹ ಪ್ರಕರಣಗಳು ಜರುಗುತ್ತಿದೆ. ಆತ ಕೊಲೆ, ದರೋಡೆ, ಅಪಹರಣ ಮತ್ತು ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದಾನೆ. ನಮ್ಮನ್ನು ರಕ್ಷಿಸುವುದಕ್ಕೋಸ್ಕರ ಇವೊತ್ತು ನಮ್ಮ ದೇಶದಲ್ಲಿರುವ ಮಿಲಿಟರಿ ಸೇವೆಗೆ ಒಟ್ಟು ಆದಾಯದಲ್ಲಿ ಶೇಕಡ 40ರಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟು ಹಣವನ್ನು ಪೊಲೀಸ್,

ಸಿಆರ್‌ಎಫ್, ಬಾರ್ಡರ್ ಸೆಕ್ಯುರಿಟಿ ಫೋರ್ಸ್, ಇಂಟೆಲಿಜೆನ್ಸ್ ಸೇವೆಗೋಸ್ಕರ ಖರ್ಚು ಮಾಡುತ್ತಿದ್ದೇವೆ. ಕಳೆದ ಮೂವತ್ತು ವರ್ಷಗಳಿಂದಲೂ ಒಬ್ಬ ಕಾಡುಗಳ್ಳನನ್ನು ಹಿಡಿಯುವುದಕ್ಕಾಗಲಿಲ್ಲವೆಂದರೆ ನಮ್ಮ ರಾಜ್ಯಕ್ಕೆ, ದೇಶಕ್ಕೆ ಇದು ನಾಚಿಕೆಯಾಗುವ ಸಂಗತಿಯಾಗಿದೆ. ಇವೊತ್ತು ಟೀಕೆ ಮಾಡುವುದಕ್ಕೋಸ್ಕರ ಮಾತನಾಡುವುದಿಲ್ಲ. ಯಾವನಿಗಾದರೂ ಒಂದು ರೋಗ ಬಂದಿದ್ದು, ರೋಗ ಗುಣವಾಗುವುದಕ್ಕೆ ಯಾರು ಏನೇ ಔಷಧೋಪಚಾರ ಹೇಳಿದರೂ ಆತ ತೆಗೆದುಕೊಳ್ಳುತ್ತಾನೆ. ಅತನಿಗೆ ರೋಗ ಗುಣಮುಖವಾದ ಬಳಿಕ, ನೀನೇಕೆ ಆ ಗುಳಿಗೆ ತೆಗೆದುಕೊಂಡೆ? ನೀನೇಕೆ ಈ ಗುಳಿಗೆ ತೆಗೆದುಕೊಂಡೆ? ಎಂದರೆ ತೆಗೆದುಕೊಂಡ ಯಾವ ಗುಳಿಗೆಯಿಂದ ತಮ್ಮ ರೋಗ ವಾಸಿಯಾಗಿದೆಯೆಂದು ಆತ ವಿಚಾರ ಮಾಡುವುದಿಲ್ಲ. ರೋಗ ವಾಸಿಯಾದರೆ ಸಾಕೆನ್ನುವ ಮಟ್ಟದಲ್ಲಿರುತ್ತಾನೆ. ಅದೇ ರೀತಿ ಅಪಹರಣವಾಗಿದ್ದ ರಾಜ್‌ಕುಮಾರ್ ಅವರು ಸಹ ಬಿಡುಗಡೆಯಾಗಿ ಬಂದಿದ್ದಾರೆ, ಅಪಹರಣ ಪ್ರಕರಣ ಮುಗಿಯಿತು. ರಾಜ್‌ಕುಮಾರ್ ಅವರನ್ನು ಬಿಡುಗಡೆಗೊಳಿಸುವುದಕ್ಕೆ ಸಂಧಾನಕಾರರಾಗಿ ನೆಡುಮಾರನ್, ನಕ್ಕೀರನ್ ಗೋಪಾಲ್, ಮತ್ತು ಯಾರ್‍ಯಾರು ಹೋದರು? ಸರ್ಕಾರ ಏನೇನು ಪ್ರಯತ್ನ ಮಾಡಿತು ಎಂಬುದು ಮುಖ್ಯವಲ್ಲ. ಈ ಅಪಹರಣ ಪ್ರಕರಣದಿಂದ ಇಡೀ ರಾಜ್ಯಕ್ಕೆ, ದೇಶಕ್ಕೆ ಮತ್ತು ಜಗತ್ತಿಗೆ ಏನು ಸಂದೇಶ ಹೋಗಿದೆ? What is the message this episode has given to the nation and the world? That is an important factor, to be disucssed in this House. We are not ordinary persons. ಈ ವಿಧಾನಸಭೆಯಲ್ಲಿರುವ 224 ಶಾಸಕರುಗಳಾದ ನಾವುಗಳು ಮೊದಲನೇ ದರ್ಜೆಯ ನಾಗರೀಕರಾಗಿದ್ದು ಇಡೀ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿದ್ದೇವೆ. ಚಾಣಕ್ಯನು ತನ್ನ ಅರ್ಥಶಾಸ್ತ್ರದಲ್ಲಿ ಒಂದೆಡೆ ಈ ರೀತಿ ಹೇಳುತ್ತಾನೆ. 'ಯಾವ ರಾಜ ತನ್ನ ಪ್ರಜೆಗಳಿಂದ ಕರವನ್ನು ವಸೂಲು ಮಾಡಿ ಅವರಿಗೆ ಎಲ್ಲಾ ರೀತಿಯಿಂದ ಸುರಕ್ಷತೆಯನ್ನು ಒದಗಿಸುವುದಿಲ್ಲವೋ, ಅಂತಹ ರಾಜನ ಆಸ್ಥಾನದಲ್ಲಿ, ರಾಜ್ಯದಲ್ಲಿ ದರಿದ್ರ ದೇವತೆ ತಾಂಡವವಾಡುತ್ತಾಳೆ, ಕಾನೂನು ವ್ಯವಸ್ಥೆ ಕೆಟ್ಟುಹೋಗುತ್ತದೆ' ಸರ್ಕಾರ ಇವೊತ್ತು ಜನರಿಂದ ಕರವನ್ನು ವಸೂಲು ಮಾಡುತ್ತಿದ್ದು, ಅವರಿಗೆ ಯಾವ ರೀತಿಯ ರಕ್ಷಣೆ ಕೊಡುತ್ತಿದೆ ಎನ್ನುವುದನ್ನು ಹೇಳಬೇಕು. ಇವೊತ್ತು ನಮ್ಮ ರಾಜ್ಯದಲ್ಲಿ ಐ.ಎಸ್.ಐ ಚಟುವಟಿಕೆಗಳು ನಿರಂತರವಾಗಿ ಜರಗುತ್ತಿದೆ, ಚರ್ಚ್‌ಗಳಲ್ಲಿ ಬಾಂಬ್ ಸ್ಫೋಟವಾಯಿತು, ಕರಾವಳಿ ಪ್ರದೇಶದಲ್ಲಿ ಮಾಫಿಯಾ ಗ್ಯಾಂಗ್ ಚಟುವಟಿಕೆ, ಕಾರವಾರದ ಶಾಸಕರಾಗಿದ್ದ ಅಸ್ನೋಟಿಕರ್ ಅವರ ಹತ್ಯೆಯಾಯಿತು. ಅದೇ ರೀತಿ ರಾಜ್ಯದ ರಾಯಚೂರು, ಬೀದರ್ ಮತ್ತು ತುಮಕೂರಿನ ಪಾವಗಡದಲ್ಲಿ ನಕ್ಸಲೈಟ್ ಚಟುವಟಿಕೆಗಳಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಸುಪಾರಿ ಕೊಲೆಗಳಾಗುತ್ತಿವೆ. ನನಗೆ ಸುಪಾರಿ ಕೊಲೆ ಬೆದರಿಕೆ ಬಂದಿರುವ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾಗಿದೆ. ಇವೊತ್ತು ಸುಪಾರಿ ಕೊಲೆಯಲ್ಲಿ ನನ್ನನ್ನು ಹತ್ಯೆ ಮಾಡುವುದಕ್ಕೆ ಗುತ್ತಿಗೆ ತೆಗೆದುಕೊಂಡಿದ್ದಾರೆ. 'ಸಂಜೆ ಏಳು ಗಂಟೆಯಾದ ಬಳಿಕ ನಾವು

ಮನೆಯಿಂದ ಹೊರಗೆ ಬರಬೇಡಿ, ಕಾಲ್ನಡಿಗೆಯಲ್ಲಿ ತಿರುಗಾಡಬೇಡಿ, ಪೊಲೀಸರಿಗೆ ಮಾಹಿತಿ ನೀಡದೆ ನೀವು ಎಲ್ಲಿಗೂ ಹೋಗಬೇಡಿ' ಎಂದು ಒಬ್ಬ ಎಂ.ಎಲ್.ಎ ಆಗಿರುವ ನನಗೆ ಪೊಲೀಸರು ಹೇಳುತ್ತಾರೆ. ಇವೊತ್ತು ಎಂ.ಎಲ್.ಎ.ಗೆ ಇಂತಹ ಪರಿಸ್ಥಿತಿ ಇರುವಾಗ ಇನ್ನು ಇಡೀ ಕರ್ನಾಟಕದ ಕಾನೂನು ವ್ಯವಸ್ಥೆ ಬಗ್ಗೆ ನಾವು ಪ್ರಾಮಾಣಿಕವಾಗಿ ಮಾತನಾಡಬೇಕಾಗುತ್ತದೆ. ಇವೊತ್ತು ಪಾರ್ಲಿಮೆಂಟ್‌ನಲ್ಲಿ, ವಿಧಾನಸಭೆಯಲ್ಲಿ ಒಳ್ಳೆಯ ಕಾನೂನು ಅಂಗೀಕರಿಸಿದ ಮಾತ್ರಕ್ಕೆ ರಾಜ್ಯ, ರಾಷ್ಟ್ರ ಉದ್ಧಾರವಾಗುವುದಿಲ್ಲ. ಕಾನೂನನ್ನು ನಿಷ್ಠುರವಾಗಿ ಅನುಷ್ಠಾನಗೊಳಿಸಬೇಕಾಗುತ್ತದೆ, ಅದನ್ನು ಪಾಲಿಸಬೇಕಾಗುತ್ತೆ. ಆ ಧೈರ್ಯ ನಮ್ಮಲ್ಲಿರಬೇಕು. ಇವೊತ್ತು ನಾವು ಕತ್ತಲೆ ಕೋಣೆಯಲ್ಲಿ ನಿಂತುಕೊಂಡು 'ಕತ್ತಲು, ಕತ್ತಲು' ಎಂದು ಕೂಗಾಡಿದರೆ ಕತ್ತಲು ಹೋಗುವುದಿಲ್ಲ. ಕತ್ತಲೆ ಕೋಣೆಯಲ್ಲಿ ಬೆಳಕು ಬರಲು ದೀಪ ಬೆಳಗಿಸಬೇಕಾಗುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ. ಕಾನೂನು ವ್ಯವಸ್ಥೆಯನ್ನು ಎತ್ತಿಹಿಡಿಯುವುದು ಈ ಸದನದಲ್ಲಿರುವ ಪ್ರತಿಯೊಬ್ಬ ಶಾಸಕರ ಕರ್ತವ್ಯವಾಗಿದೆ. ಐದು ವರ್ಷಗಳ ಕಾಲ ಆಡಳಿತ ನಡೆಸುವ ಸರ್ಕಾರವನ್ನು ನಾವು ಟೀಕಿಸಿದರೆ ಸಾಲದು. ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಪ್ರಶ್ನೆ ಕೇಳುತ್ತೇನೆ. ಜನತಾದಳದ ಮಾನ್ಯ ಮುಖಂಡರು ಇದರಿಂದ ತಪ್ಪು ತಿಳಿದುಕೊಳ್ಳಬಾರದು. 1985ನೇ ಇಸವಿಯಲ್ಲಿ ಇದೇ ವೀರಪ್ಪನ್ ಅನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದರು. ಬಂಧಿಸಿ ಮೂರು ದಿವಸಗಳವರೆಗೆ ಆತನನ್ನು ಐ.ಬಿ.ಯಲ್ಲಿಟ್ಟಿದ್ದರು. ಪೊಲೀಸರು ಅರಣ್ಯಾಧಿಕಾರಿಗಳ ಬಳಿ ಹೋಗಿ 'ಈ ವೀರಪ್ಪನ್ ನಾನ್-ಬೇಲಬಲ್ ಕೇಸ್‌ನಲ್ಲಿ ನಮಗೆ ಬೇಕಾಗಿರುವುದರಿಂದ, ಈತನನ್ನು ನಮ್ಮ ವಶಕ್ಕೆ ಒಪ್ಪಿಸಿ' ಎಂದು ಕೇಳಿಕೊಂಡಿರುವುದು ದಾಖಲೆಯಲ್ಲಿದೆ. ಇಷ್ಟೆಲ್ಲಾ ಮಾಡಿದರೂ ಕೊನೆಗೆ ಅರಣ್ಯಾಧಿಕಾರಿಗಳು ವೀರಪ್ಪನ್‌ನನ್ನು ಪೊಲೀಸಿನವರ ವಶಕ್ಕೆ ಕೊಡಲಿಲ್ಲ. ಅನಂತರ ಆತ ಪರಾರಿಯಾಗಿದ್ದಾನೆ. ಆತ ಪರಾರಿಯಾಗಿರುವ ಹಿಂದೆ ಯಾರ ಕೈವಾಡವಿದೆ ಎಂಬ ಸಂಗತಿ ಇವೊತ್ತು ಕರ್ನಾಟಕದ ಎಲ್ಲಾ ಜನರಿಗೂ ಗೊತ್ತಾಗಬೇಕು.

*1.30* ಪಿ.ಎಂ.

ವೀರಪ್ಪನ್ ಕಾಡಿನಲ್ಲಿ ಇರುವುದಿಲ್ಲ, ದೊಡ್ಡ ದೊಡ್ಡ ನಾಯಕರ ಮನೆಯಲ್ಲಿ ಇರುತ್ತಾನೆ, ಅವನಿಗೆ ಸಹಾಯ ಮಾಡಲು ಬಹಳ ದೊಡ್ಡ ದೊಡ್ಡ ನಾಯಕರು ಇದ್ದಾರೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಈ ಸಮಯದಲ್ಲಿ ನಾವು ಎಷ್ಟು ದೃಢಸಂಕಲ್ಪದಿಂದ ಅವನ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಇದರ ಬಗ್ಗೆ ಸದನದ ನಾಯಕರು ಹೇಳಬೇಕು. ಡಾ: ರಾಜ್‌ಕುಮಾರ್‌ರವರೇ ಸ್ವತಃ ಬಿಡುಗಡೆಯಾಗಿ ಬಂದಮೇಲೆ ಪತ್ರಿಕಾ ಹೇಳಿಕೆಯಲ್ಲಿ ಬಿಡುಗಡೆಯಾದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಇಲ್ಲಿ ಹೆಚ್ಚು ಚರ್ಚೆ ಆಗಬೇಕಾಗಿಲ್ಲ. ಆದರೆ ನಮ್ಮಲ್ಲಿರುವ ಕಾನೂನಿನ

ವ್ಯವಸ್ಥೆಯ ಬಗ್ಗೆ ಚರ್ಚೆಯಾಗಬೇಕಾಗಿದೆ. ಸಂಸತ್ತಿನಲ್ಲಿ ನಿದ್ರೆ ಮಾಡುವಂಥ ಜನರು ದೇಶಕ್ಕೇನು ಜಾಗ್ರತೆ ಮಾಡುತ್ತಾರೆ ಎಂಬ ಬಗ್ಗೆ ನಮ್ಮಲ್ಲಿ ಒಂದು

*(ಹಿಂದಿಯಲ್ಲಿ ಮಾತನಾಡಿದರು)*

ಶಹರಿಯನ್ನು ಹೇಳುತ್ತಾರೆ. ಈ ದೇಶಕ್ಕೆ ಈ ಜನರು ಏನು ಎಚ್ಚರಿಕೆ ಕೊಡುತ್ತಾರೆ. ಸಂಸತ್ತಿಗೆ ಹೋದಂಥ ಜನರು ನಿದ್ರೆಯನ್ನೇನು ಮಾಡುತ್ತಾರೆ ಅಂಥವರು ದೇಶದ ಜನರನ್ನು ಜಾಗ್ರತೆ ಮಾಡಲು ಸಾಧ್ಯವಿಲ್ಲ ಎಂಬುದು ಇದರ ಅರ್ಥವಾಗಿದೆ. ಸರ್ವಜ್ಞನು "ಯಾವ ಸಮಾಜವನ್ನು ಸತ್ಯ, ನೀತಿ, ಧರ್ಮದಿಂದ ಕಟ್ಟುವುದಿಲ್ಲವೋ ಆ ಸಮಾಜ ಉಳಿಯುವುದಿಲ್ಲವೆಂದು" ಹೇಳಿದ್ದಾನೆ. ಆ ಸರ್ವಜ್ಞನ ವಚನವನ್ನು ಇಲ್ಲಿ ನೆನಪು ಮಾಡಿಕೊಡಬಯಸುತ್ತೇನೆ. 'ಎಣ್ಣೆ ಬತ್ತಿಗಳೆರಡು ಹೊತ್ತಿ ಉರಿಯುವ ತೆರದಿ, ಎಣ್ಣೆ ಬತ್ತಿಗಳೆರಡು ಹೊತ್ತಿ ಉರಿಯುವ ತೆರದಿ ನ್ಯಾಯ ನೀತಿಗಳೆರಡು ಬೆಳಗಿಹದು ಜೋಡದಲೆ ಕತ್ತಲೆಯೂ ಈ ಜಗದೊಳು ಸರ್ವಜ್ಞ' ಎಣ್ಣೆ ಬತ್ತಿಗಳು ಯಾವ ರೀತಿ ಹೊತ್ತಿ ಉರಿಯುತ್ತವೋ ಆ ರೀತಿ ನ್ಯಾಯ, ನೀತಿ ಯಾವ ಸರ್ಕಾರದಲ್ಲಿ, ನಾಡಿನಲ್ಲಿ, ದೇಶದಲ್ಲಿ ಬೆಳಗುತ್ತವೋ ಆ ದೇಶದಲ್ಲಿ ಕತ್ತಲೆ ಓಡಿ ಹೋಗುತ್ತದೆಂದು ಸರ್ವಜ್ಞ ಹೇಳಿದ್ದಾನೆ. ಆದ್ದರಿಂದ ತಾವು ಇಂಥವರ ಬಗ್ಗೆ ನಿಷ್ಠುರವಾಗಿ ಕ್ರಮವನ್ನು ತಗೆದುಕೊಳ್ಳಬೇಕೆಂದು ಸಲಹೆ ಕೊಡುತ್ತೇನೆ. ಮಹಾಭಾರತದಲ್ಲಿ ಕಂಸ ಜನರಿಗೆ ನಾನಾ ರೀತಿ ತೊಂದರೆಗಳನ್ನು ಕೊಟ್ಟ, ಕೊಲೆಗಳನ್ನು ಮಾಡಿದ ಅತ್ಯಾಚಾರ ಮಾಡಿದ ಎಂಬುದನ್ನು ನಾವೆಲ್ಲರೂ ಓದುತ್ತೇವೆ. ಕಂಸನ ವಧೆಯನ್ನು ಶ್ರೀ ಕೃಷ್ಣ ಯಾವ ರೀತಿ ಮಾಡಿದ್ದಾನೋ ಆ ಕಂಸನ ವಧೆಯಾಗಲೂ ಸಮಯ ಬರಬೇಕಾಗುತ್ತದೆ. ಅದೇ ರೀತಿ ಈ ವೀರಪ್ಪನ್ ಎನ್ನುವ ಕಂಸನ ವಧೆಯು ಮುಖ್ಯಮಂತ್ರಿ ಕೃಷ್ಣ ಅವರಿಂದ ಆಗಬೇಕು ಎಂಬ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮ್ಮೆಲ್ಲರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ.ಆರ್ ಕೃಷ್ಣಮೂರ್ತಿ (ಸಂತೆಮರಳ್ಳಿ) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಡಾ: ರಾಜ್‌ಕುಮಾರ್‌ರವರ ಅಪಹರಣದ ಬಗ್ಗೆ ಹೇಳಿಕೆಯನ್ನೇನು ಇಲ್ಲಿ ಹೇಳಿದರು ಅದರ ಬಗ್ಗೆ ಗೌರವಾನ್ವಿತ ಸದಸ್ಯರುಗಳೆಲ್ಲ ಅವರವರ ಅಭಿಪ್ರಾಯವನ್ನು ಮಂಡನೆ ಮಾಡಿದ್ದಾರೆ. ನನಗೂ ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈ ವಿಚಾರದ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿ ಒಂದು ಕಾಲಬದ್ಧ ಕಾರ್ಯಕ್ರಮವನ್ನು ನಿಗಧಿ ಮಾಡಿದರೆ ಒಳ್ಳೆಯದು. ನಮ್ಮಲ್ಲೇನು ಸಾರ್ಕ್ ಸಮ್ಮೇಳನವಾಯಿತು ಆ ಸಮಯದಲ್ಲಿ ವೀರಪ್ಪನ್ ಮೊದಲ ಬಾರಿಗೆ ಬಂಧಿಯಾದ. ಆ ಸಂದರ್ಭದಲ್ಲಿ ವೀರಪ್ಪನ್, ಈ ಸಮ್ಮೇಳನಕ್ಕೂ ನನಗೂ ಸಂಬಂಧವಿಲ್ಲ, ನಾನೊಬ್ಬ ಕಾಡುಗಳ್ಳ ಎಂಬುದನ್ನು

ತಿಳಿಸಿದ್ದ. ಅವನ ಹೇಳಿಕೆಯ ಹಿನ್ನಲೆಯಲ್ಲಿ ಅವನನ್ನು ಫಾರೆಸ್ಟ್ ಸ್ಕ್ವಾಡ್‌ಗೆ ಒಪ್ಪಿಸಲಾಯಿತು. ಅಲ್ಲಿಂದ ಅವನು ತಪ್ಪಿಸಿಕೊಂಡಿರುವುದು ಇತಿಹಾಸ. ಅಂದು ಸಾಮಾನ್ಯ ಕಾಡುಗಳ್ಳನಾಗಿ ಹೊರಹೊಮ್ಮಿದ ವೀರಪ್ಪನ್ ಇಂದು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ, ನರಹಂತಕನಾಗಿ ಮಾರ್ಪಟ್ಟು ಸರ್ಕಾರವನ್ನೇ ಅಲುಗಾಡಿಸುವ ನಿಟ್ಟಿನಲ್ಲಿ ಭಾಗಿಯಾಗಿದ್ದಾನೆ. ವೀರಪ್ಪನ್ ಬಂಧನಕ್ಕೆ ವಿಶೇಷ ಟಾಸ್ಕ್ ಫೋರ್ಸ್‌ನ್ನು ಮಾಡಿ ನಾನಾ ವರಿಷ್ಠ ಅಧಿಕಾರಿಗಳು ಅಲ್ಲಿ ಕೆಲಸ ಮಾಡಿದ್ದಾರೆ. ಈ ಮಧ್ಯೆ ಗಡಿಭದ್ರತಾ ಪಡೆಯನ್ನು ಸಹ ಉಪಯೋಗ ಮಾಡಿದ್ದನ್ನು ನೋಡಿದ್ದೇವೆ. ಮತ್ತೊಮ್ಮೆ ಇದನ್ನು ರಚನೆ ಮಾಡಿರುವುದನ್ನು ನಿನ್ನೆಯ ದಿವಸ ಮುಖ್ಯಮಂತ್ರಿಯವರ ಹೇಳಿಕೆಯಲ್ಲಿ ಕೇಳಿದ್ದೇವೆ. ಎಂಬತ್ತರ ದಶಕದಿಂದಲೂ ವೀರಪ್ಪನ್ ಎಲ್ಲರಿಗೂ ಭಯಪಡತಕ್ಕ ರೀತಿಯಲ್ಲಿ ಹೊರಹೊಮ್ಮಿದ್ದಾನೆ. ಕಾಡುಗಳ್ಳನಾಗಿದ್ದು ನರಹಂತಕನಾಗಿದ್ದ ಅವನು ತಮ್ಮ ಅರ್ಜುನ ಸತ್ತ ಮೇಲೆ ಕಾಡುಗಳ್ಳತನ ಮತ್ತು ನರಹತ್ಯೆ ಮಾಡುವುದನ್ನು ಬಿಟ್ಟಿದ್ದಾನೆ. ಇತ್ತೀಚಿನ ದಿವಸಗಳಲ್ಲಿ ಆತ ಫಾರೆಸ್ಟ್ ಗಾರ್ಡ್‌ಗಳು, ಅಧಿಕಾರಿಗಳು, ವಿಜ್ಞಾನಿಗಳು, ಕೃಪಾಕರ ಸೇನಾನಿ ಮತ್ತೆ ಡಾ: ರಾಜ್‌ಕುಮಾರ್‌ರಂತಹ ವ್ಯಕ್ತಿಗಳನ್ನು ಕಿಡ್‌ನ್ಯಾಪ್ ಮಾಡತಕ್ಕ ಕೃತ್ಯಕ್ಕೆ ಇಳಿದಿರುವುದನ್ನು ನಾವು ಕಾಣುತ್ತಿದ್ದೇವೆ. ವೀರಪ್ಪನ್‌ನನ್ನು ಹಿಡಿಯಲು ಹಿಂದೆ ಟಾಸ್ಕ್ ಫೋರ್ಸ್‌ಅನ್ನು ರಚನೆ ಮಾಡಲಾಗಿತ್ತು. ಬಿ.ಎಸ್.ಎಫ್ ಅನ್ನೂ ಸಹ ಆತನನ್ನು ಹಿಡಿಯಲು ಕರೆಸಲಾಗಿತ್ತು. ಈಗ ಟಾಸ್ಕ್ ಫೋರ್ಸ್ ಅನ್ನು ಪುನರ್‌ರಚನೆ ಮಾಡಿರುವುದಾಗಿ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಂಡು ಈ ಒಂದು ಕಥೆಗೆ ಕೊನೆಯನ್ನು ಕಾಣಿಸತಕ್ಕಂಥ ದಿಕ್ಕಿನಲ್ಲಿ ಸರ್ಕಾರ ಪ್ರಾಮಾಣಿಕವಾಗಿ ತೊಡಗಿಕೊಂಡಾಗ ಮಾತ್ರ ಈ ಟಾಸ್ಕ್ ಫೋರ್ಸ್ ಪುನರ್ ರಚನೆಗೆ ಒಂದು ಅರ್ಥ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹ್ಯೂಮನ್ ರೈಟ್ಸ್ ಕಮಿಶನ್‌ರವರು ನಮ್ಮ ಭಾಗಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಬಹಳಷ್ಟು ಸಿವಿಲಿಯನ್ಸ್ ತಮಗೆ ಟಾಸ್ಕ್ ಫೋರ್ಸ್ ಅಥವಾ ಬಿ.ಎಸ್.ಎಫ್.ನವರು ಕಿರುಕುಳ ಕೊಟ್ಟಿದ್ದಾರೆ ಎಂದು ದೂರಿದ್ದಾರೆ. ಹ್ಯೂಮನ್ ರೈಟ್ಸ್ ಕಮಿಷನರ್‌ರವರು ಇದನ್ನು ರೆಕಾರ್ಡ್ ಮಾಡಿಕೊಂಡಿದ್ದಾರೆ. ಅಂತಹ ವಿಚಾರಗಳು ಮತ್ತೊಮ್ಮೆ ಮರುಕಳಿಸಬಾರದು. ನರಹಂತಕ ವೀರಪ್ಪನನ್ನು ಬಂಧಿಸುವ ದಿಕ್ಕಿನಲ್ಲಿ ಸರ್ಕಾರ ಒಂದು ಟೈಮ್ ಬೌಂಡ್ ಪ್ರೋಗ್ರಾಮ್ ಹಾಕಿಕೊಂಡು ಇದಕ್ಕೊಂದು ಅಂತ್ಯ ಹಾಕಬೇಕೆಂದು ಕೋರುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಮಾತನಾಡಲಿಕ್ಕೆ ಹೋಗುವುದಿಲ್ಲ. ನಾನು ಕೇವಲ ಎರಡು ನಿಮಿಷಗಳಲ್ಲೇ ಮಾತನಾಡಿ ಮುಗಿಸುತ್ತೇನೆ. ಎಲ್ಲರೂ ಮಾತನಾಡಿರತಕ್ಕ ವಿಷಯದ ಬಗ್ಗೆಯೇ ಮತ್ತೆ ಮತ್ತೆ ಮಾತನಾಡಿದರೆ ಬೇಜಾರಾಗಬಹುದು. ಡಾ: ರಾಜ್‌ಕುಮಾರ್‌ರವರು ಬಿಡುಗಡೆ ಆಗಲಿಕ್ಕೆ ಯಾರ್ಯಾರು

ಕಾರಣರು ಎಂದು ಸರ್ಕಾರ ಹೇಳಿದೆ. ಅವರ ಬಿಡುಗಡೆಯಾಗಲು ಸ್ವತಃ ರಾಜ್‌ಕುಮಾರ್‌ರವರೂ ಕಾರಣರು ಇರಬಹುದು ಎಂದು ನನಗನಿಸುತ್ತದೆ. ಡಾ: ರಾಜ್‌ಕುಮಾರ್‌ರವರು ಬಹುಶಃ ಬಸವಣ್ಣನವರ ಮಟ್ಟಕ್ಕೆ ಏರಲಿಕ್ಕಿಲ್ಲ. ಆ ಮಾತು ಬೇರೆ. ಬಸವಣ್ಣನವರ ಜೀವನದಲ್ಲಿ ಒಂದು ಘಟನೆ ನಡೆದಿದೆ. ಒಮ್ಮೆ ಒಬ್ಬ ಕಳ್ಳ ಬಸವಣ್ಣನವರ ಮನೆಯಲ್ಲಿ ಕಳವು ಮಾಡಲಿಕ್ಕೆ ಹೋದಾಗ ಬಸವಣ್ಣನವರ ದರ್ಶನದಿಂದ ಕಳ್ಳ ಅವರಿಗೇ ಶರಣಾಗಿ ಬಿಡುತ್ತಾನೆ. ಆತನ ಕೊರಳಲ್ಲಿ ಕಟ್ಟಿದ್ದಂತಹ ಕಲ್ಲು ಕೂಡ ಲಿಂಗವಾಗುತ್ತದೆ. ಅದೇ ಮಾದರಿಯಲ್ಲೂ ಕೂಡ ಇವತ್ತು ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡುವ ಮುನ್ನ ವೀರಪ್ಪನ್ ಅವರಿಗೆ ಸನ್ಮಾನ ಮಾಡಿದ್ದನ್ನು ನೋಡಿದರೆ ಡಾ: ರಾಜ್‌ಕುಮಾರ್‌ರವರೂ ಕೂಡ ವೀರಪ್ಪನ್‌ನ ಮನಸ್ಸು ಪರಿವರ್ತನೆ ಹೊಂದಲಿಕ್ಕೆ ಕಾರಣರಿರಬಹುದು ಎಂದು ಅನಿಸುತ್ತದೆ. ಡಾ: ರಾಜ್‌ಕುಮಾರ್‌ರವರು ವೈಯಕ್ತಿಕವಾಗಿ ದೇವರಲ್ಲಿ ಇಟ್ಟಂತಹ ನಂಬಿಕೆ, ಅವರು ತಮ್ಮ ವೃತ್ತಿಯಲ್ಲಿ ತೋರಿಸಿದಂತಹ ಪ್ರಾಮಾಣಿಕತೆ ಕೂಡ ಅವರ ಬಿಡುಗಡೆಗೆ ಕಾರಣವೆಂದರೆ ತಪ್ಪಾಗಲಾರದು. ಅವರು ತಮ್ಮ ಅಭಿಮಾನಿಗಳನ್ನು ದೇವರಂತೆ ಕಂಡಿದ್ದಾರೆ. ಇವತ್ತೂ ಕೂಡ ಅವರು ಜನರನ್ನು ದೇವರೆಂದೇ ಸಂಬೋಧಿಸುತ್ತಾರೆ. ಈ ಎಲ್ಲಾ ಒಳ್ಳೆಯ ಅಂಶಗಳು ಕೂಡ ಅವರ ಬಿಡುಗಡೆ ನೆರವಾಗಿದೆ. ಅವರ ಬಿಡುಗಡೆಗೆ ಸರ್ಕಾರ ಮತ್ತು ಇತರರ ಪಾತ್ರವೂ ಸಹಾ ಇದೆ. ಅದನ್ನು ನಾನು ಇಲ್ಲಿ ಅಲ್ಲಗಳೆಯುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ನಾವು ಎಲ್ಲದಕ್ಕೂ ಟೀಕೆ ಮಾಡುವುದಕ್ಕಾಗುವುದಿಲ್ಲ. ಆದರೆ ಅವರ ಸಂಯಮದಿಂದ ಇವತ್ತು ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಸಾಧ್ಯವಾಗಿದೆ. ಆದೇ ಇಲ್ಲಿ ತಪ್ಪು ಎಲ್ಲಿ ಆಗಿದೆ ಎಂಬುದನ್ನು ನಾವು ಇವತ್ತು ನೋಡಬೇಕಾಗುತ್ತದೆ. ಡಾ: ರಾಜ್‌ಕುಮಾರ್‌ರವರ ಜೊತೆಯಲ್ಲಿ ವೀರಪ್ಪನ್ ಅಪಹರಿಸಿದ್ದ ನಾಗಪ್ಪ ನವ್. ಧಾರವಾಡ ಜಿಲ್ಲೆಯ ಮರಡಗಿಯವನಾಗಿದ್ದಾನೆ. ನಾಗಪ್ಪ ಅವತ್ತಿನ ದಿವಸ ವೀರಪ್ಪನ್‌ನಿಂದ ತಪ್ಪಿಸಿಕೊಂಡು ಓಡಿ ಹೋದ, ಇದರಿಂದಾಗಿ ಸಂಧಾನ ಪ್ರಕ್ರಿಯೆಗೆ ತಡೆ ಉಂಟಾಗಿ ನಾನು ಅವತ್ತಿನ ದಿವಸ ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬರಲು ಸಾಧ್ಯವಾಗಲಿಲ್ಲವೆಂದು ನಕ್ಕೀರನ್ ಗೋಪಾಲ್‌ರವರು ಹೇಳಿದ್ದಾರೆ. ನಾಗಪ್ಪ ತಪ್ಪಿಸಿಕೊಂಡದ್ದರಿಂದ ವೀರಪ್ಪನ್ ಕೋಪಗೊಂಡು ಅಂದು ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಲಿಲ್ಲವೆಂದೂ ಕೂಡ ಆತ ಹೇಳಿಕೊಂಡಿದ್ದಾನೆ. ಡಾ: ರಾಜ್‌ಕುಮಾರ್‌ರವರೂ ಕೂಡ ಬಿಡುಗಡೆಯಾಗಿ ಬಂದಮೇಲೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ನಾಗಪ್ಪ ಅಂದು ತಪ್ಪಿಸಿಕೊಂಡು ಹೋದಮೇಲೆ ವೀರಪ್ಪನ್ ಕಡೆಯವರು ನಮ್ಮ ಕೈಗಳನ್ನು ಕಟ್ಟಿ ತೊಂದರೆ ಕೊಟ್ಟರು ಎಂದು ಹೇಳಿದ್ದಾರೆ. ಇದು ನಿಜ ಇರಬಹುದು. ಆದರೆ ನಾಗಪ್ಪ ವೀರಪ್ಪನ್‌ನಿಂದ ಅಂದು ಏಕೆ ತಪ್ಪಿಸಿಕೊಂಡು ಬಂದ ಎಂಬುದನ್ನೂ ಕೂಡ ನಾವು ಯೋಚಿಸಬೇಕಾಗುತ್ತದೆ. ಇದನ್ನು ಯಾರೂ ಕೂಡ ಯೋಚಿಸುತ್ತಿಲ್ಲ. ಮನುಷ್ಯನ ಪ್ರಾಣಕ್ಕೆ ಬಹಳ ಮಹತ್ವ ಇದೆ. ನನಗೆ ತಿಳಿದುಬಂದ ಮಟ್ಟಿಗೆ ವೀರಪ್ಪನ್ ನಾಗಪ್ಪನನ್ನು ಕೊಲೆ ಮಾಡಲು ಯೋಚಿಸಿದ್ದನಂತೆ. ಎಲ್ಲರ ಜೀವನವೂ ಸಹ ಅಮೂಲ್ಯವಾದುದ್ದೇ. ಆದರೆ ರಾಜ್‌ಕುಮಾರ್ ಮಟ್ಟದಲ್ಲಿ ನಾಗಪ್ಪನನ್ನು ನೋಡುವುದಕ್ಕಾಗುವುದಿಲ್ಲ. ನಾಗಪ್ಪನಿಗೆ ವೀರಪ್ಪನ್ ತನ್ನನ್ನು ಕೊಲೆ ಮಾಡಲಿರುವುದು ತಿಳಿದು ಬಂದಿದ್ದರಿಂದ ಆತ ತನ್ನ ಜೀವ ರಕ್ಷಣೆ ಮಾಡಿಕೊಳ್ಳುವ ಸಲುವಾಗಿ ಅಲ್ಲಿಂದ

ತಪ್ಪಿಸಿ ಕೊಂಡು ಓಡಿ ಬಂದಿದ್ದಾನೆ. ನಾಗಪ್ಪನನ್ನು ಇದರ ಬಗ್ಗೆ ನಾವು ನೇರವಾಗಿ ಕೇಳಿ ತಿಳಿದುಕೊಳ್ಳಬೇಕು. ನಾಗಪ್ಪ ತನ್ನ ಜೀವ ರಕ್ಷಣೆಗಾಗಿ ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದಾನೆಯೇ ಹೊರತು ಆತ ರಾಜ್‌ಕುಮಾರ್‌ರವರಿಗೆ ಮೋಸ ಮಾಡಿ ಓಡಿ ಬಂದಿದ್ದಾನೆ ಎಂದು ನನಗಂತೂ ಅನಿಸುವುದಿಲ್ಲ. ನಾಗಪ್ಪ ತಪ್ಪಿಸಿಕೊಂಡು ಬಂದದ್ದು ತಪ್ಪೇನೂ ಅಲ್ಲ. ಅದರಿಂದ ಆತನ ಜೀವ ಉಳಿಯಿತು. ಆತನು ಈಗ ಎಲ್ಲಿದ್ದಾನೋ ಗೊತ್ತಿಲ್ಲ. ನಾಗಪ್ಪನ ಜೀವವೂ ಕೂಡ ಅಮೂಲ್ಯವಾದುದ್ದೇ. ಮಾನ್ಯ ವಿಶ್ವನಾಥ್‌ರವರು ಮತ್ತು ಮಾನ್ಯ ರಾಣಿ ಸತೀಶ್‌ರವರು ಡಾ: ರಾಜ್‌ಕುಮಾರ್ ಕಾಡಿನಲ್ಲಿ ವೀರಪ್ಪನ್ ಒತ್ತೆಯಾಳಾಗಿದ್ದ ಸಂದರ್ಭದಲ್ಲಿ ಮೈಸೂರು ದಸರಾ ಉದ್ಘಾಟನೆಯನ್ನು ಅವರಿಂದ ಮಾಡಿಸಲು ಯೋಚಿಸಿದ್ದರು. ಇದು ಯಾವ ಬುದ್ಧಿವಂತಿಕೆ? ಡಾ: ರಾಜ್‌ಕುಮಾರ್‌ರವರಿಂದ ಮೈಸೂರು ದಸರಾ ಉದ್ಘಾಟನೆ ಮಾಡುವ ವಿಷಯ ವೀರಪ್ಪನ್‌ಗೆ ತಿಳಿಯಿತು ಎಂದು ಕಾಣುತ್ತದೆ. ಸರ್ಕಾರ ಹೇಗೆ ಡಾ: ರಾಜ್‌ಕುಮಾರ್‌ರವರಿಂದ ಮೈಸೂರು ದಸರಾ ಉದ್ಘಾಟನೆ ಮಾಡಿಸುತ್ತದೆ ನಾನೂ ನೋಡುತ್ತೇನೆ ಎಂಬ ಆಲೋಚನೆ ವೀರಪ್ಪನ್ ಮನಸ್ಸಿನಲ್ಲಿ ಬಂದುದ್ದರಿಂದ ಅವನು ರಾಜ್‌ಕುಮಾರ್‌ರನ್ನು ಬಿಡುಗಡೆ ಮಾಡಲಿಲ್ಲ. ಇದರಿಂದ ಅವರ ಬಿಡುಗಡೆ ವಿಳಂಬವಾಯಿತು. ನಮ್ಮ ಮಂತ್ರಿಗಳು ಬಹಳ ಜಾಣರು ಮತ್ತು ಬುದ್ಧಿವಂತರು ಎಂದು ನಾನು ಅಂದುಕೊಂಡಿದ್ದೆ ಇವರು ಮಾಡಿದಂತಹ ಕೆಲಸವನ್ನು ಯಾವ ಬುದ್ಧಿಗೇಡಿಯೂ ಕೂಡ ಮಾಡುವುದಿಲ್ಲ. ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಗಲಿಲ್ಲವಾದ್ದರಿಂದ ದಸರಾ ಉದ್ಘಾಟನೆ ಮಾಡಲು ನಂತರ ಮಂತ್ರಿಯವರು ಅವರ ಪತ್ನಿಯವರನ್ನು ಆಹ್ವಾನಿಸಲು ಹೋಗಿದ್ದರು. ಯಾವೊಬ್ಬ ಭಾರತೀಯ ಮಹಿಳೆಯೂ ಕೂಡ ತಮ್ಮ ಪತಿ ಕಾಡಿನಲ್ಲಿದ್ದಾಗ ಇಂತಹ ಕಾರ್ಯ ಒಪ್ಪಿಕೊಳ್ಳಲಿಕ್ಕೆ ಸಿದ್ಧರಿರುವುದಿಲ್ಲ. ಇದೂ ಕೂಡ ಮಾನ್ಯ ಮಂತ್ರಿಗಳಿಗೆ ತಿಳಿದಿರಲಿಲ್ಲವೇ?

ಶ್ರೀ ಹೆಚ್. ವಿಶ್ವನಾಥ್:— ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕೆಂದು ಕೋರುತ್ತೇನೆ. ದಸರಾ ಉನ್ನತ ಸಭೆಯಲ್ಲಿ ಡಾ: ರಾಜ್‌ಕುಮಾರ್‌ರವರಿಂದ 28ನೇ ತಾರೀಖಿನಂದು ಉದ್ಘಾಟನೆ ಮಾಡಿಸಬೇಕು ಎಂದು ನಿರ್ಧಾರಿಸಲಾಗಿತ್ತು. ಡಾ: ರಾಜ್ ಅಪಹರಿಸಿದ್ದಕ್ಕೂ ಮೈಸೂರು ದಸರಾ ಆರಂಭಕ್ಕೂ ಒಂದು ತಿಂಗಳು ಅಂತರ ಇತ್ತು. ಅಷ್ಟರಲ್ಲಿ ಡಾ: ರಾಜ್‌ರವರ ಬಿಡುಗಡೆಯಾಗಬಹುದು ಎಂಬ ಆಶಾ ಭಾವನೆಯಿಂದ ನಾವು ಡಾ: ರಾಜ್‌ರವರಿಂದಲೇ ದಸರಾ ಉದ್ಘಾಟನೆ ಆಗುತ್ತದೆ ಒಂಬ ಮಾತನ್ನು ಹೇಳಿದ್ದೇವೆ ಹೊರತು ಡಾ: ರಾಜ್‌ರವರ ಬಿಡುಗಡೆ ತಡವಾಗಲಿ ಎಂಬ ದೃಷ್ಟಿಯಿಂದ ನಾವು ಆ ಮಾತನ್ನು ಹೇಳಿರಲಿಲ್ಲ. ಪಾರ್ವತಮ್ಮನವರನ್ನು ಉದ್ಘಾಟನೆಗೆ ಕರೆಯಲಿಕ್ಕೆಂದು ನಾವು ಹೋಗಿರಲಿಲ್ಲ, ಆ ಬಗ್ಗೆ ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿತ್ತು. ವಸ್ತುಸ್ಥಿತಿ ಅದಲ್ಲ.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಉಪಾಧ್ಯಕ್ಷರೇ, ತಪ್ಪಾಗಿ ವರದಿಯಾಗಿತ್ತು ಎಂದು ಮಾನ್ಯ ಸಚಿವರು ಹೇಳಿದರು. ಕೊನೆಯ ಪಕ್ಷ ಡಾ: ರಾಜ್ ಬಿಡುಗಡೆಯಾಗಬಹುದು ಎಂದು ಊಹಿಸಿ ಆ ಮಾತನ್ನು ಹೇಳಿದ್ದೆವು ಎಂಬುದನ್ನಾದರೂ ಅವರು ಒಪ್ಪಿಕೊಂಡರು.

108 ದಿವಸಗಳು ಕಾಲ ಡಾ: ರಾಜ್ ವೀರಪ್ಪನ್ ಬಳಿ ಉಳಿಯಲಿಕ್ಕೆ ಇದೂ ಒಂದು ದೊಡ್ಡ ಕಾರಣವೆನ್ನಬಹುದು. ವೀರಪ್ಪನ್ ಮೊದಲೇ ದುಷ್ಟ. ನಾನು ರಾಜ್‌ರನ್ನು ನನ್ನ ಷರತ್ತುಗಳನ್ನು ಈಡೇರಿಸದೇ ಬಿಡುವುದಿಲ್ಲ ಎಂದರೂ ಸರ್ಕಾರದವರು ಈ ರೀತಿ ಮಾಡುತ್ತಾರಲ್ಲಾ, ನೋಡೋಣ ಹೇಗೆ ರಾಜ್‌ರಿಂದ ದಸರಾ ಉದ್ಘಾಟಿಸುತ್ತಾರೆ ಎಂಬ ಭಾವನೆಯಿಂದ ವೀರಪ್ಪನ್ ರಾಜ್‌ರವರನ್ನು ಬೇಗ ಬಿಡುಗಡೆ ಮಾಡಲಿಲ್ಲ. ರಾಜ್ ಬಿಡುಗಡೆ ವಿಳಂಬವಾಗಲು ಇದೂ ಒಂದು ಕಾರಣವಿರಬಹುದು ಎಂಬುದು ನನ್ನ ವಾದವಾಗಿದೆ. ಬಿಡುಗಡೆಯಾಗಿ ಬಂದ ಮೇಲೆ ಆ ರೀತಿ ಕಾರ್ಯಕ್ರಮ ರೂಪಿಸಬಹುದಾಗಿತ್ತು. ಬಿಡುಗಡೆಯಾಗುವ ಮೊದಲೇ ರಾಜ್‌ಕುಮಾರ್‌ರವರು ದಸರಾವನ್ನು ಈ ಬಾರಿ ಉದ್ಘಾಟಿಸುತ್ತಾರೆ ಎಂಬುದನ್ನು ಸರ್ಕಾರ ಪ್ರಕಟಿಸಿದ್ದು ತಪ್ಪು. 108 ದಿವಸಗಳಲ್ಲಿ 10-15 ದಿವಸ ಈ ಕಾರಣದಿಂದಲೇ ವಿಳಂಬವಾಗಿದ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ನಾಗಪ್ಪ ಇವತ್ತು ಎಲ್ಲಿದ್ದಾನೆ? ಹೇಗಿದ್ದಾನೆ? ಎಂಬುದನ್ನು ಸರ್ಕಾರ ತಿಳಿಸಿಲ್ಲ. ಆತ ನಮ್ಮ ಜಿಲ್ಲೆಯವನೇ ಆಗಿದ್ದಾನೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾಗಪ್ಪ ರಿಟ್ ಅರ್ಜಿಯೊಂದರ ಸಂಬಂಧದಲ್ಲಿ ಹೈಕೋರ್ಟ್‌ನ ಮುಂದೆ ಹಾಜರಾಗಬೇಕಾಗಿತ್ತು. ಆದರೆ ಆತ ಹಾಜರಾಗಲಿಲ್ಲ. ಆದರ ಬದಲು ಆತನ ವಕೀಲರು ಕೋರ್ಟ್ ಮುಂದೆ ಹಾಜರಾದರು. ನಾಗಪ್ಪ ಎಲ್ಲಿದ್ದಾನೆ ಎಂದು ಸರ್ಕಾರಕ್ಕೆ ಮಾಹಿತಿ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ:— ನಾಗಪ್ಪ ಎಲ್ಲಿದ್ದಾನೆ ಎನ್ನತಕ್ಕಂಥ ಪ್ರಶ್ನೆಯನ್ನು ನಾವು ಇಲ್ಲಿ ಚರ್ಚಿಸುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:— ನಾಗಪ್ಪ ಜೀವಕ್ಕೂ ಕೂಡ ಗಂಡಾಂತರ ಇದೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಾಗಪ್ಪನ ಮನೆಗೆ ಬೀಗ ಹಾಕಿದೆ. ಧಾರವಾಡದ ಆತನ ಸಂಬಂಧಿಕರಿಗೂ ಆತ ಸಿಗುತ್ತಿಲ್ಲ. ಹಾಗಾದರೆ ನಾಗಪ್ಪನನ್ನು ಯಾರು ಎಲ್ಲಿ ಇಟ್ಟಿದ್ದಾರೆ? ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ:— ನಾಗಪ್ಪನನ್ನು ಯಾರೂ ಕೂಡ ಎಲ್ಲಿಯೂ ಇಟ್ಟಿಲ್ಲ. ಆತ ತನಗೆ ಇಚ್ಛೆ ಬಂದ ಕಡೆ ಇರಬೇಕಾದ ಕಡೆ ಇದ್ದಾನೆ.

ಶ್ರೀ ಜಗದೀಶ್ ಶೆಟ್ಟರ್:— ಸರ್ಕಾರದವರು ಈ ವಿಷಯವನ್ನು ಲಘುವಾಗಿ ಪರಿಗಣಿಸಬಾರದು. ನಾಗಪ್ಪನ ಬಗ್ಗೆ ಇವತ್ತು ನಿಗೂಢತೆ ಇದೆ. ನಾಳೆ ಅವನ ಜೀವಕ್ಕೆ ಅಪಾಯವಾಗುವಂತಹ ಸ್ಥಿತಿ ಇದೆ. ಮಾನ್ಯ ಸದಸ್ಯರಾದ ಪಾಟೀಲರು ಏನು ಹೇಳುತ್ತಿದ್ದಾರೆ ಅದು ಸರಿಯಾಗಿದೆ. ನಿನ್ನೆಯೇ ಧಾರವಾಡದಿಂದ ಅವರ ಸಂಬಂಧಿಕರು ಬಂದರೆ ಅವರಿಗೆ

ಅವನು ಸಿಗುತ್ತಿಲ್ಲ. ಅವನು ಹಾಗಾದರೆ ಎಲ್ಲಿ ಹೋಗಿದ್ದಾನೆ? ಕೆಲವೊಂದು ವಿಷಯಗಳು ಅವನಿಗೆ ಗುರುತು ಇರಬಹುದು. ಹೀಗಾಗಿ ಅವನನ್ನು ಎಲ್ಲೋ ಒಂದು ಕಡೆ ಮುಚ್ಚಿಡಲಾಗಿದೆ. ಇದರ ಬಗ್ಗೆ ವಿಚಾರಣೆ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಹೊರಗೆ ಬರಬೇಕಾಗಿದೆ. ಅದಕ್ಕೆ ವಿಚಾರಣೆ ಆಗಬೇಕು. ಸತ್ಯ ಹೊರಗೆ ಬರಬೇಕು ಅಷ್ಟೇ ನಮ್ಮ ಉದ್ದೇಶ ಇರುವುದು. ನೀವು ಕೆಲವು ಒಳ್ಳೆಯ ಕೆಲಸ ಮಾಡಿದ್ದೀರಿ ಅದಕ್ಕೆ ನಾವು ಹೊಗಳುತ್ತೇವೆ. ಇಲ್ಲ ಅಂತ ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರತಿಪಕ್ಷದವನ್ನು ಕರೆದು ಕೇಳಿದ್ದು ಇವೆಲ್ಲವನ್ನು ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:— ಊರಿಗೆ ಬಂದವರು ನೀರಿಗೆ ಬರಲೇಬೇಕಲ್ಲ.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಇದು ಈ ವಿಷಯಕ್ಕೆ ಸಂಬಂಧಪಡುವುದಿಲ್ಲ. ನಮ್ಮ ಸರ್ಕಾರ ಇರಬಹುದು, ನಿಮ್ಮ ಸರ್ಕಾರ ಇರಬಹುದು, ವೀರಪ್ಪನನ್ನು ಹಿಡಿಯುವುದಕ್ಕೆ ಆಗಲಿಲ್ಲ. ಇವೆಲ್ಲ ತತ್ವ ಹೇಳುವುದಕ್ಕೆ ಆಗುತ್ತದೆ. ನಾಗಪ್ಪ ನಮ್ಮ ಜಿಲ್ಲೆಯವರು. ಅವರು ನಮಗೆ ಬೇಕಾದಂತಹವರು. ಅವರು ನನಗೆ ಆತ್ಮೀಯ ಗೆಳೆತನದ ಮನೆತನದವರು. ಈ ದೃಷ್ಟಿಯಿಂದ ನನಗೆ ಏನು ಗೊತ್ತಿದೆ ಅದನ್ನು ಹೊರಗಡೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸುಮ್ಮನೆ ನಾಗಪ್ಪನನ್ನು ಎಲ್ಲರೂ ಬೈಯ್ಯುತ್ತಾರೆ. ಅವನು ಓಡಿ ಬಂದದ್ದರಿಂದ ರಾಜ್‌ಕುಮಾರ್‌ಗೆ ತೊಂದರೆ ಆಯಿತು, ಅವನು ಎಲ್ಲಿದ್ದಾನೆಯೋ ಗೊತ್ತಿಲ್ಲ. ಮೊದಲು ಪಾಪ ಆ ಪರದೇಶಿಯನ್ನು ಹೊಡೆಯುತ್ತಾರೆ. ಇದು ನಮಗೆ ನಿಮಗೆ ಗೊತ್ತಿದೆ. 130 ಜನ ಸತ್ತವರ ಪರಿಸ್ಥಿತಿ ಅಷ್ಟೇ. ಅವನು ತಪ್ಪಿಸಿಕೊಂಡು ಬಂದದ್ದರಿಂದ ನಮಗೆ ಸಂತೋಷವಾಗಿದೆ. ಇಲ್ಲದಿದ್ದರೆ ಅವನು ಸಾಯುತ್ತಿದ್ದ. ನಿಶ್ಚಿತವಾಗಿ ಅವನ ಕೊಲೆ ಯಾಗುತ್ತಿತ್ತು. ಅವನನ್ನು ಕೊಂಚದು ಹಾಕುತ್ತಿದ್ದರು, ಯಾರೂ ಕೇಳುತ್ತಿರಲಿಲ್ಲ. ಇದು ಇವತ್ತು ಇರತಕ್ಕಂಥ ಪರಿಸ್ಥಿತಿ. ಇದನ್ನು ನಾನು ನೇರವಾಗಿ ಹೇಳುತ್ತಿದ್ದೇನೆ. ನಾನು ಕಂಡಂತಹ ಸತ್ಯದ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ. ಅವನು ಬಂದಾಗ ಅವನ ಪರಿಸ್ಥಿತಿ ಹೇಗಿತ್ತು. ಸಾವಿನ ದವಡೆಯಿಂದ ಪಾರಾಗಿ ಬಂದವರು ಹೇಗೆ ಇರುತ್ತಿದ್ದರೋ ಹಾಗೇ ಅವನು ಇದ್ದ. ಈ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಡಾಕ್ಟರ್ ರಾಜ್‌ಕುಮಾರ್ ಅವರನ್ನು ಹಿಡಿದುಕೊಂಡು ಹೋದರು, ಏಕೆ ಹಿಡಿದುಕೊಂಡು ಹೋದರು? ಏನು ಕಾರಣ? ನೀವು ಅಧಿಕಾರಕ್ಕೆ ಬಂದ ವರ್ಷ ಎಸ್.ಟಿ.ಎಫ್. ಇತ್ತೋ ಅದು ಸತ್ತಿತ್ತೋ ಎನ್ನುವುದು ಗೊತ್ತಾಗಲಿಲ್ಲ. ನೀವು ಆ ಕಡೆ ಲಕ್ಷ ಮಾಡಲಿಲ್ಲ. ವೀರಪ್ಪನ್ ಇಲ್ಲವೇ ಇಲ್ಲ ಎನ್ನುವಂತೆ ಇತ್ತು ರಾಜ್ಯ. ಏನೂ ನಡೆಯಲಿಲ್ಲ, ಅವನು ಎಲ್ಲ ಕಡೆ ಸರಾಗವಾಗಿ ಅಡ್ಡಾಡುತ್ತಿದ್ದ. ಬೇಕಾದರೆ ತಾವು ವಿಚಾರಣೆಯನ್ನು ಮಾಡಿ, ವರದಿಯನ್ನು

ತರಿಸಿಕೊಂಡು ನೋಡಿ. ಸುಮ್ಮನೆ ಮಾತು ಬೇಡ. ರಾಜ್‌ಕುಮಾರ್ ಅಪಹರಣಕ್ಕೆ ನೇರವಾಗಿ ಈ ಸರ್ಕಾರವೇ ಕಾರಣ. ಸಂಪೂರ್ಣವಾಗಿ ಅವನನ್ನು ಫ್ರೀ ಆಗಿ ಬಿಟ್ಟುಬಿಟ್ಟರು. ನಮ್ಮ ಸರ್ಕಾರಕ್ಕೆ ಅವನ್ನು ಹಿಡಿಯಲಿಕ್ಕೆ ಆಗಲಿಲ್ಲ, ನೀವು ಬಂದ ಮೇಲೆ ಫ್ರೀ ಆಗಿ ಅಡ್ಡಾಡುತ್ತಿದ್ದ. ಅವನು ಊರಿಗೆ ಬಂದು ಬಂದು ಹೋಗಿದ್ದಾನೆ. ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು ಸಿ.ಬಿ.ಐ ವಿಚಾರಣೆ ಮಾಡಿಸಿ, ಸರ್ಕಾರ ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬಂತು ಎಂದು ಹೊಗಳುವ ಮಾತು ಅಲ್ಲ. ಇಲ್ಲ ನಡೆದಿರತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ, ಸರ್ಕಾರ ಒಂದು ವರ್ಷ ನಿಷ್ಕ್ರಿಯರಾದಿರಿ, ನಿಮ್ಮ ಎಸ್.ಟಿ.ಎಫ್ ನಿಷ್ಕ್ರಿಯವಾಯಿತು, ಆ ದೃಷ್ಟಿಯಿಂದ ರಾಜ್‌ಕುಮಾರ್ ಅಪಹರಣವಾಯಿತು, ಎಷ್ಟು ಹಾನಿ ಇದರಿಂದ ಆಗಿದೆ?

ಶ್ರೀ ಅಭಯ ಚಂದ್ರ :— ತಾವು ಅಧಿಕಾರದಲ್ಲಿ 5 ವರ್ಷ ಇದ್ದರಲ್ಲ ಆಗ ಏನು ಮಾಡಿದಿರಿ?

*(ಗೊಂದಲ)*

ಶ್ರೀ ಯು.ಆರ್. ಸಭಾಪತಿ :— ವೀರಪ್ಪ ಎಂ.ಜಿ. ರಸ್ತೆಯಲ್ಲಿ ಓಡಾಡಿದ್ದನ್ನು ನೀವು ನೋಡಿದ್ದೀರಾ?

(ಗೊಂದಲ)

ಶ್ರೀ ಎಚ್. ವಿಶ್ವನಾಥ್ :— ಮಾನ್ಯ ಅಧ್ಯಕ್ಷರೇ, ನಾನು ಅರಣ್ಯ ಸಚಿವನಾಗಿದ್ದಾಗ ವೀರಪ್ಪನ್ ಆಪರೇಷನ್ ವಿಚಾರದಲ್ಲಿ ರಿವ್ಯೂ ಮಾಡಿದ್ದೇನೆ. ಬಹುಶ: ಆಗ ಇದ್ದಂತಹ ನಮ್ಮ ಕಮ್ಯಾಂಡೋಗಳ ಪೈಕಿ ಶಂಕರ್ ಬಿದರಿಯವರು ಇದ್ದಾಗ ಪ್ರಾಮಾಣಿಕವಾಗಿ ಪ್ರಯತ್ನ ನಡೆಯುತ್ತಿತ್ತು. ಅವರನ್ನು ನೀವು ವಾಪಸ್ಸು ತೆಗೆದುಕೊಂಡು ಬಂದಿರಿ. ಶಂಕರ್ ಬಿದರಿಯವರನ್ನು ಯಾವಾಗ ನೀವು ವಾಪಸ್ಸು ತೆಗೆದುಕೊಂಡು ಬಂದಿರಿ ನಿಮ್ಮ ಸರ್ಕಾರ ಇರುವವರೆಗೂ ಒಂದು ದಿವಸ ಸಹ ವೀರಪ್ಪನ್ ಆಪರೇಷನ್ ಬಗ್ಗೆ ಒಂದು ದಿನ ಸಹ ರಿವ್ಯೂ ಆಗಲಿಲ್ಲ. ಆದ್ದರಿಂದ ನೀವು ಕಾರಣ ಇಟ್ಟುಕೊಂಡು ನಮ್ಮ ಕಡೆ ಬೊಟ್ಟು ಮಾಡಿ ತೋರಿಸಬಾರದು.

ಶ್ರೀ ಜಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ನಾವು ಕಮ್ಯಾಂಡೋಗಳಲ್ಲಿ ಎಕ್ಸ್‌ಪರ್ಟ್ಸ್ ಇರಬೇಕೆಂದು ಹೇಳಿ ಅರಕೇಶ್ ಅವನ್ನು ಕರೆಸಿಕೊಂಡೆವು. ಅವರು ಎರಡು ವರ್ಷ ಇದ್ದರು. ಅವರನ್ನು ಮೇ ತಿಂಗಳಲ್ಲಿ ಏಕೆ ವಾಪಸ್ಸು ಕರೆಸಿಕೊಂಡಿರಿ? ಅವರಿಂದ ತೊಂದರೆಯಾಗಿತ್ತೋ ಅಥವಾ ಅನುಕೂಲವಾಗಿತ್ತೋ?

ಶ್ರೀ ಎಚ್. ವಿಶ್ವನಾಥ್ :— ಆ ಎರಡು ವರ್ಷಗಳಲ್ಲಿ ಆರಕ್ಷೀಶ್ ಅವರ ಜೊತೆ ತಾವು ಎಷ್ಟು ಸಾರಿ ಮಾತುಕತೆ ಮಾಡಿದ್ದೀರಿ?

ಶ್ರೀ ಎಸ್. ಎಸ್. ಪಾಟೀಲ್ :— ನಾನು ನೇರವಾಗಿ ಒಪ್ಪಿಕೊಳ್ಳುತ್ತೇನೆ. ನಮ್ಮ ಪಾತ್ರ ಅದರಲ್ಲಿ ಇದೆ. ನಮ್ಮ ಕಾಲದಲ್ಲಿಯೂ ಹಿಡಿಯಲಿಲ್ಲ. ನಾನು ಇಲ್ಲ ಅಂತ ಹೇಳುತ್ತಿಲ್ಲ. ಎಲ್ಲಾ ಸರ್ಕಾರಗಳಿಗೂ ಛೀಮಾರಿ ಹಾಕಿದ್ದಾರೆ. ಆದರೆ ನಾವು ಬಿಗಿ ಇಟ್ಟಿದ್ದೆವು. ಅವನ ಮಾದಿಯನ್ನು ಕಡಿಮೆ ಮಾಡಿದ್ದೆವು, ಅವನ ಮಂದಿ 5 ಜನ ಮಾತ್ರ ಇದ್ದರು. ಒಂದು ವರ್ಷ ತಾವು ನಿಷ್ಕ್ರಿಯವಾಗಿದ್ದ ಮೇಲೆ ಇದು ಆಯಿತು. ನಿಮ್ಮದು ಬರೀ ಮಂತ್ರಿಮಂಡಲ ಮಾಡುವುದು, ಅವರನ್ನು ತೆಗೆಯುವುದು ಇವರನ್ನು ಹಾಕುವುದು ಇದೇ ಕೆಲಸ ಆಯಿತು.

ಶ್ರೀ ಚಂದ್ರಶೇಖರಪ್ಪ :— ಏನೂ ಬದಲಾವಣೆ ಆಗಿಲ್ಲ.

*(ಗೊಂದಲ)*

ಶ್ರೀ ಎಸ್.ಎಸ್. ಪಾಟೀಲ್ :— ಆಮೇಲೆ ವರ್ಗಾವರ್ಗಿಯಲ್ಲಿ ಇದ್ದರು. ಇದೆಲ್ಲಾ ಆಗಿ ಈ ಸರ್ಕಾರ ನಿಷ್ಕ್ರಿಯವಾದ ಮೇಲೆ ಎಸ್.ಟಿ.ಎಫ್ ನಿಷ್ಕ್ರಿಯವಾಯಿತು. ಇದನ್ನು ನಾನು ಹೇಳುತ್ತಿದ್ದೇನೆ. ಈ ಕಾರಣದಿಂದ ರಾಜ್‌ಕುಮಾರ್ ಅಪಹರಣವಾಯಿತು. ಆದರೆ ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬಂದರು ಅದಕ್ಕೆ ನಾನು ಶಹಭಾಷ್‌ಗಿರಿಯನ್ನು ಕೊಡುತ್ತೇನೆ ಇಲ್ಲ ಅಂತ ಹೇಳುವುದಿಲ್ಲ. ಆದರೆ ನಾನು ಶಹಭಾಶ್‌ಗಿರಿಯನ್ನು ಕೊಡುತ್ತಿರುವುದು ರಾಜ್‌ಕುಮಾರ್ ಅವರು ದೈವ ಭಕ್ತಿಯಿಂದ ನಡೆದುಕೊಂಡು ಬಂದಿದ್ದರು, ಅದು ಅವರನ್ನು ಕಾಪಾಡಿದೆ, ಅವರಿಗೆ ಮರಣ ಇಲ್ಲ, ದೇವರೇ ಅವರನ್ನು ಕಾಪಾಡಿದ್ದಾನೆ. ಅದನ್ನು ನಾನು ನಂಬಲೇ ಬೇಕಾಗುತ್ತದೆ, ನಾನು ಇಲ್ಲ ಅಂತ ಹೇಳುವುದಿಲ್ಲ. ಅವರು ದೇವರನ್ನು ನಂಬುವುದಿಲ್ಲ ಅಂತ ಎಲ್ಲೂ ಹೇಳಿಲ್ಲ. ಮೂಢ ನಂಬಿಕೆ, ಮೂಡಭಕ್ತಿ ಇರುವವರು ತಾವು, ಈ ವಿಧಾನಸೌಧವನ್ನು ಕಿತ್ತು ಈ ಕಡೆ ಇಡುವವರು ತಾವು,

*(ಗೊಂದಲ)*

ಶ್ರೀ ಎಸ್.ಎಸ್. ಪಾಟೀಲ್ :— ವಿಧಾನಸೌಧದಲ್ಲಿ ತಾವು ಶಾಶ್ವತವಾಗಿ ಉಳಿಯಬೇಕೆಂದರೆ ಅಧ್ಯಕ್ಷರ ಛೇರ್ ಕಿತ್ತು ಈ ಕಡೆ ಇಡಬೇಕೆಂದರೂ ನೀವು ಇಡುತ್ತೀರಿ. ಅದು ತಪ್ಪು.

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ :— ತಾವು ವಾಸ್ತು ಬಗ್ಗೆ ರೆಫರ್ ಮಾಡಿದಿರಿ. ವಿಧಾನಸೌಧವನ್ನು ವಾಸ್ತು ಪ್ರಕಾರವಾಗಿ ಕಟ್ಟಿದ್ದಾರೆ. ಬಹುಶ: ಶಾಸ್ತ್ರೋಕ್ತವಾಗಿ ಕಟ್ಟಿದ್ದಾರೆ.

ತಾವು ಯಾರನ್ನು ಕರೆದುಕೊಂಡು ಬಂದು ಕೇಳಿದರೂ ಹೇಳುತ್ತಾರೆ, ಅದಕ್ಕೆ ನಮ್ಮ ಕರ್ನಾಟಕ ಸರ್ಕಾರಕ್ಕೆ ಇಷ್ಟು ಕೀರ್ತಿ.

ಶ್ರೀ ಎಸ್.ಎಸ್. ಪಾಟೀಲ್ :— ಲೋಕೋಪಯೋಗಿ ಇಲಾಖೆಯವರು ಕಟ್ಟಿದ ಕಟ್ಟಡಗಳಿಗೆ ವಾಸ್ತು ಇಲ್ಲವೇನು? ಮಾನ್ಯ ಮುಖ್ಯಮಂತ್ರಿಗಳ ಮನೆ ಒಂದೆ ಅಲ್ಲ ಬೇರೆ ಮಂತ್ರಿಗಳು ವಾಸ್ತುಗೆ ಬಲಿಯಾಗಿದ್ದಾರೆ. ಮೊನ್ನೆ ನಾನು ಇದ್ದ ಮನಗೆ ಹೋಗಿದ್ದೆ ನನಗೆ ಗುರುತೇ ಆಗಲಿಲ್ಲ.

ಶ್ರೀ ಚಂದ್ರಶೇಖರಪ್ಪ :— ತಾವು ಮಂತ್ರಿಯಾಗಿದ್ದಾಗ ತಮ್ಮ ಮನೆಯ ಮುಂದೆ ಇದ್ದ ಗಂಧದ ಮರ ಕಳ್ಳತನವಾಯಿತಲ್ಲ ಹೇಗೆ ಆಯಿತು ಹೇಳಿ?

ಶ್ರೀ ಎಸ್.ಎಸ್. ಪಾಟೀಲ್ :— ಆ ಬಗ್ಗೆ ಆಮೇಲೆ ಹೇಳುತ್ತೇನೆ. ನನಗೆ ರಾಜ್‌ಕುಮಾರ್ ಬಗ್ಗೆ ಅಭಿಮಾನ ಇದೆ. ಮಾನ್ಯ ಅಧ್ಯಕ್ಷರೇ ಜನ ಹೇಗೆ ತಿಳಿದುಕೊಂಡಿದ್ದಾರೆಂದು

*2.00 ಪಿ.ಎಂ.*

ನಾನು ಹೇಳುತ್ತೇನೆ. ಬಸವಣ್ಣನವರ ಉದಾಹರಣೆಯನ್ನು ನಾನು ಹೇಳಿದೆ. ಅದಕ್ಕೆ ಅವರು ನೀವು ಹೇಳಿದಂತ ಭಾವನೆಯಿಂದ ರಾಜ್‌ಕುಮಾರ್‌ರವರನ್ನು ವೀರಪ್ಪನ್ ಬಿಟ್ಟಿಲ್ಲ. ರಾಜ್‌ಕುಮಾರ್ ರವರನ್ನು ಹಿಡಿದಿದ್ದರಿಂದ 100 ಕೋಟಿ ಸಿಕ್ಕಿತಲ್ಲ ಎಂದು ಅವರಿಗೆ ಬಿಡುಗಡೆ ಮಾಡುವಾಗ ಸನ್ಮಾನ ಮಾಡಿದ್ದಾನೆ ಎಂದರು. ಜನ ಹೇಳಿರುವುದನ್ನೇ ನಾನು ಇಲ್ಲಿ ಹೇಳುತ್ತಿದ್ದೇನೆ. ಆದರೆ ಸದನದಲ್ಲಿ ವೀರಪ್ಪನ್‌ಗೆ ಎಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿರಿ ಎಂದು ಮುಖ್ಯಮಂತ್ರಿಗಳಿಗೆ ಪ್ರಶ್ನೆಯನ್ನೇ ನಾವು ಕೇಳಬಾರದು. ಏಕೆಂದರೆ ಗಾಂಧೀಜಿ ಭಾವಚಿತ್ರವಿರುವ ಸದನದಲ್ಲಿ ಮುಖ್ಯಮಂತ್ರಿಗಳು ಈ ಪ್ರಶ್ನೆಗೆ ಸುಳ್ಳೇ ಹೇಳಬೇಕಾಗುತ್ತದೆಯಾದ ಕಾರಣ ನಾವೇ ಆ ಪ್ರಶ್ನೆಯನ್ನೇ ಕೇಳಿರುವುದೇ ಉತ್ತಮ. ಆದರೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂಬುದಕ್ಕೆ ಸಂಬಂಧಪಟ್ಟಂತೆ ಇರುವ ಆಪಾದನೆಗೆ ತನಿಖೆ ಮಾಡಲು ಸಿ.ಬಿ.ಐ.ಗೆ ರೆಫರ್ ಮಾಡಬೇಕೆಂದು ಹೇಳುತ್ತೇನೆ. ಯಾರೇ ಅಪಹರಣಕಾರರು ಯಾರನ್ನಾದರೂ ಗಣ್ಯರನ್ನು ಅಪಹರಣ ಮಾಡಿದಾಗ ಯಾವುದೇ ಸರ್ಕಾರವಿದ್ದರೂ ಏನಾದರೂ ಸಂಧಾನ ಮಾಡಿ ಬಿಡಿಸಿಕೊಳ್ಳಲು ಪ್ರಯತ್ನ ಪಡುತ್ತದೆ. ನಾನು ಹೇಳುವುದೇನೆಂದರೆ ಒಬ್ಬರ ಪ್ರಾಣ ಹೋದರೂ ಪರವಾಗಿಲ್ಲವೆಂದುಕೊಂಡು ಅನೇಕರ ಪ್ರಾಣವನ್ನು ತೆಗೆದಿರುವವರನ್ನು ಹಿಡಿಯಲು ನೇರವಾಗಿ ಅಟ್ಯಾಕ್ ಮಾಡಿ ಬಂಧಿತರನ್ನು ಬಿಡಿಸಿಕೊಂಡು ಬರಬೇಕು. ಇತ್ತೀಚೆಗೆ ವಿದೇಶದ ವಿಮಾನವೊಂದು ಅಪಹರಣವಾದಾಗ ಅಪಹರಣಕಾರರ ಬೇಡಿಕೆಗಳಿಗೆ ಸೊಪ್ಪು ಹಾಕದೇ ನೇರವಾಗಿ ಅಟ್ಯಾಕ್ ಮಾಡಿ ಬಿಡಿಸಿಕೊಂಡು ಬಂದರು. ಅದನ್ನು ಬಿಟ್ಟು ದುಡ್ಡು ಕೊಟ್ಟೋ, ಅಥವಾ ಇನ್ನಾವುದೋ ಬೇಡಿಕೆ ಈಡೇರಿಸಿ ಬಿಡಿಸಿಕೊಂಡು ಬರುವ ಪದ್ಧತಿ ಅನುಸರಿಸಿದರೆ ನಾಳೆ ದಿವಸ ಕಾಗೋಡು ತಿಮ್ಮಪ್ಪನವರನ್ನು ಕೂಡ ಅಪಹರಣ ಮಾಡಿದರೆ ಅದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಮಹದೇವ್‌ರವರು ಕೂಡ ಹಿಟ್ ಲಿಸ್ಟ್‌ನಲ್ಲಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಉಪಾಧ್ಯಕ್ಷರೆ, ನಾವು ಇಂದು ಬಹಹಳ ಗಂಭೀರವಾದ ವಿಚಾರದ ಮೇಲೆ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ಸದನದಿಂದ ಒಂದು ಸಂಕೇತ ಹೊರಗೆ ಹೋಗಬೇಕು. ಇಂದಿನ ಚರ್ಚೆಯನ್ನು ನೋಡುತ್ತಿದ್ದರೆ ವೀರಪ್ಪನ್ ಸಂತೋಷವಾಗಿಯೇ ಇರುವವನಾಗುತ್ತಾನೆ ಎಂದೆನಿಸುತ್ತದೆ. ನನ್ನ ಬಗ್ಗೆ ಈ ರೀತಿಯಲ್ಲಿ ಚರ್ಚೆ ಮಾಡುತ್ತಿದ್ದಾರಲ್ಲ ಎಂದು ಆತ ಸಂತೋಷಗೊಳ್ಳಬಹುದು. ಆದುದರಿಂದ ಚರ್ಚೆ ಅರ್ಥಪೂರ್ಣವಾಗಿರಲು ತಾವು ನಿಯಂತ್ರಣ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:— ನಾನು ಅದನ್ನೇ ಹೇಳಿದ್ದು. ಈ ಬಾರಿ ನಮ್ಮ ಎಸ್.ಟಿ.ಎಫ್.ನವರು ವೀರಪ್ಪನ್‌ನನ್ನು ಹಿಡಿದೇ ಹಿಡಿಯುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಆದರೆ ಇನ್ನು ಮುಂದೆ ಯಾರೇ ಅಪಹರಣ ಮಾಡಿದರೂ ನೇರವಾಗಿ ಅಟ್ಯಾಕ್ ಮಾಡಿ ಬಿಡಿಸಿಕೊಂಡು ಬರಬೇಕೆ ಹೊರತು ಬೇಡಿಕೆಯನ್ನು ಈಡೇರಿಸಿ ಬಿಡಿಸಿಕೊಂಡು ಬರದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಮುಂದೆ ವೀರಪ್ಪನ್ ಹಿಡಿಯುವಲ್ಲಿ ಕಾರ್ಯಾಚರಣೆ ಬಗ್ಗೆ ಪತ್ರಿಕೆಯವರಿಗೆ ನೀವು ಏನನ್ನೂ ಹೇಳಬೇಡಿ. ನೀವು ನಮಗೂ ಕೂಡ ಕಾರ್ಯಾಚರಣೆ ಬಗ್ಗೆ ತಿಳಿಸಬೇಡಿ. ನೀವು ಇದರ ಬಗ್ಗೆ ಏನೇ ಹೇಳಿಕೆ ಕೊಟ್ಟರೂ ನಿಮ್ಮ ಇಂಟಲಿಜೆನ್ಸ್‌ಗಿಂತ ಹೆಚ್ಚು ಇಂಟಲಿಜೆಂಟ್ ಆಗಿರುವ ವೀರಪ್ಪನ್‌ಗೆ ವಿಷಯ ತಿಳಿದು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇದಕ್ಕೆ ರಾಜ್‌ಕುಮಾರ್‌ರವರ ಅಪಹರಣವನ್ನು ಅವನು ಮಾಡಿದ್ದೇ ಉದಾಹರಣೆಯಾಗಿದೆ. ರಾಜ್‌ಕುಮಾರ್‌ರವರು ಯಾವಾಗ ಮನೆ ಬಿಡುತ್ತಾರೆ, ಗಾಜನೂರಿಗೆ ಎಷ್ಟು ಗಂಟೆಗೆ ಬರುತ್ತಾರೆ ಮತ್ತು ಇನ್ನಿತರ ಎಲ್ಲ ಅಂಶಗಳನ್ನು ವೀರಪ್ಪನ್ ಹೇಗೆ ಲೆಕ್ಕ ಹಾಕಿದ್ದಾನೆ ನೋಡಿ. ಆದಕಾರಣ ನಾನು ಹೇಳುವುದೇನೆಂದರೆ ವೀರಪ್ಪನ್ ಕಾರ್ಯಾಚರಣೆ ಬಗ್ಗೆ ನಮಗೇನೂ ಹೇಳಬೇಡಿ, ನೀವೇನಿದ್ದರೂ ಅಸೆಂಬ್ಲಿಯಲ್ಲಿ ವೀರಪ್ಪನ್‌ನನ್ನು ಜೀವಂತವಾಗಿ ಹಿಡಿದಿದ್ದೇವೆ ಅಥವಾ ಕೊಂದಿದ್ದೇವೆ ಎಂಬ ಬಗ್ಗೆ ಮಾತ್ರ ಹೇಳುವಂತಿರಬೇಕು. ಅದನ್ನು ಬಿಟ್ಟು ಇಲ್ಲಿ ಏನೇ ಚರ್ಚೆ ಮಾಡಿದರೂ ಆ ಸುದ್ದಿ ವೀರಪ್ಪನ್‌ಗೆ ಮುಟ್ಟುತ್ತದೆ. ಶಾಸಕರೇ ಅವರಿಗೆ ಸಪೋರ್ಟ್ ಇದ್ದಾರೆ ಎನ್ನುವ ಗುಲ್ಲು ಇದೆ. ಯಾವ ಶಾಸಕರ ಸಪೋರ್ಟ್ ಇತ್ತು, ಯಾವ ಶಾಸಕರು ವೀರಪ್ಪನ್‌ನನ್ನು ಬೆಳೆಸಿದರು ಎಂಬುದು ಬಯಲಿಗೆ ಬರಬೇಕು. ಇಲ್ಲದಿದ್ದರೆ ಇಡೀ ಶಾಸಕರೆಲ್ಲರಿಗೂ ಇದೊಂದು ಅಪಮಾನಕರವಾದಂತಾಗುತ್ತದೆ. ಆದಕಾರಣ ನೀವು ಇನ್ನು ಮುಂದೆ ಯಾವ ಕಾರ್ಯಾಚರಣೆ ಸುದ್ದಿಯನ್ನು ಪತ್ರಿಕೆಗೆ ಕೊಡಬೇಡಿ, ನಾವು ಕೂಡ ಯಾವ ಹೇಳಿಕೆಗಳನ್ನು ಕೊಡುವುದಿಲ್ಲ. ಇನ್ನೇನಿದ್ದರೂ ವೀರಪ್ಪನ್‌ನನ್ನು ಕೊಂದು ಹಾಕಿರುವ ಬಗ್ಗೆ ಅಥವಾ ಜೀವಂತವಾಗಿ ಹಿಡಿದಿರುವ ಬಗ್ಗೆ ಮಾತ್ರ ಜನರಿಗೆ ಸರ್ಕಾರ ಹೇಳಬೇಕೆಂದು ಕೇಳಿಕೊಳ್ಳುತೇನೆ. ಕೇಂದ್ರ ಸರ್ಕಾರ ಕೂಡ ಎರಡು ಸರ್ಕಾರಗಳಿಗೆ ಬೆಂಬಲ ಕೊಡುತ್ತೇವೆಂದು ಹೇಳಿ ತೀವ್ರತರವಾಗಿ ಕಾರ್ಯಾಚರಣೆ ಮಾಡುವಂತೆ ಹೇಳಿದೆ. ಪತ್ರಿಕೆಯಲ್ಲಿ ಇಂದು ನಾನು ಈ ಸುದ್ದಿಯನ್ನು ಓದಿದ್ದೇನೆ. ಆದುದರಿಂದ ನೀವು ಕೇಂದ್ರ ಸರ್ಕಾರದ ಸಹಾಯವನ್ನು ತೆಗೆದುಕೊಳ್ಳಿ. ಕೇಂದ್ರ ಸರ್ಕಾರಕ್ಕೂ ನಾನು ವಿನಂತಿಮಾಡುವುದೇನೆಂದರೆ ಎಸ್.ಟಿ.ಎಫ್. ಖರ್ಚನ್ನು ರಾಜ್ಯ ಮೇಲೆ ಹಾಕದೇ ಕೇಂದ್ರವೇ ವಹಿಸಿಕೊಳ್ಳಬೇಕೆಂದು ಹೇಳಿ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ (ತರಿಕೆರೆ) :— ಮಾನ್ಯ ಉಪಾಧ್ಯಕ್ಷರೆ, ರಾಜ್‌ಕುಮಾರ್ ಅಪಹರಣದ ಬಗ್ಗೆ ಸುಧೀರ್ಘ ಚರ್ಚೆಯಾಗಿದೆ. ಅಪಹರಣವಾದ ಮೇಲೆ ಅವರನ್ನು ಬಿಡಿಸಿಕೊಂಡು ಬರುವಲ್ಲಿ ಸರ್ಕಾರಕ್ಕೆ ಯಾವುದೇ ಕಳಂಕ ಬರದ ಹಾಗೆ ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ. ನಿನ್ನೆ ಮತ್ತು ಇಂದು ವಿರೋಧ ಪಕ್ಷದವರು ಬಿಡುಗಡೆ ವಿಚಾರದಲ್ಲಿ ಸರ್ಕಾರದ ನ್ಯೂನತೆ ಬಗ್ಗೆ ಹೇಳಿದರು. ಅವರು ಹೇಳಿರುವ ಧಾಟಿಯನ್ನು ನೋಡಿದರೆ ವಿರೋಧ ಪಕ್ಷದವರು ವಿಷಯದ ಗಂಭೀರತೆಯನ್ನು ಬಿಟ್ಟು ಚರ್ಚೆ ಮಾಡಿದ್ದಾರೆಂದು ನನಗನ್ನಿಸುತ್ತದೆ. ರಾಜ್‌ಕುಮಾರ್ ಅವರನ್ನು ಬಿಡುಗಡೆಗೊಳಿಸಲು ವಿರೋಧಪಕ್ಷದವರು ಸರ್ಕಾರಕ್ಕೆ ಮೊದಲಿನಿಂದಲೂ ಸೂಕ್ಷ್ಮ ರೀತಿಯಲ್ಲಿಯೇ ಸಹಕಾರವನ್ನು ಕೊಟ್ಟರು. ಆದರೂ ರಾಜ್‌ಕುಮಾರ್ ಬಿಡುಗಡೆಯಾದ ಮೇಲೆ ಅವರು ಬೇರೆ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಇವರು ಹೇಗೆ ಹೇಳುತ್ತಿದ್ದಾರೆನ್ನುವುದಕ್ಕೆ ಒಂದು ಸಣ್ಣ ಕಥೆಯನ್ನು ಹೇಳಬಯಸುತ್ತೇನೆ. ಹಳ್ಳಿ ಕಡೆ ಒಬ್ಬಳಿಗೆ ಮಕ್ಕಳಾಗಿರಲಿಲ್ಲ. ಎಷ್ಟೋ ವರ್ಷಗಳ ಮೇಲೆ ಅವಳು ಗರ್ಭಿಣಿಯಾದಾಗ ಅವಳಿಗೆ ಶುಶ್ರೂಷೆ ಮಾಡಿ ಮಗುವಾದ ಮೇಲೆ ಅವಳ ಬಗ್ಗೆಯೇ ಅನುಮಾನ ವ್ಯಕ್ತಪಡಿಸುತ್ತಾ ಆಡಿಕೊಂಡ ಹಾಗೆ ಯಾವುದೇ ರೀತಿಯ ಕಳಂಕವಿಲ್ಲದೇ ರಾಜ್‌ಕುಮಾರ್‌ರವರನ್ನು ಸರ್ಕಾರ ಬಿಡುಗಡೆಗೊಳಿಸಲು ವಿರೋಧ ಪಕ್ಷದವರು ಸಹಕಾರ ಕೊಟ್ಟು, ರಾಜ್‌ಕುಮಾರ್‌ರವರ ಬಿಡುಗಡೆಯಾದ ನಂತರ ಸರ್ಕಾರ 100 ಕೋಟಿ ರೂಪಾಯಿಗಳನ್ನು ಕೊಟ್ಟಿತು ಎಂದು ನಿರ್ದಿಷ್ಟ ದಾಖಲೆಗಳಿಲ್ಲದೇ ಬಚ್ಚೇಗೌಡರು, ಶ್ರೀನಿವಾಸಗೌಡರು ಮತ್ತು ಅನೇಕ ಸದಸ್ಯರು ಆರೋಪ ಮಾಡಿದ್ದಾರೆ. ಈ ರೀತಿಯ ಆರೋಪಗಳು ಯಾವುದೇ ಆಧಾರವನ್ನು ಹೊಂದಿಲ್ಲದಿರುವಂಥವುಗಳೇ ಆಗಿವೆ. ವೀರಪ್ಪನ್‌ನನ್ನು ಹಿಡಿಯಲು ವಿಫಲರಾಗಿರುವುದರಲ್ಲಿ ಹಿಂದಿನ ಜನತಾದಳದ ಜೆ.ಹೆಚ್ ಪಟೇಲರು ಮತ್ತು ದೇವೇಗೌಡರು ಕೂಡ ನೇರ ಜವಾಬ್ದಾರರಾಗಿರುವುದರಿಂದ ಆಪಾದನೆಯನ್ನು ಮಾಡುವಾಗ ಅವರನ್ನು ಕೂಡ ಸೇರಿಸಿಕೊಂಡೇ ನೀವು ಆಪಾದನೆಯನ್ನು ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರದಲ್ಲಿದ್ದ ಜೆ.ಹೆಚ್. ಪಟೇಲ್ ಹಾಗೂ ದೇವೇಗೌಡರ ಹೊಣೆಗೇಡಿತನದಿಂದ ಇಂದು ಕಾಂಗ್ರೆಸ್ ಸರ್ಕಾರ ಕಷ್ಟ ಅನುಭವಿಸಬೇಕಾಗಿ ಬಂತು. ಇಂದು ಎಸ್.ಎಂ. ಕೃಷ್ಣಾರವರ ಸರ್ಕಾರ ಯಾವುದೇ ಬಲಿದಾನವಾಗದಂತೆ ಮತ್ತು ಯಾರಿಗೂ ತೊಂದರೆಯಾಗದ ಹಾಗೆ ಮತ್ತು ಎಲ್ಲರ ಸಹಮತವನ್ನು ಪಡೆದುಕೊಂಡೇ ರಾಜ್‌ಕುಮಾರ್‌ರವರ ಬಿಡುಗಡೆ ಕ್ರಮ ತೆಗೆದುಕೊಂಡು ಅದರಂತೆ ರಾಜ್‌ಕುಮಾರ್‌ರವರ ಬಿಡುಗಡೆಯಾಗಿದೆ. ಇವರ ಬಿಡುಗಡೆಯಾಗಲು ರೂಪಿಸಿದ ತಂತ್ರಕ್ಕೆ ವಿರೋಧ ಪಕ್ಷದವರು ಸಹಕಾರವನ್ನು ಕೊಟ್ಟಿದ್ದಾರೆ. ಆ ಉಪಾಯದಲ್ಲಿ ನಾವು ಯಶಸ್ವಿಯಾಗಿದ್ದೇವೆ, ಆದಕ್ಕೆ ನೀವು ಸಹಕಾರವನ್ನು ಕೊಟ್ಟಿದ್ದೀರಿ. ತದನಂತರ ಈ ಒಂದು ವಾತಾವರಣ ತಿಳಿಯಾದ ಬಳಿಕ ಈಗ ಸರ್ಕಾರದ ಬಗ್ಗೆ ಇಲ್ಲಸಲ್ಲದ ಆರೋಪವನ್ನು ಹೊರಿಸಿ ಆರ್ಥಿಕ ವ್ಯವಸ್ಥೆ ಕುಸಿದಿದೆ, ಆಡಳಿತ ವೈಫಲ್ಯವಾಗಿದೆ ಎಂದರೆ ತಾವು ತಮ್ಮ ಆತ್ಮಶೋಧನೆಯನ್ನು ಮಾಡಿಕೊಂಡು ಯೋಚನೆ ಮಾಡಿ. ಈ ಸರ್ಕಾರ ಹೊಣೆಗಾರರೋ

ಅಥವಾ ಹಿಂದಿನ ಸರ್ಕಾರದ ಹೊಣೆಗೇಡಿತನದಿಂದ ನಾವು ಈ ಪರಿಸ್ಥಿತಿಗೆ ಬಂದು ಅನುಭವಿಸಬೇಕಾಗಿದೆ. ಈ ಹೊಣೆಗೇಡಿತನದ ವ್ಯವಸ್ಥೆಯನ್ನು ನಮ್ಮ ಮೇಲೆ ಹಾಕಬೇಡಿ. ನಾವು ಅತ್ಯಂತ ಸೂಕ್ಷ್ಮ ರೀತಿಯಲ್ಲಿ ನಿಮ್ಮ ಸಹಕಾರದೊಂದಿಗೆ ಬಹಳ ಜವಾಬ್ದಾರಿಯುತವಾಗಿ ಯಾರಿಗೂ ತೊಂದರೆ ಆಗದ ಹಾಗೆ, ಯಾವುದೇ ಅಹಿತಕರ ಘಟನೆಯಾಗದ ಹಾಗೆ ಮಾಡಿದ್ದೇವೆ. ಆದಕ್ಕೆ ನೀವು ಶಹಭಾಸ್‌ಗಿರಿ ಕೊಟ್ಟಿದ್ದೀರಿ. ಮತ್ತೆ ಏಕೆ ಹೀಗಾಯಿತು ಎಂದು ಹೇಳುವಂತಹ ವಿಚಾರ ಬೇಕಾಗಿಲ್ಲ. ಶಾಸಕರು ನಾವು ಮುಂದಿನ ಭವಿಷ್ಯದ ಬಗ್ಗೆ ಚರ್ಚೆ ಮಾಡುತ್ತೇವೆಂದು ಹೇಳಿದರು. ಯಾರು ಭವಿಷ್ಯವನ್ನು ನಿರ್ಧರಿಸಬೇಕು. ಮಾನ್ಯ ಸಿಂಧ್ಯರವರೆ ಯಾರ ಭವಿಷ್ಯ ಮುಂದೆ ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೇಗೆ ಹೇಳುತ್ತೀರಿ? ಮುಂದೆ ಆಗತಕ್ಕಂಥ ಹೊಣೆಗೇಡಿತನಕ್ಕೆ ಯಾರು ಸೂಚನೆ ಕೊಡುತ್ತಾರೆ? ನೀವು ಗೈಡ್‌ಲೈನ್ಸ್ ಕೊಡಿ ಅದರಂತೆ ನಾವು ಆಡಳಿತ ಮಾಡುತ್ತೇವೆ. ಯಾರೂ ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ತಾವು ಈ ಚರ್ಚೆ ಮಾಡುತ್ತಿರುವುದರ ಬಗ್ಗೆ ನಾನು ಬಹಳ ವಿಷಾದದಿಂದ ಹೇಳುವುದೇನೆಂದರೆ, ಏನು ಎರಡು ದಿವಸದಿಂದ ಆಗಿರುವಂತಹ ಚರ್ಚೆ ಇದೆ, ಅದು ಇಡೀ ಕರ್ನಾಟಕ ಜನತೆಗೆ ಆಗಿರತಕ್ಕಂಥ ಆರ್ಥಿಕ ಹೊರೆ, ಈ ಚರ್ಚೆ ಬೇಕಿಲ್ಲದ ಚರ್ಚೆ. ಏಕೆಂದರೆ ಎಲ್ಲಾ ಆಗಿಹೋಗಿದೆ. ಮುಂದೆ ಏನಾಗುತ್ತದೆ, ಮುಂದೆ ಆಡಳಿತ ವೈಫಲ್ಯತೆ ದೃಷ್ಟಿಯಿಂದ, ನಿಮ್ಮನ್ನು ತಿದ್ದುವುದಕ್ಕೋಸ್ಕರ ಈ ಚರ್ಚೆಯನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದಕ್ಕೆ ಯಾರು ದಾರಿ ಹೇಳುತ್ತೀರಿ? ಯಾವ ಮಾರ್ಗಸೂಚಿ ಸೂಚಿಸಿದಿರಿ? ವಿರೋಧ ಪಕ್ಷದವರೂ ಕೂಡ ನೀವು ಮಾಡುವುದು ತಪ್ಪಿದೆ, ಮುಂದೆ ಈ ರೀತಿ ನಡೆದುಕೊಳ್ಳಿ ಎಂದು ಮಾರ್ಗಸೂಚಿಯನ್ನು ನಮಗೆ ತಿಳಿಸಿಲ್ಲ. ಆದರೆ ನೀವು ಕರ್ನಾಟಕದ ಜನತೆಗೆ ಮಾನದಂಡ ಹಾಕುತ್ತಿದ್ದೀರಿ. ಈ ವಿಧಾನಸಭೆಗೆ ಸುಮ್ಮನೆ ಕಾಲವ್ಯಯವಾಗುವಂತಹ ವ್ಯವಸ್ಥೆಯನ್ನು ಮುಂದುವರೆಸುತ್ತಿದ್ದೀರಿ. ವಿರೋಧ ಪಕ್ಷದವರೆಲ್ಲಾ ಮಾತನಾಡಿದಿರಿ. ಅದನ್ನು ಸುಮಾರು 150 ಜನ ಕೇಳುತ್ತಿದ್ದೇವೆ. ಇದು ಏನಾಗಿದೆ ಎಂದರೆ ಹೇಳಿದ್ದೆ ಕತೆ ಹೇಳುವುದಾಗಿದೆಯೇ ಹೊರತು ಯಾವುದೇ ಮಾರ್ಗಸೂಚಿಯನ್ನು ಹೇಳಿಲ್ಲ. ಹಿಂದೆ ಆಗಿರತಕ್ಕಂಥಾದ್ದನ್ನು ಹೇಳಿಲ್ಲ, ಮುಂದೆ ಆಗುವುದನ್ನು ಹೇಳುವುದಿಲ್ಲ. ಆರ್ಥಿಕ ವ್ಯವಸ್ಥೆ ಹಾಳು ಮಾಡತಕ್ಕಂಥ ಕಲಾಪವನ್ನು ಮಾಡುತ್ತಿದ್ದೀರಿ. ಮಾನ್ಯ ಸಿಂಧ್ಯಾರವರು, ನಾವು ಈ ಚರ್ಚೆ ಮಾಡಬೇಕಾದರೆ ಎಲ್ಲರೂ ಇರಬೇಕು. ಪತ್ರಿಕೆಯವರು ಇರಬೇಕೆಂದು ಹೇಳುತ್ತಿದ್ದರು. ಯಾವುದೇ ವಿಧಾನಸಭೆಯಲ್ಲಾಗಲಿ, ಲೋಕಸಭೆಯಲ್ಲಾಗಲಿ ಯಾರೂ ಇರಬೇಕೆಂದು ಏನೂ ಇಲ್ಲ. ಯಾವುದೇ ಒಂದು ಸಾಧನೆಯನ್ನು ಮಾಡಬೇಕಾದರೆ, ನಾವು ಇರತಕ್ಕಂಥ ಗುಣಮಟ್ಟವನ್ನು ಪಡೆದುಕೊಂಡು ಚರ್ಚೆ ಮಾಡಬೇಕೆ ಹೊರತು ಪ್ರಚಾರಕ್ಕೋಸ್ಕರ ವಿಧಾನಸಭೆಯಲ್ಲಿ ಚರ್ಚೆ ಮಾಡಬೇಕಾಗಿಲ್ಲ. ಎಲ್ಲಾ ರೆಕಾರ್ಡ್ ಆಗುತ್ತದೆ. ತದನಂತರ ಅದು ಕಾರ್ಯರೂಪಕ್ಕೆ ಬರುತ್ತದೆ. ಆದುದರಿಂದ ಕಲಾಪವನ್ನು ನಾವು ಅರಿತುಕೊಂಡು ಮಾಡಬೇಕಾಗಿದೆ. ಆದುದರಿಂದ ಇದಕ್ಕೆಲ್ಲಾ ಕಾರಣಕರ್ತರು

ವಿರೋಧ ಪಕ್ಷದವರು. ವಿರೋಧ ಪಕ್ಷದವರು ಅತ್ಯಂತ ವಿಷಾದಕರ ರೀತಿಯಲ್ಲಿ ವರ್ತನೆ ಮಾಡಿ ಕಾಲಹರಣ ಮಾಡುವಂತಹ ವ್ಯವಸ್ಥೆ ಮಾಡಿದ್ದಾರೆ. ತಾವು ದಯವಿಟ್ಟು ಮಾರ್ಗಸೂಚಿಯನ್ನು ಕೊಡಿ. ಸುಮ್ಮನೆ ಕಾಲವ್ಯಯ ಮಾಡುವುದು ಬೇಡ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮೂರು ಗಂಟೆಗೆ ಉತ್ತರ ಕೊಡುತ್ತಾರೆ. ಮಾನ್ಯ ಸದಸ್ಯರುಗಳಾದ ಎಸ್.ಎಸ್. ಪಾಟೀಲ್ ಅದೇ ಹೇಳುತ್ತಾರೆ. ಮಾನ್ಯ ಸಿಂಧ್ಯ, ಸುರೇಶ್‌ಕುಮಾರ್ ಹಾಗೂ ಬಚ್ಚೆಗೌಡ ಎಲ್ಲೂ ಹೇಳಿದ್ದನ್ನೇ ಹೇಳುತ್ತಾರೆ. ತಾವು ಏನು ಮಾಡಿದ್ದೀರಿ? ಯಾವುದಕ್ಕೂ ಕೂಡ ನಿಖರವಾದಂತಹ ಒಂದೇ ಒಂದು ಉತ್ತರವಿಲ್ಲ. ಆದುದರಿಂದ ನಾನು ವಿರೋಧ ಪಕ್ಷದವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಮಾನ್ಯ ಉಪಾಧ್ಯಕ್ಷರೆ, ತಾವು ರೂಲಿಂಗ್ ಅನ್ನು ಇದರ ಬಗ್ಗೆ ಚರ್ಚೆಯಾಗಬೇಕೆಂದು ಕೊಟ್ಟಿದ್ದೀರಿ. ಆದಕ್ಕೆ ಸರ್ಕಾರ ಒಪ್ಪಿದೆ. ಈಗ ಚರ್ಚೆ ಬೇಡ ಎಂದರೆ ಏನು? ಇಲ್ಲಿ ಸಿಂಧ್ಯರವರು ಮಾತನಾಡಿಲ್ಲ. ಚೇರ್‌ಮನ್ ರೂಲಿಂಗ್ ಅನ್ನು ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಇವೊತ್ತು ನೀಲಕಂಠಪ್ಪನವರು ಈ ಸದನದಲ್ಲಿ ಮಾತನಾಡಿರುವುದರಿಂದಲೇ ಕಾಲಹರಣವಾಗಿರುವುದು. ಏಕೆಂದರೆ ನಿರ್ದಿಷ್ಟವಾದ ವಿಚಾರ ಮಾತನಾಡದೇ ಇರುವುದರಿಂದ ಇದುವರೆಗೆ ಕಾಲಹರಣವಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ :— ನಾನು ಆಪಾದನೆಯನ್ನು ಮಾಡಿಲ್ಲ; ಸರ್ಕಾರದ ಬಗ್ಗೆ ಹೇಳುತ್ತಿದ್ದೇನೆ. ಯಾರು ಮುಂದೆ ನಿರ್ದಿಷ್ಟವಾಗಿ ಏನಾಗಬೇಕೆಂದು ಹೇಳಿಲ್ಲ. ಮೂರು ದಿವಸದಿಂದ ಚರ್ಚೆ ನಡೆಯುತ್ತಿದ್ದು, ಮೂಕ ಪ್ರೇಕ್ಷಕರ ತರಹ ಹೇಳುತ್ತಿದ್ದೇವೆ. ಎಲ್ಲಾ ಬರೆದುಕೊಂಡಿದ್ದೇವೆ. ಯಾವುದೇ ಒಂದು ಆಪಾದನೆ ಮಾಡಿಲ್ಲ. ದಯಮಾಡಿ ವಿರೋಧ ಪಕ್ಷದವರು ಉತ್ತಮವಾದ ಸಲಹೆಯನ್ನು ಕೊಡಲಿ. ಉತ್ತಮವಾಗಿ ಟೀಕೆ ಮಾಡಿ. ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಬಗ್ಗೆ ಸರ್ಕಾರ ಉತ್ತಮ ರೀತಿಯಲ್ಲೇ ಕಾನೂನು ಪರಿಪಾಲನೆ ಮಾಡಿದೆ, ಆದಕ್ಕೆ ಶ್ಲಾಘನೆ ಮಾಡಿಕೊಳ್ಳುತ್ತಾ ಮಾನ್ಯ ಕೃಷ್ಣರವರು ಉತ್ತಮವಾಗಿ ನಿರ್ವಹಿಸಿದ್ದಾರೆ ಎಂದು ತಿಳಿಸುತ್ತೇನೆ.

ಉಪಾಧ್ಯಕ್ಷರು :— ಈಗ ಈ ಚರ್ಚೆ ಇಲ್ಲಿಗೆ ಮುಗಿಯಿತು. ಮತ್ತೆ ಮಧ್ಯಾಹ್ನ 3-15ಕ್ಕೆ ಸಭೆ ಸಮಾವೇಶಗೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಇದಕ್ಕೆ ಉತ್ತರ ಕೊಡುತ್ತಾರೆ.

*(ಸಭೆಯು ತನ್ನ ಕಲಾಪವನ್ನು 2 ಗಂಟೆ 17 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತು 3-15 ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)*

(ಸದನವು ಪುನ: 3.30ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕಾದ ಅನೇಕ ಮುಖ್ಯವಾದ ವಿಷಯಗಳಿವೆ. ಶೂನ್ಯವೇಳೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು :— ಡಾ: ರಾಜ್‌ಕುಮಾರ್‌ರವರ ಅಪಹರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಉತ್ತರವಾದ ತಕ್ಷಣ ವಿಧೇಯಕಗಳನ್ನು ತೆಗೆದುಕೊಳ್ಳಬೇಕು ಎಂದು ಇಂದಿನ ಬಿ.ಎ.ಸಿ. ಮೀಟಿಂಗ್‌ನಲ್ಲಿ ತೀರ್ಮಾನವಾಗಿದೆ. ನಂತರ ಸಮಯ ಸಿಕ್ಕಿದರೆ ಶೂನ್ಯವೇಳೆಯನ್ನು ತೆಗೆದುಕೊಳ್ಳೋಣ.

+ಶ್ರೀ ಎಂ. ಭಕ್ತವತ್ಸಲಂ (ಕೆಜಿಎಫ್) :— ಮಾನ್ಯ ಅಧ್ಯಕ್ಷರೇ, ಡಾ: ರಾಜ್‌ಕುಮಾರ್ ರವರ ಅಪಹರಣಕ್ಕೆ ಸಂಬಂಧಿಸಿದಂತೆ 108 ದಿವಸಗಳಲ್ಲಿ ಸರ್ಕಾರ ಏನೇನು ಮಾಡಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸ್ಪಷ್ಟವಾಗಿ ಹೇಳಿದ್ದಾರೆ. ಗಾಜನೂರು ಇರುವುದು ತಮಿಳುನಾಡಿನ ಬಾರ್ಡರ್‌ನಲ್ಲಿ. ವೀರಪ್ಪನ್ ಇರತಕ್ಕಂಥ ಕಾಡು ಇರುವುದೂ ತಮಿಳುನಾಡಿನಲ್ಲೇ. ಇಷ್ಟೆಲ್ಲಾ ಆಗಿರುವುದು ತಮಿಳುನಾಡಿನಲ್ಲೇ. ಡಾ: ರಾಜ್‌ಕುಮಾರ್‌ರವರ ಬಿಡುಗಡೆಗೆ ನಮ್ಮ ಸರ್ಕಾರ ಏನೇನು ಮಾಡಬೇಕೋ ಅದನ್ನು ಒಳ್ಳೆಯ ರೀತಿಯಲ್ಲಿ ಮಾಡಿ ಒಂದು ದೊಡ್ಡ ಸಾಧನೆ ಮಾಡಿದ್ದಾರೆ. ಇದು ಒಂದು ವರ್ಷದಲ್ಲಿ ಸರ್ಕಾರ ಮಾಡಿರುವ ಒಂದು ದೊಡ್ಡ ಸಾಧನೆ. ರಾಜ್‌ಕುಮಾರ್‌ರವರು ಇಡೀ ಕರ್ನಾಟಕ ರಾಜ್ಯದಲ್ಲಿ ಅಭಿಮಾನಿಗಳನ್ನು ಇಟ್ಟುಕೊಂಡಿದ್ದಾರೆ. ಕರ್ನಾಟಕದ ಸೂಪರ್ ಸ್ಟಾರ್ ಎಂದರೆ ರಾಜ್‌ಕುಮಾರ್‌ರವರು ಆದ್ದರಿಂದ, ರಾಜ್‌ಕುಮಾರ್‌ರವರಿಗೆ ಒಂದು ಚಿಕ್ಕ ತೊಂದರೆಯೂ ಆಗಬಾರದು ಎನ್ನುವ ಉದ್ದೇಶದಿಂದ ಅವರು ಶಾಂತಿಯಿಂದಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ರಾಜ್‌ಕುಮಾರ್‌ರವರ ಬಿಡುಗಡೆಯಾಗಬೇಕಾದರೆ ನಾವು ಸರ್ಕಾರಕ್ಕೆ ಕೋ-ಆಪರೇಟ್ ಮಾಡಬೇಕು ಎಂದು ಎಲ್ಲ ಜನರೂ ಕೋ-ಆಪರೇಟ್ ಮಾಡಿದರು. ರಾಜ್‌ಕುಮಾರ್‌ರವರನ್ನು ಅಪಹರಿಸಿಕೊಂಡು ಹೋಗಿದ್ದಂಥ ವೀರಪ್ಪನ್ ಸುಮಾರು 22 ವರ್ಷಗಳಿಂದ ಇಂಥ ಕೆಲಸಗಳನ್ನು ಮಾಡುತ್ತಿದ್ದಾನೆ. ಈ 22 ವರ್ಷಗಳಲ್ಲಿ 130 ಕ್ಕೂ ಹೆಚ್ಚು ಕೊಲೆಗಳನ್ನು ಮಾಡಿದ್ದಾನೆ, ಅವನ ಮೇಲೆ 156 ಕೇಸುಗಳು ದಾಖಲಾಗಿವೆ, 3 ಸಾವಿರಕ್ಕೂ ಹೆಚ್ಚು ಗಂಧದ ಮರಗಳನ್ನು ಕಡಿದು ಮಾರಾಟ ಮಾಡಿದ್ದಾನೆ ಇಷ್ಟಾದರೂ ತಮಿಳುನಾಡು ಸರ್ಕಾರ ಏಕೆ ರಾಜ್‌ಕುಮಾರ್‌ರವರ ಸೇಫ್ಟಿ ಬಗ್ಗೆ ಗಮನ ಕೊಡಲಿಲ್ಲ? ಅಲ್ಲಿನ ಪೋಲೀಸರು ಏನು ಮಾಡಿದರು? ಅಪಹರಣ ನಮ್ಮ ರಾಜ್ಯದ ಬಾರ್ಡರ್‌ನಲ್ಲಿ ಆಗಿಲ್ಲ ಎಂದು ಎಲ್ಲರೂ ಹೇಳುತ್ತಾರೆ. ಇಷ್ಟೆಲ್ಲಾ ತೊಂದರೆಯಾಗಿರುವುದಕ್ಕೆ ಕಾರಣ ತಮಿಳುಮಾಡು ಸರ್ಕಾರ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ತಮಿಳುನಾಡಿನಲ್ಲಿ

ಜಯಲಲಿತಾರವರ ಸರ್ಕಾರ ಬರುವುದಕ್ಕೆ ಮೊದಲು ವೀರಪ್ಪನ್ ಜೊತೆಯಲ್ಲಿ ಸುಮಾರು 150 ಜನರಿದ್ದರು. ಆದರೆ ಜಯಲಲಿತಾರವರು ಮುಖ್ಯಮಂತ್ರಿಗಳಾದ ಮೇಲೆ ಅದು ಕಡಿಮೆಯಾಯಿತು. ವೀರಪ್ಪನ್ ಜೊತೆಯಲ್ಲಿ 5 ಜನ ಮಾತ್ರ ಇದ್ದರು. 1996ರಲ್ಲಿ ಚುನಾವಣೆಗಳು ಬಂದವು. ಚುನಾವಣೆಗಳು ಬಂದ ಸಂದರ್ಭದಲ್ಲಿ, ಈಗ ಸರ್ಕಾರದಿಂದ ಸಂಧಾನಕಾರರಾಗಿ ಕಳುಹಿಸಿರುವ ನಕ್ಕೀರನ್ ಗೋಪಾಲ್‌ರವರು ವೀರಪ್ಪನ್ ಕಡೆಯಿಂದ 'ಕರುಣಾನಿಧಿಯವರಿಗೆ ಓಟು ಹಾಕಬೇಕು' ಎಂದು ಮಾಡಿದ ಪ್ರಚಾರ ಸನ್ ಟಿ.ವಿ.ಯಲ್ಲೂ ಬಂದಿದೆ, ಉದಯ ಟಿ.ವಿ.ಯಲ್ಲೂ ಬಂದಿದೆ. ನಂತರ ಕರುಣಾನಿಧಿಯವರು ಚುನಾವಣೆಯಲ್ಲಿ ಗೆದ್ದು ಮುಖ್ಯಮಂತ್ರಿಗಳಾದ ಮೇಲೆ, ವೀರಪ್ಪನ್ ನಮಗೆ ಸಪೋರ್ಟ್ ಮಾಡಿದ್ದಾನೆ, ಟಿ.ವಿ.ಯಲ್ಲಿ ಕ್ಯಾನ್‌ವಾಸ್ ಮಾಡಿದ್ದಾನೆ, ಗೋಪಾಲನ್ ನಮಗೆ ಸಪೋರ್ಟ್ ಮಾಡಿದ್ದಾನೆ, ಈಗ ನಾವು ಮುಖ್ಯಮಂತ್ರಿಗಳಾಗಿದ್ದೇವೆ ಎನ್ನುವ ಕಾರಣಕ್ಕಾಗಿ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಿಂದ ಪೋಲೀಸರನ್ನು ವಿತ್‌ಡ್ರಾ ಮಾಡಿದ್ದಾರೆ. ಈ ರೀತಿ ವೀರಪ್ಪನ್‌ಗೆ ಸರ್ಕಾರ ಫ್ರೀ ರೂಟ್ ಕೊಟ್ಟಮೇಲೆ ವೀರಪ್ಪನ್ ಜೊತೆ 5 ಜನ ಇದ್ದವರು ಈಗ ಎಲ್.ಟಿ.ಟಿ.ಇ.ಯವರು ಎಲ್ಲರೂ ಸೇರಿ 150 ಜನರಿಗಿಂತ ಹೆಚ್ಚಿಗೆ ಜನ ಅಲ್ಲಿ ಸೇರಿದ್ದಾರೆ. ಇದಕ್ಕೆ ಕಾರಣ ತಮಿಳುನಾಡು ಸರ್ಕಾರ. ಇವರೆಲ್ಲಾ ಒಟ್ಟಿಗೆ ಸೇರಿದ ಮೇಲೆ ರಾಜ್‌ಕುಮಾರ್‌ರವರನ್ನು ಅಪಹರಿಸಲು ತಮಿಳುನಾಡು ಸರ್ಕಾರವೇ ಕಾರಣ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಮಿಳುನಾಡಿಗೆ ಇಬ್ಬರು ಮುಖ್ಯಮಂತ್ರಿಗಳು ಇರಬಹುದು ಎನ್ನುವ ಡೌಟ್ ನನಗೆ ಬಂದಿದೆ. ತಮಿಳುನಾಡಿಗೆ ಕರುಣಾನಿಧಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ವೀರಪ್ಪನ್‌ನನ್ನು ಕಾಡಿಗೆ ಮುಖ್ಯಮಂತ್ರಿಯಾಗಿ ಕರುಣಾನಿಧಿಯವರು ಮಾಡಿದ್ದಾರೇನೋ ಗೊತ್ತಿಲ್ಲ. ಅವನು ಏನಾದರೂ ಮಾಡಿಕೊಳ್ಳಲಿ ಎಂದು ಫ್ರೀಆಗಿ ಬಿಟ್ಟುಬಿಟ್ಟಿದ್ದಾರೆ. ಅವನನ್ನು ಫ್ರೀಆಗಿಬಿಟ್ಟಮೇಲೆ ಈಗ ಅವನ ಬಳಿ ಎಕೆ-47 ಗನ್ ಇದೆ, ಸೆಲ್ಯುಲಾರ್ ಫೋನ್ ಇದೆ, ಲೋಕಲ್‌ನಿಂದ ಏನೇನು ಬೇಕೋ ಎಲ್ಲ ಸಪ್ಲೈ ಆಗುತ್ತಿದೆ. 18-6-1998ರಲ್ಲಿ ವೀರಪ್ಪನ್ ಡಾ: ಕೃಷ್ಣಸ್ವಾಮಿ ಎನ್ನುವರನ್ನು ಕಿಡ್‌ನ್ಯಾಪ್ ಮಾಡಿದ. ಅವರು ಅಲ್ಲಿಂದ ತಪ್ಪಿಸಿಕೊಂಡು ಮದ್ರಾಸಿಗೆ ಬಂದರು. ಅವರು ಕಳೆದ ತಿಂಗಳು ಟಿ.ವಿ.ಯಲ್ಲಿ ಒಂದು ದೊಡ್ಡ ನ್ಯೂಸ್ ಕೊಟ್ಟಿದ್ದಾರೆ. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ ಕರ್ನಾಟಕ ಸರ್ಕಾರಕ್ಕೆ ಮತ್ತು ತಮಿಳುನಾಡು ಸರ್ಕಾರಕ್ಕೆ ನಾನು ಒಂದು ಪತ್ರ ಬರೆದಿದ್ದೇನೆ. ಡಾ: ರಾಜ್‌ಕುಮಾರ್ ರಜನೀಕಾಂತ್, ಮಾಜಿ ಪ್ರಧಾನಿಗಳಾದ ದೇವೇಗೌಡ, ತಮಿಳುನಾಡು ಅರಣ್ಯ ಸಚಿವರನ್ನು ಅಪಹರಿಸುವುದಕ್ಕೆ ವೀರಪ್ಪನ್ ಪ್ಲಾನ್ ಮಾಡಿದ್ದಾನೆ ಎಂದು ಒಂದು ಲೆಟರ್ ಬರೆದಿದ್ದಾರೆ. ಆಗ ಕರ್ನಾಟಕದಲ್ಲಿ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದರು. ಆಗ ಅವರು ಒಬ್ಬ ಪೋಲೀಸ್ ಅಧಿಕಾರಿಯನ್ನು ಮದ್ರಾಸಿಗೆ ಕೃಷ್ಣಸ್ವಾಮಿಯನ್ನು ಮೀಟ್ ಮಾಡಿ ಬರಲು ಕಳುಹಿಸಿದ್ದಾರೆ. ಅವರು ನ್ಯೂಸ್ ತೆಗೆದುಕೊಂಡು ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಜೆ.ಹೆಚ್. ಪಟೇಲರು

ಮಾಡಿದ್ದಾರೆ. ಅದೇ ಪತ್ರವನ್ನು ಕೃಷ್ಣಸ್ವಾಮಿಯವರು ಕರುಣಾನಿಧಿಯವರಿಗೂ ಕಳುಹಿಸಿದ್ದಾರೆ. ಕರುಣಾನಿಧಿಯವರು ಅದರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಆ ಲೆಟರ್ ಮೇಲೆ ಯಾವುದೇ ಇಂಟರೆಸ್ಟ್ ತೆಗೆದುಕೊಳ್ಳಲಿಲ್ಲ. ಅದನ್ನು ನೆಗ್ಲೆಕ್ಟ್ ಮಾಡಿದ್ದಾರೆ. ಅದೇ ರಾಜ್‌ಕುಮಾರ್‌ರವರ ಅಪಹರಣವಾಗಲು ಕಾರಣವಾದುದು. ತಮಿಳುನಾಡು ಸರ್ಕಾರ ಕೇರ್‌ಲೆಸ್ ಮಾಡಿದುದೇ ಒಂದು ಮುಖ್ಯ ಕಾರಣ. ನಂತರ ಅರ್ಗೇಶನ್ ಎನ್ನುವ ತಮಿಳುನಾಡಿನ ಸ್ಪೆಷಲ್ ಬ್ರಾಂಚಿನ ಪೋಲೀಸ್ ಅಧಿಕಾರಿಯವರು ತಮಿಳುನಾಡು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದು, ಡಾ: ರಾಜ್‌ಕುಮಾರ್‌ರವರನ್ನು ಕಿಡ್‌ನ್ಯಾಪ್ ಮಾಡಲು ವೀರಪ್ಪನ್ ಪ್ಲಾನ್ ಮಾಡಿದ್ದಾನೆ, ಗೋಪಾಲ್‌ನಿಂದ ಏನೇನು ಬೇಕೋ ಎಲ್ಲಾ ಸಪ್ಲೈ ಆಗುತ್ತಿದೆ ಎಂದು ಬರೆದಿದ್ದಾನೆ. ಆ ಲೆಟರ್ ಮೇಲೆ ತಮಿಳುನಾಡು ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿಲ್ಲ. ಇವೆಲ್ಲದರಿಂದಾಗಿ ಡಾ: ರಾಜ್‌ಕುಮಾರ್ ಅವರ ಅಪಹರಣವಾಯಿತು. ಇದಕ್ಕೆ ಮುಖ್ಯ ಕಾರಣ ತಮಿಳುನಾಡು ಸರ್ಕಾರ. ವೀರಪ್ಪನ್ ನಮ್ಮ ಸೂಪರ್ ಸ್ಟಾರ್ ಅವರನ್ನು ಕಿಡ್‌ನ್ಯಾಪ್ ಮಾಡಿದ ಮೇಲೆ 10 ಬೇಡಿಕೆಗಳನ್ನು ಮುಂದಿಟ್ಟಿದ್ದಾನೆ. ಆ ಡಿಮ್ಯಾಂಡ್ಸ್‌ಗೂ ಮತ್ತು ಕರ್ನಾಟಕದಲ್ಲಿರತಕ್ಕಂಥ ತಮಿಳರಿಗೂ ಏನೂ ಸಂಬಂಧವಿಲ್ಲ. ಆ ಡಿಮ್ಯಾಂಡ್ಸ್‌ನ್ನು ಯಾರೂ ಲೈಕ್ ಮಾಡಿಲ್ಲ. ವೀರಪ್ಪನ್ ಕಡೆಯಿಂದ ಬಂದಿರುವ ಡಿಮ್ಯಾಂಡ್ಸ್ ಬಗ್ಗೆ ನೀವು ನೀವೆಲ್ಲ ಗಮನಹರಿಸಿ ನೋಡಿದಾಗ ಹಿಂದೆ ಶ್ರೀ ಕರುಣನಿಧಿ ಅವರು ಏನು ಬೇಡಿಕೆ ಇಟ್ಟಿದ್ದರೋ ಅದೇ ಡಿಮ್ಯಾಂಡ್ಸ್‌ನ್ನು ವೀರಪ್ಪನ್ ಕೇಳಿದ್ದಾನೆ. ಕಾವೇರಿ ನದಿ ನೀರನ್ನು ಬಿಡಬೇಕೆಂದು ಶ್ರೀ ಕರುಣಾನಿಧಿ ಅವರು ಕೇಳಿದ್ದರು ಅದೇ ಡಿಮ್ಯಾಂಡ್ಸ್‌ನ್ನು ವೀರಪ್ಪನ್ ಕೇಳಿದ್ದಾನೆ. ಟಿ.ಎಂ.ಸಿ. ಎಂದರೆ ಅವನಿಗೆ ಗೊತ್ತಿಲ್ಲ, ಅಂಥವನು ಟಿ.ಎಂ.ಸಿ ನೀರು ಬೇಕೆಂದು ಕೇಳುತ್ತಾನೆ. ಇದು ಕರುಣಾನಿಧಿ ಡಿಮ್ಯಾಂಡ್ ಆಗಿದೆ. ಹಾಗೆಯೇ ತಿರುವಳ್ಳವರ್ ಪ್ರತಿಮೆಯನ್ನು ಕರ್ನಾಟಕದಲ್ಲಿ ಸ್ಥಾಪಿಸಬೇಕು ಎಂದು ಕೇಳುತ್ತಾನೆ. ಇದನ್ನು ಕೂಡ ಪ್ರಾರಂಭದಲ್ಲಿ ಶ್ರೀ ಕರುಣಾನಿಧಿ ಅವರು ಕೇಳಿದ್ದರು. ಹಿಂದೆ ಶ್ರೀ ಕರುಣಾನಿಧಿ ಅವರು ಕೇಳಿದಂಥ 10 ಬೇಡಿಕೆಗಳನ್ನೇ ಈಗ ವೀರಪ್ಪನ್ ಕೇಳಿದ್ದಾನೆ. ಆದ್ದರಿಂದ ಇದು ವೀರಪ್ಪನ್ ಬೇಡಿಕೆಯಲ್ಲ, ಇದು ಶ್ರೀ ಕರುಣಾನಿಧಿಯವರ ಬೇಡಿಕೆಯಾಗಿದೆ. ಇನ್ನು ವೀರಪ್ಪನ್ ಹತ್ತಿರಕ್ಕೆ ಸಂಧಾನಕಾರರಾಗಿ ಶ್ರೀ ಗೋಪಾಲನ್ ಅವರನ್ನು ನಾಲ್ಕು ಸಲ ಕಳುಹಿಸಿದ್ದಾರೆ. ತಮಿಳುನಾಡು ಸರ್ಕಾರದ ಒಪೀನಿಯನ್ ಕೊಟ್ಟ ಮೇಲೆ ಆ ಸಂಧಾನಕಾರ ವೀರಪ್ಪನ್ ಬಳಿಗೆ ಹೋಗಿರುವುದು. ಅಲ್ಲಿ ವೀರಪ್ಪನ್ ಜೊತೆಯಲ್ಲಿ ಏನೇನು ಮಾತನಾಡಿದ್ದಾರೆ, ವೀರಪ್ಪನ್ ಏನೇನು ಮಾತನಾಡಿದ್ದಾರೆ, ವೀರಪ್ಪನ್ ಏನೇನು ಹೇಳಿ ಕಳುಹಿಸಿದ್ದಾನೆ ಇವುಗಳ ಬಗ್ಗೆ ಸರ್ಕಾರದ ಗೆಜೆಟ್‌ನಲ್ಲಿ ಏನನ್ನೂ ಹೇಳಲಿಲ್ಲ. ಇನ್ನೊಂದು ಮಹತ್ವದ್ದು ಏನೆಂದರೆ - ವೀರಪ್ಪನ್ ಗೋಪಾಲನ್ ಮುಖಾಂತರ ಏನು ಮೆಸೇಜ್ ಕಳುಹಿಸಿಕೊಡುತ್ತಾನೋ ಅದು ನೇರವಾಗಿ ಮೊದಲು ಶ್ರೀ ಕರುಣಾನಿಧಿ ಅವರಿಗೆ ತಲುಪುತ್ತದೆ. ಆ ನಂತರ ಕರ್ನಾಟಕ ಸರ್ಕಾರದ ನಮ್ಮ ಮುಖ್ಯಮಂತ್ರಿಗಳಿಗೆ ತಲುಪುತ್ತದೆ. ಶ್ರೀ ಕರುಣಾನಿಧಿ,

ಗೋಪಾಲನ್ ಮತ್ತು ವೀರಪ್ಪನ್ ಈ ಮೂರು ಜನರು ಒಟ್ಟಿಗೆ ಸೇರಿ ಒಂದು ಡ್ರಾಮ ಮಾಡಿದ್ದಾರೆ. ಆ ಡ್ರಾಮವೇ ಈ 108 ದಿವಸಗಳ ಡ್ರಾಮವಾಗಿದೆ. ದೇಶದಲ್ಲಿಯೇ ಕರ್ನಾಟಕ ರಾಜ್ಯ ಅತ್ಯಂತ ಶಾಂತಿಯುತ ರಾಜ್ಯವಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈಗ ಇಲ್ಲಿಗೆ ಎಲ್.ಟಿ.ಟಿ.ಇ. ಲಿಂಕ್ ಆಗಿಬಿಟ್ಟಿದೆ. ಇದರ ಬಗ್ಗೆ ಕೂಡಲೇ ನಮ್ಮ ಸರ್ಕಾರ ಆ್ಯಕ್ಷನ್ ತೆಗೆದುಕೊಳ್ಳಬೇಕು. ಡಾ: ರಾಜ್ ಅವರನ್ನು ಬಿಡುಗಡೆ ಮಾಡಿಸಿದವರಲ್ಲಿ ಮುಖ್ಯವಾಗಿ ಡಾ: ಭಾನು ಅವರ ಹೆಸರು ಕೇಳಿ ಬರುತ್ತಿದೆ. ಡಾ: ಭಾನು ಅವರು ನಿಜವಾಗಿ ಡಾಕ್ಟರ್ ಅಲ್ಲ. ತಮಿಳುನಾಡಿನಲ್ಲಿ ಮಧುರೈ ಮಾವೊಟ್ಟಂನ ಕುಸ್ಲಂಪಟ್ಟಿನಲ್ಲಿ ಅವರ ಸ್ವಂತ ಊರು ಇದೆ. ಅವರು ತಮಿಳುನಾಡಿನಿಂದ ಮಲೇಷ್ಯಾಕ್ಕೆ ಹೋಗಿದ್ದಾರೆ. ನಂತರ ಮಲೇಷ್ಯಾದಿಂದ ಕರ್ನಾಟಕಕ್ಕೆ ಬಂದಿದ್ದಾರೆ.

ಅಧ್ಯಕ್ಷರು :— ಅವರು ಎಲ್ಲಿಗಾದರೂ ಹೋಗಲಿ, ಯಾವುದೋ ಊರಿನಲ್ಲಿ ಹುಟ್ಟಿದರು, ಅವರು ಮಲೇಷ್ಯಾಕ್ಕೆ ಹೋದರು, ನಮಗೆ ಅದೆಲ್ಲ ಅವಶ್ಯಕತೆಯಿಲ್ಲ. ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಕೆ. ಭಕ್ತವತ್ಸಲಂ :— ಮಾನ್ಯ ಅಧ್ಯಕ್ಷರೆ, ಅವರ ಬ್ಯಾಕ್‌ನಲ್ಲಿ ಎಲ್.ಟಿ.ಟಿ.ಇ. ಇದೆ. ಅದಕ್ಕಾಗಿ ಇದನ್ನು ನಾನು ಹೇಳುತ್ತಿದ್ದೇನೆ. ಡಾ: ಭಾನು ಅವರು ಗ್ರಾನೈಟ್ ವ್ಯವಹಾರ ಮಾಡುತ್ತಾರೆ. ಆ ಬ್ಯುಸಿನೆಸ್‌ನಲ್ಲಿ ಈಗ ಎಲ್.ಟಿ.ಟಿ.ಯ ಕನೆಕ್ಷನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರಿನ ಇಂದಿರಾನಗರದಲ್ಲಿ ಇವರ ಬಂಗ್ಲೆ ಇದೆ. ಇವರಿಗೆ ಕನೆಕ್ಷನ್ ಇರತಕ್ಕಂಥದ್ದೆಲ್ಲಾ ತಮಿಳುನಾಡಿನಲ್ಲಿಯೇ. ಇವರು ಎಲ್.ಟಿ.ಟಿ.ಇ. ಲಿಂಕ್ ಇಟ್ಟುಕೊಂಡಿದ್ದಾರೆ. ಮಾದನೂರಿನಲ್ಲಿ ಸ್ವಂತ ಗ್ರಾನೈಟ್ ಫ್ಯಾಕ್ಟರಿಯನ್ನು ಇಟ್ಟುಕೊಂಡಿದ್ದಾರೆ. ಅಲ್ಲಿ ಎಲ್.ಟಿ.ಟಿ.ಇ.ಯವರ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆಂದು ಹೇಳುವ ಶ್ರೀ ನೆಡುಮಾರನ್ ಅವರ ರಿಲೇಶನ್‌ಶಿಪ್‌ನ್ನು ಇಟ್ಟುಕೊಂಡಿದ್ದಾರೆ ಎನ್ನುವ ಸುದ್ದಿ ಪತ್ರಿಕೆಯಲ್ಲಿ ಬಂದಿದೆ. ತಮಿಳುನಾಡಿನ ಕುಸ್ಲಂಪಟ್ಟಿನಲ್ಲಿ ಇದ್ದವರು ಈಗ ಕರ್ನಾಟಕಕ್ಕೆ ಬಂದು ಎಲ್.ಟಿ.ಟಿ.ಇ.ಯ ಲಿಂಕ್ ಇಟ್ಟುಕೊಂಡಿದ್ದಾರೆನ್ನುವ ಸುದ್ದಿ ಇರುವುದರಿಂದ ನಮ್ಮ ಕರ್ನಾಟಕದಲ್ಲಿರುವ ತಮಿಳರಿಗೆ ಕೆಟ್ಟ ಹೆಸರು ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ನಿನ್ನೆಯ ದಿವಸ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಶ್ರೀ ನೆಡುಮಾರನ್ ಅವರ ಹೆಸರೇ ಬಂದಿಲ್ಲ. ಶ್ರೀ ನೆಡುಮಾರನ್ ಅಪಹರಣಕ್ಕೊಳಗಾದವರನ್ನು ಕರೆದುಕೊಂಡು ಬಂದಿದ್ದಾರೆಂದು ತಮಿಳುನಾಡಿನ ಮುಖ್ಯಮಂತ್ರಿಗಳು ಅವರಿಗೆ ಶಾಲು ಹೊದಿಸಿ ಬಹಳಷ್ಟು ಮರ್ಯಾದೆ ಕೊಟ್ಟಿದ್ದಾರೆ. ಈಗ ನೆಡುಮಾರನ್ ಮೇಯಿನ್ ಪರ್ಸನ್ ಎಂದು ಡಾ: ರಾಜ್ ಅವರೇ ಹೇಳಿದ್ದಾರೆ. ಶ್ರೀ ನೆಡುಮಾರನ್ ಎಲ್.ಟಿ.ಟಿ.ಇ. ಲಿಂಕ್ ಇಟ್ಟುಕೊಂಡಿದ್ದಾರೆ. ಬೆಂಗಳೂರಿನ ತಮಿಳು ಸಂಘದ ಅಧ್ಯಕ್ಷರು ಕೂಡ ಈ ಗುಂಪಿನಲ್ಲಿ ಇದ್ದಾರೆ. ಇದನ್ನು ನೋಡಿದ ಮೇಲೆ ಕರ್ನಾಟಕದಲ್ಲಿ ಅದರಲ್ಲೂ ನಮ್ಮ ಬೆಂಗಳೂರಿನಲ್ಲಿ ಎಲ್.ಟಿ.ಟಿ.ಇ.ಯ ಲಿಂಕ್ ಜಾಸ್ತಿ ಆಗಿ ಅದರಿಂದ ಏನು ಅಪಾಯ ಕಾದಿದೆಯೋ ಎನ್ನುವ ಭಯ ನಮಗೆಲ್ಲ ಉಂಟಾಗಿದೆ. ಕರ್ನಾಟಕದಲ್ಲಿ ಎಲ್.ಟಿ.ಟಿ.ಇ. ಗುಂಪನ್ನು ನಿರ್ನಾಮ ಮಾಡುವ ಸಲುವಾಗಿ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಡಾ: ರಾಜ್‌ಕುಮಾರ್ ಅವರ ಅಪಹರಣವಾದ ಆ 108 ದಿವಸಗಳಲ್ಲಿ ಏನೇನು ಆಗಿದೆ ಎನ್ನುವುದು ಕರ್ನಾಟಕ ಜನತೆಗೆ ಗೊತ್ತಾಗಬೇಕು. ಅದು ಗೊತ್ತಾಗಬೇಕಾದರೆ ಡಾ: ರಾಜ್ ಅವರನ್ನೇ ಕೇಳಬೇಕಾಗುತ್ತದೆ. ಶ್ರೀ ಗೋಪಾಲನ್ ಕೊನೆಯಲ್ಲಿ ಏಕೆ ಹೋಗಲಿಲ್ಲ? ನಾಲ್ಕು ಸಲ ಹೋಗಿಬಂದ ಗೋಪಾಲನ್‌ನನ್ನು ಕೊನೆಯಲ್ಲಿ ವೀರಪ್ಪನ್ ಏಕೆ ಕರೆಯಲಿಲ್ಲ? ಇತ್ಯಾದಿಗಳನ್ನು ಸರ್ಕಾರ ಕೇಳಿ ತಿಳಿದುಕೊಂಡು ಅದನ್ನು ಜನತೆಗೆ ತಿಳಿಸಬೇಕು. ಜನರು ಹೊರಗಡೆ ಏನು ಹೇಳುತ್ತಾರೆಂದರೆ- ನೀವೆಲ್ಲ ವೀರಪ್ಪನ್ ಬಗ್ಗೆ ಸದನದ ಒಳಗಡೆ ಮಾತನಾಡುತ್ತೀರಿ, ವೀರಪ್ಪನ್ ಈಗಾಗಲೇ ಶ್ರೀ ಲಂಕಾಕ್ಕೆ ಹೋಗಿಬಿಟ್ಟಿದ್ದಾನೆಂದು ಹೇಳುತ್ತಾರೆ. ನಾವು ಇಲ್ಲಿ ವೀರಪ್ಪನ್ ಹಿಡಿಯುವುದಕ್ಕೆ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಮಾತನಾಡುತ್ತಲೇ ಇರುತ್ತೇವೆ. ಅಲ್ಲಿ ಶ್ರೀ ಕರುಣಾನಿಧಿ ಅವರು ಕೂಡ ಆಕ್ಷನ್ ಸ್ಟಾರ್ಟ್ ಮಾಡಿಲಿಟ್ಟಿದ್ದೇವೆ ಎಂದು ನಿನ್ನೆಯ ದಿವಸ ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಅವರು ಸುಮ್ಮನೆ ಮಾತಿಗೆ ಹೇಳುತ್ತಾರೆ ಅಷ್ಟೆ. ಶ್ರೀ ಕರುಣಾನಿಧಿ ಅವರೇ ವೀರಪ್ಪನ್ ಅಬ್‌ಸ್ಕಾಂಡ್ ಆಗುವುದಕ್ಕೆ ಹೆಲ್ಪ್ ಮಾಡಿದ್ದಾರೆ, ಅವರೇ ವೀರಪ್ಪನ್‌ನನ್ನು ಮೊದಲು ಕಳುಹಿಸಿಬಿಟ್ಟು ಒಂದು ದಿವಸದ ನಂತರ ಡಾ: ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಿದ್ದಾರೆಂದು ತಮಿಳುನಾಡಿನಲ್ಲಿ ಜನರು ಹೇಳುತ್ತಾರೆ. ಡಾ: ರಾಜ್ ಅವರು ಅಪಹರಣವಾಗುವುದಕ್ಕೆ ಮುಖ್ಯ ಕಾರಣ ಈಗಿನ ತಮಿಳುನಾಡು ಸರ್ಕಾರ. ಅವರಿಗೆ ಸಿ.ಬಿ.ಐ. ಅಧಿಕಾರಿಯೊಬ್ಬರು ರಿಪೋರ್ಟ್ ಕೊಟ್ಟರೂ ಸಹ ಪೊಲೀಸ್ ಬಂದೋಬಸ್ತ್ ಮಾಡಿಲ್ಲ. ತಮಿಳುನಾಡಿನಲ್ಲಿರುವ ವೀರಪ್ಪನ್ ಡಾ: ರಾಜ್ ಅವರನ್ನು ಕರೆದುಕೊಂಡು ಹೋಗಿರುವುದು, ಡೀಲಿಂಗ್ ಮಾಡಿರುವುದು ಮತ್ತು ಹಣ ಕೊಟ್ಟಿರುವುದು ತಮಿಳುನಾಡು ಸರ್ಕಾರ. ತಮಿಳುನಾಡು ಸರ್ಕಾರವೇ ಎಲ್.ಟಿ.ಟಿ.ಇ.ಯ ಲಿಂಕ್ ಇಟ್ಟುಕೊಂಡು ಇದನ್ನು ಮಾಡಿಸಿರುವುದು. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಏನು ಬೇಕಾದರೂ ಕೇಂದ್ರ ಸರ್ಕಾರದಿಂದ ಹೆಲ್ಪ್ ಮಾಡುವುದಕ್ಕೆ ತಯಾರಿದ್ದೇವೆಂದು ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದ್ದೇವೆ. ಆದ್ದರಿಂದ ಅವರ ಸಹಾಯವನ್ನು ಸಹ ಪಡೆದುಕೊಂಡು ವೀರಪ್ಪನ್ ಹಿಡಿಯುವುದಕ್ಕೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು. ತಮಿಳುನಾಡು ಸರ್ಕಾರ ವೀರಪ್ಪನ್‌ನನ್ನು ಹಿಡಿಯುತ್ತೇವೆಂದು ಬಾಯಲ್ಲಿ ಹೇಳುತ್ತಾರೆ, ಆದರೆ ಕೈಯಲ್ಲಿ ಏನೂ ಮಾಡುವುದಿಲ್ಲ. ವೀರಪ್ಪನ್‌ಗೂ ಶ್ರೀ ಕರುಣಾನಿಧಿಗೂ ಬಹಳ ಕನೆಕ್ಷನ್ ಇದೆ. ವೀರಪ್ಪನ್ ಫೋರ್ಸ್ ಕಡಿಮೆ ಆಗುವುದಕ್ಕೆ ಹಿಂದಿನ ಸರ್ಕಾರ ಕಾರಣವಾಗಿದೆ. ಈಗ ವೀರಪ್ಪನ್ ಫೋರ್ಸ್ ಜಾಸ್ತಿಯಾಗಿ ಪ್ರವರ್ಧಮಾನಕ್ಕೆ ಬರುವುದಕ್ಕೆ ಕಾರಣ ಶ್ರೀ ಕರುಣಾನಿಧಿಯವರೇ ಆಗಿದ್ದಾರೆ. ಇಂಟರ್‌ನ್ಯಾಷನಲ್ ಕೊಲೆಗಾರನಾದ ವೀರಪ್ಪನ್‌ಗೆ ಸಪೋರ್ಟ್ ಮಾಡಿದ ಸರ್ಕಾರ ತಮಿಳುನಾಡು ಸರ್ಕಾರವಾಗಿದೆ. ಆದ್ದರಿಂದ ಕರುಣಾನಿಧಿ ಸರ್ಕಾರದ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರ ಮುಂದೆ ಬರಬೇಕು. ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ಜನರು ವೀರಪ್ಪನ್‌ನ್ನು ಶೂಟ್ ಮಾಡಬೇಕೆಂದು ಕೇಳಿದ್ದಾರೆ ಇದನ್ನು ನಮ್ಮ ಪಕ್ಷವಾಗಿ ಕೇಳಿದ್ದು ಅಲ್ಲ. ವೀರಪ್ಪನ್ ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕೊಡುವುದು ಬೇಡ. ನಮ್ಮ ಸರ್ಕಾರ ಸೀರಿಯಸ್ ಆಕ್ಷನ್ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ಕಳೆದ ಎರಡು ಮೂರು ದಿನಗಳಿಂದ ಈ ವಿಚಾರದ ಬಗ್ಗೆ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಾನು ಹೆಚ್ಚಿಗೆ ಸದನದ ಸಮಯವನ್ನು ತೆಗೆದುಕೊಂಡು ಬೇರೆ ಸದಸ್ಯರಿಗೆ ತೊಂದರೆ ಕೊಡಲಿಕ್ಕೆ ಬಯಸುವುದಿಲ್ಲ. ಆದರೆ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು ಇಂಥ ಪ್ರಕರಣಗಳು ಪುನ: ಮರುಕಳಿಸಬಾರದು ಎನ್ನುವ ದೃಷ್ಟಿಯಿಂದ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡತಕ್ಕಂಥದ್ದು ಸೂಕ್ತ ಎನ್ನುವ ದೃಷ್ಟಿಯಿಂದಾಗಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪಿಸಬೇಕೆಂದು ಬಯಸಿದ್ದೇನೆ; ಮತ್ತು ತಾವು ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ತುಂಬಾ ಧನ್ಯವಾದಗಳು. ಇಲ್ಲಿ ಡಾ: ರಾಜ್‌ಕುಮಾರ್ ಅವರ ಅಪಹರಣದ ಮೊದಲು ಇದ್ದಂಥ ಪರಿಸ್ಥಿತಿ, ಅಪಹರಣದ ಸಮಯದಲ್ಲಿ ಆದಂಥ ಪರಿಸ್ಥಿತಿ ಮತ್ತು ಅವರ ಬಿಡುಗಡೆ ಆದ ನಂತರ ಆಗಿರತಕ್ಕಂಥ ವಿಚಾರಗಳನ್ನು ನಾನು ಕೆಲವು ನಿಮಿಷಗಳಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಡಾ: ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿದ ದಿವಸದಿಂದ, 108 ದಿವಸಗಳ ನಂತರ ಬಿಡುಗಡೆ ಆಗಿರತಕ್ಕಂಥ ವಿಚಾರಗಳ ಬಗ್ಗೆ ನಾವು ರಾಜಕೀಯವಾಗಿ, ಈ ಸದನವನ್ನು ಮತ್ತು ಅಪಹರಣವನ್ನು ಬಳಸಿಕೊಂಡು ಸ್ವಲ್ಪ ಲಾಭವನ್ನು ಗಳಿಸಬೇಕು ಎನ್ನತಕ್ಕಂಥದ್ದು ನಮ್ಮ ಉದ್ದೇಶವಾಗಿಲ್ಲ; ಅಥವಾ ಸರ್ಕಾರವನ್ನು ಪೇಚಿಗೆ ಸಿಲುಕಿಸಬೇಕೆಂಬುದಾಗಲಿ ನಮ್ಮ ಉದ್ದೇಶ ಅಲ್ಲ. ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಗುವುದಕ್ಕಿಂತ ಮುಂಚಿತವಾಗಿ, ಈ ವಿಷಯ ಬಹಳ ಸೂಕ್ಷ್ಮ ಇರುವುದರಿಂದ ಈ ಸದನದಲ್ಲಿ ಇದರ ಬಗ್ಗೆ ಚರ್ಚೆಯನ್ನು ಆ ನಂತರ ಮಾಡೋಣವೆಂದು ತಾವೇ ಹೇಳಿದ್ದೀರಿ. ಆದರೆ ಕೆಲವು ಗೌರವಾನ್ವಿತ ಸದಸ್ಯರುಗಳು ಈಗಲೇ ಚರ್ಚೆ ಆಗಬೇಕೆಂದು ಒತ್ತಾಯ ಮಾಡಿದ್ದರು. 1983ನೇ ಇಸವಿಯಿಂದ ನಾವು ಸಹ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದೇವೆ. ಇದಕ್ಕೆ ನಾವೇ ಕಾರಣಕರ್ತರೆಂದು ಕೆಲವು ಗೌರವಾನ್ವಿತ ಸದಸ್ಯರುಗಳು ಹೇಳಿದ್ದಾರೆ. ನಾನು ನಮ್ಮ ಪಕ್ಷದ ನಾಯಕನಾಗಿರುವುದರಿಂದ ಈ ಸಭೆಯಲ್ಲಿ ಕೆಲವುರ ವಿಚಾರಗಳನ್ನು ಹೇಳಲೇಬೇಕಾಗುತ್ತದೆ. ಕಳೆದ ಮೂರು ತಿಂಗಳಿಂದ ವಾಣಿಜ್ಯ ವ್ಯವಹಾರಗಳು ನಿಂತು ಹೋಗಿರತಕ್ಕಂಥದ್ದು ಸರ್ಕಾರಕ್ಕೆ ಗೊತ್ತಿರತಕ್ಕಂಥ ವಿಚಾರ. ಚೆಕ್ ಪೋಸ್ಟ್‌ನ್ನು ತೆರೆದಿರುವುದು ಮತ್ತು ಅಲ್ಲಿ ವಾಹನಗಳ ಸಂಚಾರದ ಬಗ್ಗೆ ಮತ್ತು ವಾಣಿಜ್ಯ ವ್ಯಾಪಾರದ ಬಗ್ಗೆ ಚಾಮರಾಜನಗರ ಜಿಲ್ಲೆಯ ಶಾಸಕರು ಈಗಾಗಲೇ ಎಲ್ಲವನ್ನು ಸಹಿತ ಹೇಳಿದ್ದಾರೆ. ಇವತ್ತಿನ ದಿವಸ ಆಡಳಿತ ಯಂತ್ರ ಒಂದು ಹಂತದಲ್ಲಿ ಸ್ಥಗಿತವಾಗಿರತಕ್ಕಂಥದ್ದು ನಿಜವಾದ ಸಂಗತಿಯಾಗಿದೆ. ಇದನ್ನು ಸಂವಿಧಾನಾತ್ಮಕವಾಗಿ ಮಾಡುವುದಕ್ಕೆ ಅಥವಾ ಹೇಳುವುದಕ್ಕೂ ಸಹ ಆಗುವುದಿಲ್ಲ. ಆದರೆ, ನಾನು ಈಗಾಗಲೇ ಹೇಳಿದಂತೆ ಡಾ: ರಾಜ್‌ಕುಮಾರ್‌ರವರ ಅಪಹರಣ ಆದ ನಂತರ ಸರ್ಕಾರದ ಆಡಳಿತ ಯಂತ್ರ ಸ್ಥಗಿತವಾಗಿರತಕ್ಕಂಥದ್ದು ನಿಜ. ಇವತ್ತಿನ ದಿವಸ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ವ್ಯವಸ್ಥೆಗಳು ಎಲ್ಲೋ ಒಂದು ಕಡೆ ವೈಫಲ್ಯತೆ ಹೊಂದಿರುವುದನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಇದು ಪ್ರಜಾತಂತ್ರ

ವ್ಯವಸ್ಥೆಯ ಕೈಗನ್ನಡಿಗೆ ಒಂದು ಕಪ್ಪು ಚುಕ್ಕೆ ಎಂದು ನನಗಾದರೂ ಅನ್ನಿಸುತ್ತದೆ. ಅಪಹರಣದಂಥ ಪ್ರಕರಣಗಳ ವಿಚಾರದಲ್ಲಿ ಒಂದು ನ್ಯಾಷನಲ್ ಕಾನ್‌ಸೆಪ್ಟ್ ಎನ್ನತಕ್ಕಂಥದ್ದು ಬರಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರದ ಸಚಿವರೊಬ್ಬರು ಹೇಳಿದ್ದಾರೆ. ಇದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಸ್ವಾಗತ ಮಾಡಿದ್ದಾರೆ. ಹಾಗೆಯೇ ನಾವೆಲ್ಲರೂ ಕೂಡ ಈ ವಿಚಾರವನ್ನು ಸ್ವಾಗತ ಮಾಡಿದ್ದೇವೆ. ಇವತ್ತಿನ ದಿವಸ ನಾವು ತಪ್ಪು ತಿಳುವಳಿಕೆಯಿಂದ ಅಥವಾ ಬೇರೆ ಉದ್ದೇಶಗಳನ್ನು ಇಟ್ಟುಕೊಂಡು ಭಾಷಣ ಮಾಡಬಹುದಷ್ಟೆ. ಆದರೆ ವಸ್ತುಸ್ಥಿತಿ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಜಮ್ಮು ಕಾಶ್ಮೀರದಲ್ಲಿ ಮತ್ತು ಅಸ್ಸಾಂ ರಾಜ್ಯದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಚಟುವಟಿಕೆಗಳು ಮತ್ತು ಆಂಧ್ರಪ್ರದೇಶದಲ್ಲಿ ನಡೆಯುತ್ತಿರುವ ನಕ್ಸಲೈಟ್ ಚಟುವಟಿಕೆಗಳನ್ನು ನಾವು ಐಸೋಲೇಟೆಡ್ ಕೇಸ್‌ಗಳೆಂದು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಹಾಗೆಯೇ ಬಾಂಬೆಯಲ್ಲಿ ನಡೆಯುತ್ತಿರುವ ಭೂಗತ ಚಟುವಟಿಕೆಗಳು ಮತ್ತು ಬಾಂಬ್ ಪ್ರಕರಣಗಳಲ್ಲಿ ಅನೇಕರ ಕೈವಾಡ ಇದೆ. ಅಂದರೆ, ಕರ್ನಾಟಕ ಮತ್ತು ದಕ್ಷಿಣ ಭಾರತದ ಅನೇಕ ರಾಜ್ಯಗಳಲ್ಲಿ ಈ ರೀತಿಯಾದ ಚಟುವಟಿಕೆಗಳು ನಡೆಯುತ್ತಿರುವಾಗ, ಇದರಲ್ಲಿ ವಿದೇಶಿ ಕೈವಾಡ ಇರುತ್ತದೆ ಎನ್ನತಕ್ಕಂಥದನ್ನು ನಾವೆಲ್ಲರೂ ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ನಾವು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಆಂತರಿಕವಾದಂಥ ಒಂದು ಸಮಸ್ಯೆಯನ್ನು ಎದುರುಸುತ್ತಿದ್ದೇವೆ ಎನ್ನತಕ್ಕಂಥ ಅರಿವನ್ನು ನಾವೆಲ್ಲರು ಸಹ ತಿಳಿದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಕರ್ನಾಟಕ ರಾಜ್ಯದ ಜನತೆಯನ್ನು ನಾವು ಅಭಿನಂದಿಸಬೇಕು. ಈ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. 1992ನೇ ಇಸವಿಯಲ್ಲಿ ಕಾವೇರಿ ಜನವಿವಾದದ ವಿಚಾರದಲ್ಲಿ ಅವತ್ತಿನ ವಿರೋಧಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದವರು ಒಮ್ಮತದಿಂದ ನಡೆದುಕೊಂಡಿದ್ದರೆ ಬಹುಶ: ನಮ್ಮ ರಾಜ್ಯದಲ್ಲಿ ಈ ರೀತಿಯಾದಂಥ ಗಲಭೆ ಆಗುತ್ತಿರಲಿಲ್ಲ. ಈ ಸಾರಿಯೂ ಸಹ ಅಂಥ ಗಲಭೆಗಳು ನಡೆದಿಲ್ಲ. ಇದನ್ನು ನಾವೆಲ್ಲರೂ ಸಹ ಮೆಚ್ಚತಕ್ಕಂಥ ವಿಷಯವಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕದ ಜನ ತಮ್ಮ ತಾಳ್ಮೆಯನ್ನು ತೋರಿಸಿದ್ದಾರೆ. ಇದೇ ಸಂದರ್ಭದಲ್ಲಿ ನಾನು ವಿರೋಧಪಕ್ಷದಲ್ಲಿ ಕುಳಿತುಕೊಂಡು, ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಸಂಯಮವನ್ನು ತೋರಿಸಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಈ ಮಾತನ್ನು ಹೇಳಿದ್ದಾರೆ. ಹಾಗೆಯೇ, ಕೆಲವು ಜನರು ಮತ್ತು ನಾವು ಅನೇಕ ಸಲ ಪ್ರವೋಕೇಟೀವ್ ಸ್ಟೇಟ್‌ಮೆಂಟ್ಸ್‌ನ್ನು ಸಹ ಮಾಡಿದ್ದೇವೆ. ಇವರನ್ನು ಸಹ ಪ್ರವೋಕೇಟ್ ಮಾಡುವುದಕ್ಕೆ ಬಹಳ ಪ್ರಯತ್ನ ಕೂಡ ಆಗಿದೆ. ಇನ್ನೊಂದು ಬಹಳ ಮುಖ್ಯವಾದಂಥ ವಿಚಾರ ಏನೆಂದರೆ, ದೆಹಲಿಯಲ್ಲಿ ಇವರ ಸರ್ಕಾರದ ಅಭದ್ರತೆಯ ಬಗ್ಗೆ ಕೆಲವು ಮಾತುಗಳು ಬಂತು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. That is Congress dispensation. ಇದು ತಪ್ಪು ಅಥವಾ ಸರಿ ಎಂದೂ ಸಹ ನಾನು ಹೇಳುವುದಿಲ್ಲ.

ದೆಹಲಿಯಲ್ಲಿ ಆಗತಕ್ಕಂಥ ರಾಜಕೀಯ ಚಟುವಟಿಕೆಗಳಲ್ಲಿ ಕಾಂಗ್ರೆಸ್ ಮುಖಂಡರು ನೀಡಿರತಕ್ಕಂಥ ಹೇಳಿಕೆ ರಾಜ್ಯ ಸರ್ಕಾರದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನತಕ್ಕಂಥದ್ದನ್ನು ತೋರಿಸುತ್ತದೆ. ಇಂಥ ಸಂಧರ್ಭದಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಸಂಯಮವನ್ನು ಕಳೆದುಕೊಳ್ಳದೆ ಒಳ್ಳೆಯ ವರ್ತನೆಯನ್ನು ಮಾಡಿದ್ದಾರೆ. ಇದು ನಿಜವಾಗಿಯೂ ಮೆಚ್ಚತಕ್ಕಂಥ ವಿಚಾರವಾಗಿದೆ. ಇದರ ಜೊತೆಗೆ ತಮಿಳು ಮತ್ತು ಕನ್ನಡಿಗರ ಮಧ್ಯೆ ಇರತಕ್ಕಂಥ ವಿಚಾರವಾಗಿದೆ. ಇದರ ಜೊತೆಗೆ ತಮಿಳು ಮತ್ತು ಕನ್ನಡಿಗರ ಮಧ್ಯೆ ಇರತಕ್ಕಂಥ ಕಂದರವನ್ನು ನಿವಾರಣೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಲಿಲ್ಲ. ಒಂದು ವೇಳೆ ಇವರೇನಾದರೂ ಬೇರೆ ಉದ್ದೇಶ ಇಟ್ಟುಕೊಂಡು ದಾರಿ ತಪ್ಪಿದರೆ ಬಹಳ ಕಷ್ಟವಾಗುತ್ತಿತ್ತು. ಹಾಗೆಯೇ ಕರ್ನಾಟಕ ರಾಜ್ಯ ಹತ್ತಿ ಉರಿಯತಕ್ಕಂಥ ಸಂದರ್ಭ ಖಂಡಿತ ಬರುತ್ತಿತ್ತು. ಆದರೆ ಈ ಒಂದು ಸಂದರ್ಭದಲ್ಲಿ ಒಬ್ಬ ನಾಯಕನಿಗೆ ಇರಬೇಕಾಗಿರತಕ್ಕಂಥ ಎಲ್ಲಾ ಗುಣಗಳನ್ನು ಮಾನ್ಯ ಮುಖ್ಯಮಂತ್ರಿಯವರು ತೋರಿಸಿದ್ದಾರೆ. ಇದನ್ನು ನಾವೆಲ್ಲರೂ ಸಹ ಮೆಚ್ಚುತ್ತೇವೆ. ಹಾಗೆಯೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿರೋಧ ಪಕ್ಷದಲ್ಲಿರತಕ್ಕಂಥ ನಾವೆಲ್ಲರೂ ಸಹ ಸಹಕಾರ ಕೊಟ್ಟಿದ್ದೇವೆ. ಕ್ಯಾರೇಟ್ ಅಂಡ್ ಸ್ಟಿಕ್ ಪಾಲಿಸಿ ಮಾಡಬೇಕೆಂದು ಹೇಳಿದ್ದೇವೆಯೇ ಹೊರತು, ಕ್ಯಾರೇಟ್ ಬೇಡವೆಂದು ನಾವು ಎಲ್ಲಿಯೂ ಸಹ ಹೇಳಲಿಲ್ಲ. ಸಂಧಾನ ಎನ್ನತಕ್ಕಂಥದ್ದು ಇಂಟರ್‌ನ್ಯಾಷನಲ್ ಥಿಂಗ್. ಯಾವುದೇ ರಾಷ್ಟ್ರದಲ್ಲಿ ಇಂಥ ಒಂದು ಅಪಹರಣ ನಡೆದಂಥ ಸಂದರ್ಭದಲ್ಲಿ ಸಂಧಾನದ ಮೂಲಕವೇ ಇಂಥ ಸಮಸ್ಯೆಗಳನ್ನು ಬಗೆಹರಿಸಿಕೊಂಡಿರತಕ್ಕಂಥದ್ದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಇದನ್ನು ನಾವು ತಿಳಿದುಕೊಂಡು ಸರ್ಕಾರಕ್ಕೆ ಸೀಮಿತವಾಗಿ ಸಹಕಾರವನ್ನು ಕೊಟ್ಟಿದ್ದೇವೆ. ಇವತ್ತಿನ ದಿವಸ ಡಾ: ರಾಜ್‌ಕುಮಾರ್‌ರವರ ಮೇಲೆ ಗೌರವ ಮತ್ತು ಅಭಿಮಾನ ಎಲ್ಲರಿಗೂ ಸಹ ಇದೆ. ಡಾ: ರಾಜ್‌ಕುಮಾರ್‌ರವರು ತಮ್ಮ ಕ್ಷೇತ್ರದಲ್ಲಿ ಗಳಿಸಿರತಕ್ಕಂಥ ಕೀರ್ತಿ ನಿಜವಾಗಿಯೂ ಕೂಡ ಹಿಮಾಲಯಕ್ಕಿಂತ ಎತ್ತರವಾದದು. ಇದಕ್ಕೆ ಯಾರೂ ಸಹಿತ ಕರುಬಬೇಕಾದ ಅವಶ್ಯಕತೆ ಇಲ್ಲ. ಇವತ್ತಿನ ದಿವಸ ಮೇರು ವ್ಯಕ್ತಿತ್ವವನ್ನು ಹೊಂದಿರುವ ಸಾಧನೆಯನ್ನು ಡಾ: ರಾಜ್‌ಕುಮಾರ್‌ರವರು ಮಾಡಿದ್ದಾರೆ. ಇಂಥ ಒಬ್ಬ ವ್ಯಕ್ತಿಯನ್ನು ಸುರಕ್ಷಿತವಾಗಿ ಬಿಡುಗಡೆ ಮಾಡಿಸುವದಕ್ಕೋಸ್ಕರ ನಾವು ಸಹಕಾರವನ್ನು ಕೊಟ್ಟಿದ್ದೇವೆ. ಇದರಲ್ಲಿ ಸರ್ಕಾರದ ವೈಫಲ್ಯತೆ ಕೂಡ ಇದೆ. ಇದನ್ನು ಹೇಗೆ ತಪ್ಪಿಸಬಹುದಾಗಿತ್ತು ಎಂಬುದನ್ನೂ ಸಹ ನಾವು ಇಲ್ಲಿ ಹೇಳಬೇಕಾಗುತ್ತದೆ. ಶ್ರೀನಿವಾಸಲು ಹಿಂದೆ ನಮ್ಮ ರಾಜ್ಯದಲ್ಲಿ ಡಿ.ಜಿ.ಪಿ. ಆಗಿ ಕಾರ್ಯ ನಿರ್ವಹಿಸಿದ್ದಾರೆ. ಶ್ರೀನಿವಾಸ್‌ರವರು ನಿವೃತ್ತರಾದಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಗಮನಿಸಿರಬಹುದು ಅದೇನೆಂದರೆ, ನಾನು ಒಬ್ಬ ಪೊಲೀಸ್ ಅಧಿಕಾರಿಯಾಗಿ ಲಾ ಅಂಡ್ ಆರ್ಡರ್ ಅನ್ನು ಎರಡು ಮೂರು ವರ್ಷಗಳ ಕಾಲ ಸಮರ್ಥವಾಗಿ ನಿಬಾಯಿಸಿದ್ದೇನೆ. ಆದರೆ ವೀರಪ್ಪನ್ ಅಂಥ ಕಾಡುಗಳ್ಳನನ್ನು ಹಿಡಿಯುವದಕ್ಕೆ ನನ್ನ ಕೈಯಲ್ಲಿ ಆಗಲಿಲ್ಲ. ಇದು ನನ್ನ ವೈಫಲ್ಯ

ಎನ್ನತಕ್ಕಂಥ ಮಾತನ್ನು ಆ ಸಂದರ್ಭದಲ್ಲಿ ಹೇಳಿದರು. ಹಾಗೆಯೇ ರಾಜ್ಯದಲ್ಲಿ ಇದು ಕಾನೂನು ಪರಿಸ್ಥಿತಿಯನ್ನು ಕೆಡಿಸತಕ್ಕಂಥ ವಿಚಾರ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಸೆಂಟ್ರಲ್ ಫೋರ್ಸ್‌ಸ್‌ನಲ್ಲಿ ಕಮ್ಯಾಂಡೋ ತರಬೇತಿ ಪಡೆದಿರತಕ್ಕಂಥ ಅರಕೇಶ್‌ರವರನ್ನು ನಮ್ಮ ರಾಜ್ಯದ ಡಿ.ಜಿ.ಪಿ.ಯವರು ಪತ್ರ ಬರೆದು ನಮ್ಮ ರಾಜ್ಯಕ್ಕೆ ಬರಬೇಕೆಂದು ಕೇಳಿಕೊಂಡಿದ್ದರು. ಡಿ.ಜಿ.ಪಿ.ಯವರ ಕರೆಯ ಮೇಲೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಅರಕೇಶ್‌ರವರು ಇಲ್ಲಿ ಬಂದಿದ್ದರು. He has given a note. It is no a report. ಆ ಸಂದರ್ಭದಲ್ಲಿ ಅವರು ನೀಡಿದ ಒಂದು ವರದಿಯಲ್ಲಿ ಏನು ಹೇಳಿದ್ದಾರೆ ಎಂದರೆ, ಡಾ: ರಾಜ್‌ಕುಮಾರ್ ಮತ್ತು ಕೆಲವು ಶಾಸಕರು ಹಾಗೂ ಮಾಜಿ ಶಾಸಕರನ್ನು ಅಪಹರಣ ಮಾಡಬಹುದು, ಅದ್ದರಿಂದ ತಾವೆಲ್ಲರೂ ಎಚ್ಚರದಿಂದ ಇರಬೇಕು ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಸರ್ಕಾರ ಯಾವುದೋ ಒಂದು ಹಂತದಲ್ಲಿ ಫೆಯಿಲ್ಯೂರ್ ಆಗಿದೆ ಎಂಬುದನ್ನು ನಾವು ವಿಶ್ಲೇಷಣೆ ಮಾಡಬೇಕಾಗಿದೆ. ನನಗೆ ಗೊತ್ತಿರುವ ಹಾಗೆ ನಮ್ಮ ಸರ್ಕಾರದ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಕ್ವಯಟ್ ಕಾಂಪಿಟೆಂಟ್. ಇವತ್ತಿನ ದಿವಸ ವೀರಪ್ಪನ್ ಎಲ್ಲಿ ಇದ್ದಾನೆ ಎನ್ನತಕ್ಕಂಥ ಮಾಹಿತಿಯನ್ನು ಕೊಡುವುದಕ್ಕೆ ಆಗದೇ ಇರಬಹುದು. ಆದರೆ ವೀರಪ್ಪನ್‌ನಿಂದ ಡಾ: ರಾಜ್‌ಕುಮಾರ್‌ರವರಿಗೆ ಮತ್ತು ಇತರರಿಗೆ ಅಪಾಯ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಡಾ: ರಾಜ್‌ಕುಮಾರ್‌ರವರಿಗೆ ೧೯೯೯ನೇ ಇಸವಿಯಲ್ಲಿ ಇಂಟಲಿಜೆನ್ನಿ ಡಿಪಾರ್ಟ್‌ಮೆಂಟ್‌ರವರು ಪತ್ರ ಬರೆದು ತಿಳಿಸಿದ್ದಾರೆ; after you became the Chief Minister. We are entitled to know about it. ಎಂ.ಎಂ. ಹಿಲ್ಸ್‌ಗೆ ತಾವೇನಾದರೂ ಹೋಗಿದ್ದೀರಾ? ಹಾಗೆಯೇ ತಾವು ಮುಖ್ಯಮಂತ್ರಿ ಆದಮೇಲೆ ಎಸ್.ಟಿ.ಎಫ್. ಕಾರ್ಯಾಚರಣೆ ಬಗ್ಗೆ ಪರಿಶೀಲನೆ ಮಾಡಿದ್ದೀರಾ? ಮತ್ತು ಆ ಸಂದರ್ಭದಲ್ಲಿ ಎಸ್.ಟಿ.ಎಫ್ ಕೆಲಸ ಮಾಡುತ್ತಿತ್ತೇ ಎಂಬುದನ್ನು ನಮಗೆ ತಾವು ತಿಳಿಸಬೇಕಾಗುತ್ತದೆ. ಕಂಬಾಲಪಲ್ಲಿಯಲ್ಲಿ ಕೆ.ಎಸ್.ಆರ್.ಪಿ. ವ್ಯಾನ್‌ನ್ನು ವಿಥ್‌ಡ್ರಾ ಮಾಡದೆ ಇದ್ದರೆ ಅಲ್ಲಿ ಖಂಡಿತವಾಗಿಯೂ ನರಮೇದ ಕೃತ್ಯ ನಡೆಯುತ್ತಿರಲಿಲ್ಲ. ವೀರಪ್ಪನ್‌ನಿಂದ ಲಾ ಅಂಡ್ ಆರ್ಡರ್ ಸಮಸ್ಯೆ ಕ್ರಿಯೇಟ್ ಆಗುತ್ತದೆ ಎನ್ನತಕ್ಕಂಥ ಪೊಟೆನ್‌ಶಿಯಲ್ ತಮಗೆ ಗೊತ್ತಿದ್ದರೆ, ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಯವರು ಬೇಡ ಗೃಹ ಸಚಿವರು ಅಥವಾ ಡಿಜಿಪಿಯವರು ಕಳೆದ ಒಂದು

*4.00* ಪಿ.ಎಂ.

ವರ್ಷದಲ್ಲಿ ಎಷ್ಟು ಸಾರಿ ಎಂಎಂ ಹಿಲ್ಸ್‌ಗೆ ಹೋಗಿದ್ದಾರೆಯ ಎಷ್ಟು ಸಾರಿ ಎಸ್‌ಟಿಎಫ್ ಚಟುವಟಿಕೆಗಳನ್ನು ರಿವ್ಯೂ ಮಾಡಿದ್ದಾರೆ? ಮಾನ್ಯ ಮಹದೇವ ಪ್ರಸಾದ್‌ರವರು ಈ ಬಗ್ಗೆ ಪ್ರಸ್ತಾಪಿಸಿದರು. ನಾನು ಜುಲೈನಲ್ಲಿ ಆಕಸ್ಮಿಕವಾಗಿ ಪೊನ್ನಾಚ್ಚಿಗೆ ಹೋಗಿದ್ದಾಗ ಅಲ್ಲಿಯವರು ನನಗೆ ಏನು ಹೇಳಿದರೆಂದರೆ, ನೋಡಿ ಸಾರ್, ಮೈನ್ಸ್ ಅಂಡ್ ಜಿಯಾಲಜಿಯವರು ಆದೇಶವನ್ನು ಮಾಡಿದ್ದಾರೆ, ಮಾನ್ಯ ವೀರಪ್ಪಮೊಯ್ಲಿರವರ ಕಾಲದಲ್ಲಿ ಇಲ್ಲಿ ಯಾರೂ

ಕ್ವಾರಿಯಿಂಗ್ ಮಾಡಬಾರದು ಎಂದು ಬ್ಯಾನ್ ಮಾಡಿದ್ದರು, ಅದನ್ನು ಆಗ ಲಿಫ್ಟ್ ಮಾಡಿದ್ದಾರೆ ಎಂದರು. ಅದನ್ನು ಏಕೆ ಲಿಫ್ಟ್ ಮಾಡಿದ್ದೀರಿ? ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮುಖ್ಯಮಂತ್ರಿಯಾಗುವುದಕ್ಕಿಂತ ಮುಂಚೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾಗ ಕೊಳ್ಳೇಗಾಲಕ್ಕೆ ಪಾಂಚಜನ್ಯ ರಥದಲ್ಲಿ ಹೋಗಿದ್ದರು. ಆಗ ಕೆಲವು ಅಸೋಸಿಯೇಷನ್‌ನವರು ಈಗ ಶಾಸಕರಾಗಿರುವ ನಮ್ಮ ಮಿತ್ರರು ತಮಗೆ ಒಂದು ಮೆಮೋರ್‍ಯಾಂಡಂ ಕೊಟ್ಟಾಗ ಇದನ್ನು ರಿವ್ಯೂ ಮಾಡುತ್ತೇನೆಂದು ನೀವು ಹೇಳಿದ್ದೀರಿ. ನೀವು ಗ್ರಾನೈಟ್ ಕ್ವಾರಿಯಿಂಗ್ ಅಲೋ ಮಾಡಿದಾಕ್ಷಣಕ್ಕೆ ವೀರಪ್ಪನ್ ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿದ ಎಂದು ನಾನು ಹೇಳುತ್ತಿಲ್ಲ. ಆದರೆ ನಾನು ಏನು ಹೇಳುತ್ತೇನೆಂದರೆ, ಈ ಸರ್ಕಾರಕ್ಕೆ ವೀರಪ್ಪನ್ ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಮಾಡುತ್ತಾನೆ ಎನ್ನತಕ್ಕಂಥ ಪೊಟೆನ್‌ಶಿಯಲ್ ಇತ್ತು, ಇದನ್ನು ತಾವು ಗಮನಿಸಿಲ್ಲ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ. ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಗಳಾದ ಎರಡು ತಿಂಗಳೊಳಗಾಗಿ ನಾವು ತಮಿಳುನಾಡಿಗೆ ಹೋದೆವು. We went to Tamil Nadu and we had discussion with Dr. Jayallalitha the then Chief Minister. ಕಾವೇರಿ ಜಲ ವಿವಾದದ ಬಗ್ಗೆ, ವೀರಪ್ಪನ್ ಕಾರ್ಯಾಚರಣೆಯ ಬಗ್ಗೆ, ಅಲ್ಲಿನ ಎಸ್.ಟಿ.ಎಫ್.ನ ಮುಖ್ಯಸ್ಥರಾಗಿದ್ದ ದೇವರಂರ ಜೊತೆಯಲ್ಲಿ ಏನೇನು ಮಾಡಬೇಕು ಎನ್ನುವುದರ ಬಗ್ಗೆ ನಾವು ಮಾತನಾಡಿದ್ದೆವು. ತಾವು ಮುಖ್ಯಮಂತ್ರಿಯಾದ ಮೇಲೆ ಅನೇಕ ಸಲ ಚೆನ್ನೈಗೆ ಹೋಗಿದ್ದೀರಿ. ಆದರೆ ಹೀಗೆ ಹೋದಂಥ ಸಂದರ್ಭದಲ್ಲಿ ನೆರೆ ರಾಜ್ಯಗಳಿಗಿರುವ ತೊಂದರೆಯನ್ನು ರಿವ್ಯೂ ಮಾಡಬೇಕು ಎಂದು ನಿಮಗೆ ಅನ್ನಿಸಿರಲಿಲ್ಲವೇ? ಈ ರೀತಿ ತೊಂದರೆಯಿದೆ ಇದರ ಬಗ್ಗೆ ಏನು ಮಾಡಬೇಕು ಎಂದು ನೀವು ರಿವ್ಯೂ ಮಾಡಬಹುದಾಗಿತ್ತು. 2000ದ ಜನವರಿಯಿಂದ ಡಿಜಿಪಿ ಯವರು ಎಂಎಂ ಹಿಲ್ಸ್‌ನಲ್ಲಿ ನಡೆಯತಕ್ಕಂಥ ಟಾಸ್ಕ್‌ಫೋರ್ಸ್‌ನ ಕೆಲಸವನ್ನು ರಿವ್ಯೂ ಮಾಡಿಲ್ಲ. ನಾನು ಅಲ್ಲಿಗೆ ಹೋಗಿದ್ದಾಗ ಅವರೇ ಬಂದು, ನಮಗೆ ಪೆಟ್ರೋಲ್‌ಗೆ ದುಡ್ಡು ಇಲ್ಲ, ಸರಿಯಾಗಿ ಊಟಕ್ಕೆ ಇನ್ನೂ ದುಡ್ಡು ರಿಲೀಸ್ ಆಗಿಲ್ಲ, ಸಂಬಳ ಮಾತ್ರ ಬರುತ್ತಿದೆಯೆಂದು ದೂರು ಹೇಳಿದರು. ಈ ತೊಂದರೆ ಪರಿಹಾರವಾಗಬೇಕು ಎನ್ನುವ ದೃಷ್ಟಿಯಿಂದ ನಾವು ಆಗ ಏನು ಮಾಡಿದ್ದೆವು ಎಂದರೆ ಅವರಿಗೆ ಬೇಸಿಕ್ ಸ್ಕ್ಯಾಲರಿಯ ಮೇಲೆ ಶೇಕಡ 30ರಷ್ಟು ಸಂಬಳ ಜಾಸ್ತಿ ಮಾಡಿದ್ದೇವು. ಇವತ್ತು ಬಹಳ ಜನ ಮಾತನಾಡುತ್ತಾರೆಂದರೆ, ರಾಜ್‌ಕುಮಾರ್‌ರವರು "ನನ್ನ ಹತ್ತಿರ ಇರುವುದು ಪಂಚೆ, ಷರಟು ಮಾತ್ರ ನನ್ನ ತೆಗೆದುಕೊಂಡು ಹೋಗಿ ಏನು ಮಾಡುತ್ತಾನೆ" ಎಂದು ಹೇಳಿದ್ದರು, ನಮಗೆ ಅವರು ಅಲ್ಲಿಗೆ ಹೋಗುವುದನ್ನು ತಿಳಿಸಲಿಲ್ಲವೆಂದು ಅವರ ಮೇಲೆ ಹೇಳತಕ್ಕಂಥ ಮಾತು ಸರಿಯಲ್ಲ. ಅವರಿಗೆ ಭದ್ರತೆ ಕೊಡುವುದು ಕರ್ನಾಟಕ ಸರ್ಕಾರದ ಜವಾಬ್ದಾರಿ. ಅನೇಕ ಕಡೆಗಳಲ್ಲಿ ಜನಾಕರ್ಷಣೆ ಇರುವ ಮುಖಂಡರು ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಸರ್ಕಾರ ಅವರಿಗೆ ರಕ್ಷಣೆ ಕೋಡುವುದಿಲ್ಲವೇನು? ಅವರಿಗೆಲ್ಲಾ ವಿಐಪಿ ಸೆಕ್ಯೂರಿಟಿ

ಇಲ್ಲವೇನು? ಗುಪ್ತಚಾರ ಇಲಾಖೆ ಇಲ್ಲವೇನು? ವೀರಪ್ಪನ್ ಚಟುವಟಿಕೆಗಳು ಕಳೆದ ಮೂರು ವರ್ಷಗಳಿಂದ ನಿಲ್ ಆಗಿವೆ ಹೀಗಾಗಿ ನಾವು ಏನು ಮಾಡಿಲ್ಲಿಲ್ಲ, ವೀರಪ್ಪನ್ನ ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿರುವುದು ತಮಿಳುನಾಡಿನಲ್ಲಿ, ಕರ್ನಾಟಕದ ಪೊಲೀಸಿಗೆ ಅಲ್ಲಿ ಪ್ರವೇಶ ಮಾಡಲು ಜ್ಯೂರಿಸ್‌ಡಿಕ್ಷನ್ ಇರಲಿಲ್ಲ ಎಂದು ಹೇಳುತ್ತಿರಾ? ಜ್ಯೂರಿಸ್‌ಡಿಕ್ಷನ್ ಇರಲಿಲ್ಲವೆನ್ನುವ ಕಾರಣಕ್ಕೆ 1990-1991ನೇ ಇಸವಿಯಲ್ಲಿ ಶ್ರೀ ಮಾನ್ ವಿರೇಂದ್ರ ಪಾಟೀಲ್‌ರವರು ಅಧ್ಯಕ್ಷರಾಗಿದ್ದಂಥ ಕಾಲದಲ್ಲಿ ಮೊದಲು ಟಾಸ್ಕ್‌ಫೋರ್ಸ್ ಮಾಡಿ ನಂತರ ಎಸ್.ಟಿ.ಎಫ್. ಎಂದು ಮಾಡಿದ್ದು. 1993ರವರೆಗೆ ನಮ್ಮ ಪೊಲೀಸ್‌ನವರು ತಮಿಳುನಾಡಿನ ಜ್ಯೂರಿಸ್‌ಡಿಕ್ಷನ್ ಒಳಗಡೆ ಹೋಗಿ ಆಪರೇಷನ್ ಮಾಡುವುದಕ್ಕಾಗುತ್ತಿರಲಿಲ್ಲ. 1993ರಲ್ಲಿ ಜಾಯಿಂಟ್ ಆಪರೇಷನ್ ಮಾಡಿ ಅದಕ್ಕೊಬ್ಬ ಕಮ್ಯಾಂಡೋ ಇನ್ ಚೀಫ್ ಎಂದು ಮಾಡಿರುವುದು. ನಾವು ಇಲ್ಲಿ ಪ್ರಾಮಾಣಿಕತೆಯಿಂದ ಮಾತನಾಡಬೇಕೆಂದರೆ, we have failed in catching Veerappan. People have got every right to ask you. ಏಕೆಂದರೆ, ಬಹಳ ಜನ ನನ್ನನ್ನು, ಏನ್ರೀ ನೀವು ಕೂಡ ಗೃಹ ಸಚಿವರು ಆಗಿದ್ದವರು ನೀವು ಏನು ಮಹಾ ಕಡಿದು ಕಟ್ಟೆ ಹಾಕಿದ್ದು, ನೀವು ಅವನನ್ನು ಹಿಡಿಯುಲಿಕ್ಕೆ ಆಗಲಿಲ್ಲ ಎಂದು ಹೇಳಿದರು. ಜನಗಳಿಗೆ ಕೇಳುವುದಕ್ಕೆ ಹಕ್ಕು ಇರುವುದರಿಂದ ಅವರು ಅದನ್ನು ಕೇಳುವುದು ಸರಿ. ಇಂಥ ಆಪರೇಷನ್‌ನಲ್ಲಿ Intellegence is the most important thing. ಸರ್ವೋಚ್ಚ ನ್ಯಾಯಾಲಯ ಹೇಳಿರತಕ್ಕಂಥದ್ದು, ಎನ್‌ಹೆಚ್‌ಆರ್‌ಸಿ ಹೇಳತಕ್ಕಂಥದ್ದು, ಇವೆಲ್ಲವೂ ಸಹಿತ 1994-95ರ ನಂತರ ಅಲ್ಲಿ ನಮಗೆ ಮಾಹಿತಿ ಕೊಡುವವರು ಯಾರೂ ಇರಲಿಲ್ಲ. ಏಕೆಂದರೆ, because of the atrocities, ಇದಕ್ಕೆ ಏನು ಕಾರಣ ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ We got antagonised with the people. ಇದರಿಂದಾಗಿ ಅವನು ಎಲ್ಲಿದ್ದಾನೆ ಎನ್ನತಕ್ಕಂಥ ಮಾಹಿತಿ ಬರುತ್ತಿರಲಿಲ್ಲ. ನನಗೆ ಗೊತ್ತಿರುವ ಹಾಗೆ 1993ರಲ್ಲಿ ವೀರಪ್ಪನ್ ಆಪರೇಷನ್ ಮಾಡುವಂಥ ಸಂದರ್ಭದಲ್ಲಿ ಹತ್ತಿಪ್ಪತ್ತು, ಮೂವತ್ತು ಜನ 200 ಅಡಿ 300 ಅಡಿ ದೂರದಲ್ಲಿ ಹೋಗುವುದನ್ನು ನಮ್ಮ ಅಧಿಕಾರಿಗಳೇ ನೋಡಿದ್ದಾರೆ. ಶೂಟ್ ಮಾಡಲಿಕ್ಕೆ ಆಗಿರಿಲಿಲ್ಲ ಏಕೆಂದರೆ ಸರಿಯಾದ ಅಸ್ತ್ರಗಳು ಅವರ ಹತ್ತಿರ ಇರಲಿಲ್ಲ. 1993ರಲ್ಲಿ there was another opportunity to almost nab him. ಮತ್ತೆ ನಮ್ಮೊಟ್ಟಿಗೆ ಇದ್ದವರು ಮಾಹಿತಿ ಕೊಡುವಂಥವರು ಮೋಸ ಮಾಡಿದರು, ಹೀಗಾಗಿ ಇಂಟಲಿಜೆನ್ಸ್ ವರ್ಕ್‌ನಿಂದ ಅವನನ್ನು ಹಿಡಿಯಬೇಕೆ ವಿನಹ ನಾವು ಫೈರಿಂಗ್ ಮಾಡಿ, ಹೆಲಿಕ್ಯಾಪ್ಟರ್, ಏರೋಪ್ಲೇನ್‌ಗಳನ್ನು ತೆಗೆದುಕೊಂಡು ಹೋಗಿ ಹಿಡಿಯುತ್ತೇವೆಂದು ಹೇಳತಕ್ಕಂಥದ್ದು ಆಗದೇ ಇರತಕ್ಕಂಥ ಕೆಲಸ. ಸುಮ್ಮನೆ ನಾವು ಮಾತನಾಡಬಹುದು, ಆದರೆ ಟೆರನ್‌ನನ್ನು ನೋಡಿದವರಿಗೆ ಮಾತ್ರ ಅದರ ಬಗ್ಗೆ ಅನುಭವ ಇರುತ್ತದೆ. 10 ಅಡಿ ಮಧ್ಯೆ ಏನಾಗುತ್ತದೆ ನಾವು ಊಹೆ ಮಾಡುವುದಕ್ಕಾಗುವುದಿಲ್ಲ ಅಂಥ ಕ್ಲಿಷ್ಟ ಪರಿಸ್ಥಿತಿ ಇದೆ. ಕರ್ನಾಟಕ ಮತ್ತು ತಮಿಳುನಾಡಿನ

ಇಬ್ಬರೂ ಮುಖ್ಯಮಂತ್ರಿಗಳ ಮಧ್ಯೆ ಯಾವತ್ತೂ ಸಹ ಒಪ್ಪಂಧ ಆಗಿರಲಿಲ್ಲ. ಪತ್ರಿಕೆಗಳಲ್ಲಿ ಹಾಗೂ ಇಲ್ಲಿ ಕೆಲವು ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ "ನಮ್ಮ ಸರ್ಕಾರ ಇದ್ದಾಗ ಎಲ್ಲಾ ಟಾಡಾ ಬಂಧಿಗಳನ್ನು ಬಿಟ್ಟು ಬಿಡುತ್ತೇವೆ ಎನ್ನುವ ಅಗ್ರಿಮೆಂಟ್‌ನ್ನು ಮಾಡಿದ್ದರು, ಶ್ರೀ ಜೆ.ಹೆಚ್. ಪಟೇಲ್‌ರವರು ಇದರ ಪ್ರಕಾರ ನಡೆದುಕೊಳ್ಳಲಿಲ್ಲ, ಅದಕ್ಕೋಸ್ಕರ ರಾಜ್ ಕುಮಾರ್‌ರವರನ್ನು ವೀರಪ್ಪನ್ ಬಿಡಲಿಲ್ಲ" ಎನ್ನುವ ಮಾತುಗಳನ್ನಾಡಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಆ ರೀತಿಯಲ್ಲಿ ನಾವು ಕಡತದಲ್ಲಿ ಬರೆದಿದ್ದರೆ ದಯಮಾಡಿ ಅದನ್ನು ಬಹಿರಂಗಪಡಿಸಿ, ಏಕೆಂದರೆ ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ಆಗಬಾರದು. ಏಕೆಂದರೆ, ನಾವು ಆಡಳಿತ ನಡೆಸಿರುವವರು ಮುಂದೆ ಆಡಳಿತ ನಡೆಸಬೇಕು ಎನ್ನುವ ಆಸೆ ಇಟ್ಟುಕೊಂಡಿರುವವರು, ವೈಯಕ್ತಿಕವಾಗಿ ಕೆಲವರು ಟೀಕೆ ಮಾಡಿದರು, ಆದರೆ ನನಗೆ ಗೊತ್ತಿರುವ ಹಾಗೆ ಆ ರೀತಿಯ ಯಾವುದೇ ಒಪ್ಪಂದವೂ ಸಹಿತ ಆಗಿರಲಿಲ್ಲ, ಒಪ್ಪಂದ ಆಗಿದ್ದು ಹಾಗೂ ಮಾತುಕತೆಯಲ್ಲಿ ಬಂದಿದ್ದು ಏನೆಂದರೆ, ವೀರಪ್ಪನ್ ಸರಂಡರ್ ಆದ ನಂತರ ಕೆಲವು ವಿಚಾರಗಳ ಬಗ್ಗೆ ಒಪ್ಪಿದ್ದು ನಿಜ. ನಾನು ಕ್ಯಾರೆಟ್ ಅಂಡ್ ಸ್ಟಿಕ್ ಪಾಲಿಸಿ ಬಗ್ಗೆ ಏಕೆ ಹೇಳಿದೆನೆಂದರೆ...

ಶ್ರೀ ಕೆ.ಹೆಚ್. ರಂಗನಾಥ್ :— ಸರಂಡರ್ ಆಗುವುದಕ್ಕೆ ಅವನೇನು ಹುಚ್ಚನೆ? ಸರಂಡರ್ ಆದ ಮೇಲೆ ಈ ಒಪ್ಪಂದ ಆಗುತ್ತದೆಂದು ಒಪ್ಪಿಕೊಳ್ಳುವುದಕ್ಕೆ ಅವನೇನು ಹುಚ್ಚನೆ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅವನು ಹುಚ್ಚ ಆಗಿದ್ದಕ್ಕೆ ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿದ್ದು.

ಶ್ರೀ ಕೆ.ಹೆಚ್. ರಂಗನಾಥ್ :— ಇದರ ಬಗ್ಗೆ ನನಗೇನೂ ಗೊತ್ತಿಲ್ಲ. ಅರಣ್ಯ ಅಲ್ಲಿದೆ ಅವನು ಅಲ್ಲಿ ಸೇರಿದ್ದಾನೆ. ಅವನು ಸರಂಡರ್ ಆದಮೇಲೆ ಇದನ್ನು ಮಾಡಬೇಕು ಎನ್ನುವ ಮಾತುಕತೆಯೂ ಆಗಿತ್ತು ಎಂದು ಹೇಳಿದಿರಿ, ಅವನು ಸರಂಡರ್ ಆಗುವುದಕ್ಕೆ ಅವನಿಗೇನು ಬೇಡಿಕೆ ಇಡದೇ ಅವನು ಅದನ್ನು ಕಂಸಿಡರ್ ಮಾಡದೆ ಆಟೋಮ್ಯಾಟಿಕ್ ಆಗಿ ಸರಂಡರ್ ಆಗುವುದಕ್ಕೆ ಅವನಿಗೇನು ಬುದ್ಧಿ ಇಲ್ಲವೇ? ಆ ರೀತಿಯ ಅಭಿಪ್ರಾಯ ಆ ರೀತಿಯ ಮಾತುಕತೆ ಮಾಡಲಿಕ್ಕೆ ಸಾಧ್ಯವೇ? ಇರಡೂ ಸರ್ಕಾರಗಳ ಇಬ್ಬರೂ ಮುಖ್ಯಮಂತ್ರಿಗಳೂ ಈ ರೀತಿ ಮಾತನಾಡುವುದಕ್ಕೆ ಸಾಧ್ಯವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾತನಾಡಿದ್ದು ನಿಜ.

Sri. K.H. Ranganath :— I would like to know also.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಸರಂಡರ್ ಆದ ಮೇಲೆ ಕೆಲವು ವಿಚಾರಗಳನ್ನು ಮಾಡುತ್ತೇನೆ ಎಂದು ಹೇಳಿದ್ದು ನಿಜ. ಅಗ್ರಿಮೆಂಟ್‌ನಲ್ಲಿ ಇದನ್ನು ಬಿಟ್ಟು ಬಾಕಿ

ಏನಾದರೂ ಇದ್ದರೆ ಬಹಿರಂಗಪಡಿಸಿ ಏಕೆಂದರೆ ಇದು ರಾಜ್ಯದ ಜನತೆಗೆ ಗೊತ್ತಾಗಲಿ. ನಾವು ಏಕೆ ಕ್ಯಾರೆಟ್ ಅಂಡಿ ಸ್ಟಿಕ್ ಎಂದು ಹೇಳಿದೆವು, ಮಾನ್ಯ ಬಚ್ಚೇಗೌಡರು ದೊಣ್ಣೆ ಎಂದು ಏಕೆ ಹೇಳಿದರೆಂದರೆ, we have sent message to Veerappan ನೀವು ಕೃಪಾಕರ ಸೇನಾನಿಯನ್ನು ಏಳು ದಿನಗಳಲ್ಲಿ ಬಿಡದೆ ಹೋದರೆ ಕಮ್ಯಾಂಡೋ ಕಾರ್ಯಾಚರಣೆ ಮಾಡುತ್ತೇವೆ ಎನ್ನುವ ಬೆದರಿಕೆ ಕೂಡ ನಾವು ಹಾಕಿದ್ದೇವೆ. There will be Commando operation ಬೇಕಾದರೆ ರೆಕಾರ್ಡ್‌ನಲ್ಲಿದೆ ತೆಗೆದು ನೋಡಿ. ಆದ್ದರಿಂದ ತಮಿಳುನಾಡಿನ ಮುಖ್ಯಮಂತ್ರಿಗಳು ಆ ರೀತಿ ಹೇಳಿಕೆ ಕೊಟ್ಟದ್ದು ಇದೆ. ಮಾನ್ಯ ಮುಖ್ಯಮಂತ್ರಿಯವರು ಅಕ್ಟೋಬರ್ 10ನೇ ತಾರೀಖಿನ ದಿವಸ ಮಾನ್ಯ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ನಾನು ಊಹೆ ಮಾಡಿಕೊಂಡ ಹಾಗೆ ಜುಲೈ 30ನೇ ತಾರೀಖು ಎತ್ತಿಕೊಂಡು ಹೋಗಿದ್ದು, ಆಗಸ್ಟ್ 1ನೇ ತಾರೀಖು ನೀವು ಪತ್ರ ಬರೆಯಬೇಕೆಂದು ನಾನೇನು ಹೇಳುವುದಿಲ್ಲ. I have appreciated your patience and tolerance and not getting provocated from the statement of the people. ಈ ಸಂದರ್ಭದಲ್ಲಿ ನೀವು ಬಹಳ ತಡವಾಗಿ ಆಲ್ಟರ್‌ನೇಟಿವ್ ಪ್ಲ್ಯಾನ್ ಮಾಡಿಕೊಂಡಿದ್ದೀರಿ ಎನ್ನತಕ್ಕಂಥದ್ದು ನಮ್ಮ ಅಭಿಪ್ರಾಯವಾಗಿದೆ. ಇದು ಏನೇ ಇರಲಿ, ಆದರೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ಬದಲಾವಣೆಯನ್ನು ನಾವು ಗಮನಿಸಿದೆವು. ಅದೇನೆಂದರೆ, ನಕ್ಕೀರನ್ ಗೋಪಾಲ್ ಸಂಧಾನಕ್ಕಾಗಿ ಕಾಡಿಗೆ ಹೋಗುವವರೆಗೂ ಮಾನ್ಯ ಮುಖ್ಯಮಂತ್ರಿಗಳು ಕರೆಕ್ಟ್ ಆಗಿ ಇದ್ದರು. ಸಂಧಾನಕ್ಕಾಗಿ ನಕ್ಕೀರನ್ ಗೋಪಾಲ್ ಹೋಗುವುದನ್ನು ನಿಲ್ಲಿಸಿ, ನೆಡುಮಾರನ್‌ರವರು ಸಂಧಾನಕ್ಕಾಗಿ ಹೋದ ತಕ್ಷಣವೇ ನಮ್ಮ ಮುಖ್ಯಮಂತ್ರಿಯವರು ಏನು ಹೇಳಿದರು ಎಂದರೆ, ನೆಡುಮಾರನ್‌ಗೂ ಮತ್ತು ನಮಗೂ ಸಂಬಂಧ ಇಲ್ಲ ಎನ್ನತಕ್ಕಂಥ ಇವರ ಅಭಿಪ್ರಾಯವನ್ನು ಹೇಳಿದ್ದಾರೆ. ಹಾಗೆಯೇ ಇದನ್ನೆಲ್ಲಾ ಗೃಹಮಂತ್ರಿಯವರೇ ನೋಡಿಕೊಳ್ಳುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಯವರು ನೀಡಿರತಕ್ಕಂಥ ಹೇಳಿಕೆಗಳೆಲ್ಲವನ್ನು ನಾವು ಗಮನಿಸಿದ್ದೇವೆ. ನಾವು ತಮಿಳುನಾಡಿನ ಸರ್ಕಾರದ ಮೇಲೆ ಪೂರ್ಣವಾಗಿ ಅವಲಂಭಿತರಾಗುವುದಕ್ಕೆ ಆಗುವುದಿಲ್ಲ. ಏಕೆಂದರೆ, 1999ರ ಆಗಸ್ಟ್‌ನಲ್ಲಿ ನಮ್ಮ ರಾಜ್ಯದ ಡಿ.ಜಿ.ಯವರು ತಮಿಳುನಾಡಿನ ಡಿ.ಜಿ.ಯವರಿಗೆ ಪತ್ರ ಬರೆದು, ಡಾ: ರಾಜ್‌ಕುಮಾರ್‌ರವರು ಆಗಾಗ ಗಾಜನೂರಿಗೆ ಬುರತ್ತಿರುತ್ತಾರೆ. ಆ ಸಂದರ್ಭದಲ್ಲಿ ತಾವು ರಕ್ಷಣೆ ಕೊಡಬೇಕೆಂದು ಹೇಳಿದ್ದಾರೆ. ಇದು ರೆಕಾರ್ಡ್‌ನಲ್ಲಿದೆ; ತಾವು ತೆಗೆದು ನೋಡಬಹುದು. ಇವತ್ತಿನ ದಿವಸ ತಮಿಳುನಾಡು ಸರ್ಕಾರ ರಕ್ಷಣೆ ಕೊಡದೇ ಇರುವುದರಿಂದ ಈ ಒಂದು ಘಟನೆ ನಡೆದಿರುವುದಕ್ಕೆ ಮುಖ್ಯ ಕಾರಣವಾಗಿದೆ. ಈ ವಿಷಯವನ್ನು ತಾವು ಎಲ್ಲಿಯೂ ಕೂಡ ಹೇಳಿಲ್ಲ. ಸಂಧಾನದ ಮೂಲಕ ಡಾ: ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದಿದ್ದೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದ್ದರಿಂದ, ಇದು ಸರ್ಕಾರದ ಸಂಧಾನದ ಮೂಲಕ ಆಯಿತೋ ಅಥವಾ ಡಾ: ರಾಜ್‌ಕುಮಾರ್ ಕುಟುಂಬ ವರ್ಗದವರ ಸಂಧಾನದ ಮೂಲಕ

ಅಥವಾ ಅವರ ಹಿತೈಷಿಗಳ ಸಂಧಾನದ ಮೂಲಕ ಡಾ: ರಾಜ್ ಕುಮಾರ್‌ರವರ ಬಿಡುಗಡೆ ಆಯಿತೇ ಎಂಬುದನ್ನು ತಾವು ರಾಜ್ಯದ ಜನತೆಗೆ ತಿಳಿಸಬೇಕಾಗುತ್ತದೆ. ಇದು ಖಂಡಿತವಾಗಿಯೂ ಕೂಡ ಆವಶ್ಯಕ ಇದೆ. "ಹೊಳೆ ದಾಟಿದ ಮೇಲೆ ಅಂಬಿಗಾ ಮಿಂಡ" ಎನ್ನತಕ್ಕಂಥ ಗಾದೆ ಇದೆ. ಈ ರೀತಿಯಾಗಿ ನೀವು ಎಲ್ಲರ ಸಹಕಾರವನ್ನು ಪಡೆದು, ಇವತ್ತಿನ ದಿವಸ ಭಾನು ಸರಿಯಿಲ್ಲ, ಸುಕುಮಾರ್ ಮತ್ತು ನೆಡುಮಾರನ್ ಸರಿಯಿಲ್ಲ, ಹೀಗೆ ಅವರು ಸರಿಯಿಲ್ಲ ಇವರು ಸರಿಯಿಲ್ಲ ಎಂದು ಹೇಳತಕ್ಕಂಥದ್ದು ಎಷ್ಟು ಸೂಕ್ತ ಎನ್ನತಕ್ಕಂಥದನ್ನು ತಾವು ವಿಚಾರ ಮಾಡಬೇಕು. ನಮ್ಮ ದೇಶದ ರಕ್ಷಣಾ ಸಚಿವರಾಗಿರತಕ್ಕಂಥ ಶ್ರೀ ಮಾನ್ ಜಾರ್ಜ್ ಫೆರ್ನಾಂಡಿಸ್‌ರವರು ನೆಡುಮಾರನ್‌ರವರನ್ನು ಭೇಟಿ ಮಾಡಿ ಡಾ: ರಾಜ್‌ಕುಮಾರ್‌ರವರನ್ನು ನೀವು ಹೋಗಿ ಬಿಡಿಸಿಕೊಂಡು ಬರಬೇಕೆಂದು ಹೇಳಿದರು. ಇದು ಆದ ನಂತರ, ನಿಮಗೆ ಸಹಕಾರ ಕೊಡುವುದಕ್ಕೋಸ್ಕರ ಆಲ್ಟರ್‌ನೇಟಿವ್ ಪ್ಲ್ಯಾನ್ ಅನ್ನು ಮಾನ್ಯ ಗೃಹ ಸಚಿವರು ಮಾಡಿದ್ದರು. They wanted to help you and you also sought their help. ನಮ್ಮ ದೇಶದಲ್ಲಿ ಮಹಾತ್ಮ ಗಾಂಧಿಯನ್ನು ಕೊಂದಂಥ ಘೋಡ್ಸೆಗೂ ಸಹ ಹಿಂಬಾಲಕರು ಇದ್ದಾರೆ ಎಂಬುದನ್ನು ನಾವೆಲ್ಲರೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತಿನ ದಿವಸ ಘೋಡ್ಸೆ ಕೆಲವರಿಗೆ ಹೀರೋ ಆಗಿದ್ದಾನೆ. Whatever may be our opinion. ಆದ್ದರಿಂದಾಗಿ ನೆಡುಮಾರನ್ ಬಗ್ಗೆ ಟೀಕೆ ಮಾಡಿ ಮಾತನಾಡತಕ್ಕಂಥದು ಸರಿಯಲ್ಲ.

ಶ್ರೀ ಕೆ.ಎಚ್. ರಂಗನಾಥ್ :— ಟೀಕೆ ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ, Should you not be fair? ಇವತ್ತಿನ ದಿವಸ ನೆಡುಮಾರನ್ ಬಗ್ಗೆ ಸರ್ಕಾರವಾಗಲಿ ಅಥವಾ ಮುಖ್ಯಮಂತ್ರಿಯವರು ನೀಡಿರತಕ್ಕಂಥ ಹೇಳಿಕೆಯಲ್ಲಿ ಕೂಡ ಟೀಕೆ ಮಾಡಿಲ್ಲ. ಹಾಗೆಯೇ ಪತ್ರಿಕೆಯವರು ಸಹ ಎಲ್ಲಿ ಟೀಕೆ ಮಾಡಿದ್ದಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ:— ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಬಗ್ಗೆ ಮಾತ್ರ ವಿಶ್ಲೇಷಣೆ ಮಾಡುತ್ತಿಲ್ಲ. ನಮ್ಮ ಸದಸ್ಯರು ಮಾತನಾಡತಕ್ಕಂಥದ್ದು ಮತ್ತು ಪತ್ರಿಕೆಯಲ್ಲಿ ಬರತಕ್ಕಂಥದ್ದನ್ನು ನೋಡಿಕೊಂಡು, ಇಲ್ಲಿ ನನ್ನ ಅನುಭವದಿಂದ ನಾನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. I would like to use this House and I would like to thank Mr. Nedumaran for having brought Dr. Rajkumar safe. I am gpoing to record. ಇದರಲ್ಲಿ ತಪ್ಪೇನು ಇದೆ? ಇವತ್ತಿನ ದಿವಸ ನೆಡುಮಾರನ್ ಸಂಧಾನಕ್ಕಾಗಿ ಹೋಗದೇ ಇದ್ದರೆ ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿರಲಿಲ್ಲ. ಸರ್ಕಾರದಿಂದ ಸಂಧಾನದ ಮೂಲಕ ಡಾ: ರಾಜ್‌ಕುಮಾರ್‌ರವರ ಬಿಡುಗಡೆ ಆಯಿತೆಂದು ನೀವಾಗಲಿ ಅಥವಾ ನಾವಾಗಲಿ, ಜನರಾಗಲಿ ಇದನ್ನು ಒಪ್ಪುವುದಿಲ್ಲ. We should be grateful to Mr. Nedumaran, whatever may be his

idealogy. We don't agree with that idealogy; we don't subscribe to that idealogy. There are so many people who sympathise with LTTE cause. ಈಗ ಷಣ್ಮುಗ ಸುಂದರಂ ಎನ್ನತಕ್ಕಂಥವರು ಲಾರಿ ಮಾಲೀಕರ ಸಂಘದ ಅಧ್ಯಕ್ಷರಾಗಿದ್ದಾರೆ. ಇವರು ಎರಡು ಲಾರಿಯನ್ನು ಇಟ್ಟುಕೊಂಡಿದ್ದಾರೆ. ಈ ಸದನದಲ್ಲಿರತಕ್ಕಂಥ ಅನೇಕ ಮಾನ್ಯ ಸದಸ್ಯರಿಗೆ ಅವರು ಪರಿಚಯ ಇದ್ದಾರೆ.. Every Tamilian of Bangalore was afraid of his life. As President of Tamil Sangam, he thought it was his duty to protect the lives and properties of Tamil people, with 1992 experience. ಎಲ್ಲವನ್ನು ಸರ್ಕಾರದಿಂದಲೇ ಕೊಡಬೇಕು ಎನ್ನತಕ್ಕಂಥದದ್ದು ಏನು ಇಲ್ಲ. ಆ ಸಂದರ್ಭದಲ್ಲಿ ಷಣ್ಮುಗ ಸುಂದರಂ ಅವರು ಸಹಾಯ ಮಾಡತಕ್ಕಂಥ ಕೆಲಸ ಮಾಡಿದ್ದಾರೆ. ಇದರಲ್ಲಿ ಏನು ತಪ್ಪು ಇದೆ ಎಂಬುದು ನನಗಂತೂ ಇದುವರೆಗೂ ಅರ್ಥವಾಗುತ್ತಿಲ್ಲ. ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿಯ ಸೇವೆಯನ್ನು ಸಭಾನಾಯಕರು ಮೆಚ್ಚುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಹಾಗೆಯೇ ಇವತ್ತಿನ ದಿವಸ ರಾಮಲಿಂಗಂ ಅವರ ಹೆಸರನ್ನು ಆ ವಿಷಯದಲ್ಲಿ ನಾವು ತೆಗೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಅದೇನೆಂದರೆ ಹುಬ್ಬಳಿ ಈದ್ಗಾ ಮೈದಾನದ ಸಮಸ್ಯೆಯನ್ನು ನಮ್ಮ ಸ್ನೇಹಿತರಾದ ಶ್ರೀಮಾನ್ ದೇಶಪಾಂಡೆಯವರು ಸಹ ನಮ್ಮ ಜೊತೆ ಇದ್ದರು, ಆ ಸಂದರ್ಭದಲ್ಲಿ ನಾವು ಮತ್ತು ನೀವು ಹಾಗೂ ಶ್ರೀಮಾನ್ ಹಿಂಡಸಗೇರಿ ಮತ್ತು ಶ್ರೀಮಾನ್ ಎಸ್.ಎಸ್. ಪಾಟೀಲ್‌ರವರೆಲ್ಲರೂ ಕೂಡ ಒಟ್ಟಿಗೆ ಕೂಡಿಕೊಂಡು ಆ ಒಂದು ಸಮಸ್ಯೆಯನ್ನು ಬಗೆಹರಿಸಿದೆವು. Can we question the commitment of Mr. Ramalingam? Can we question about his integrity about Hubli - Maidan issue? ಮಾನ್ಯ ಮುಖ್ಯಮಂತ್ರಿಯವರು ಆಗಿನ ರೆಕಾರ್ಡ್ಸ್‌ಗಳನ್ನು ತೆಗೆದು ನೋಡಬಹುದು. ಆ ಸಂದರ್ಭದಲ್ಲಿ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಸದಸ್ಯರಾಗಿದ್ದರು ಮತ್ತು ಈ ಸದನದಲ್ಲಿ ಅಶೋಕ್ ಕಾಟ್ವೆಯವರು ಸಹ ಇದ್ದರು. ಆಗ ಎಲ್ಲರೂ ಸಹಕಾರ ಕೊಟ್ಟಿದ್ದರಿಂದ ಆ ಸಮಸ್ಯೆಯನ್ನು ನಿವಾರಣೆ ಮಾಡಿದೆವು. ಆ ಸಂದರ್ಭದಲ್ಲಿ ಡಿ.ಜಿ.ಪಿ. ಆಗಿದ್ದಂಥ ರಾಮಲಿಂಗಂರವರು ಸಹ ಇದ್ದರು. The issue was only this much Idgah Maidan was a disputed land. ಅಲ್ಲಿ ರಾಷ್ಟ್ರಧ್ವಜವನ್ನು ಹಾಕಿದರೆ ಎಲ್ಲ ಸಮಸ್ಯೆಗಳು ಸರಿ ಹೋಗುತ್ತದೆ ಎನ್ನತಕ್ಕಂಥದ್ದು ಎಲ್ಲರ ಭಾವನೆಯಾಗಿತ್ತು. ಈ ಸಮಸ್ಯೆ ಸುಮಾರು 30 ವರ್ಷಗಳಿಂದ ಇತ್ತು. It is Ramalingam who resolved this problem. The credit should go to Mr. Ramalingam. he has got unblemished career. ರಾಮಲಿಂಗಂರವರು ಕೇಂದ್ರ ಸರ್ಕಾರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಜನತಾದಳ ಸರ್ಕಾರ ಇದ್ದಾಗ ಮತ್ತು ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೂಡ ಇಲ್ಲಿ ಕೆಲಸ ಮಾಡಿದ್ದಾರೆ. ಹಾಗೆಯೇ ಸನ್ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿ

ಆಗಿದ್ದಂಥ ಸಂದರ್ಭದಲ್ಲಿ ಸುಮಾರು 10 ವರ್ಷಗಳ ಕಾಲ ಇಂಟೆಲಿಜೆನ್ಸ್ ಡಿ.ಜಿ.ಪಿ. ಆಗಿ ಕಾರ್ಯ ನಿರ್ವಹಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 40 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಆದ್ದರಿಂದ, ಇಂಥ ಒಬ್ಬ ಪೊಲೀಸ್ ಅಧಿಕಾರಿಯನ್ನು ಟೀಕೆ ಮಾಡತಕ್ಕಂಥದ್ದು ಸೂಕ್ತವಲ್ಲ. ಹಾಗೆಯೇ ಇನ್ನು ಶ್ರೀನಿವಾಸಲು ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಹಿಂದು ಮುಸ್ಲಿಮ್ ಸಮಸ್ಯೆಗಳು ಕರ್ನಾಟಕ ರಾಜ್ಯದಲ್ಲಿ ಕಡಿಮೆ ಆಗಿದ್ದರೆ The credit should go to Mr. Ramalingam and also to Mr. Srinivasulu. ಹಿಂದು ಮತ್ತು ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಮುಖಂಡರನ್ನು ಕರೆಸಿ ಮಾತನಾಡಿ ನಮ್ಮ ರಾಜ್ಯದಲ್ಲಿ ಸೌಹಾರ್ದತೆಯನ್ನು ಕಾಪಾಡುವುದಕ್ಕೋಸ್ಕರ ಶ್ರೀನಿವಾಸಲು ಬಹಳ ಪ್ರಯತ್ನ ಪಟ್ಟಿದ್ದಾರೆ. ಹಾಗೆಯೇ ಕೋಮಿ ಎನ್ನತಕ್ಕಂಥವರು ರೈನ್‌ಬೋ ಫೋರಂ ಅನ್ನು ಸಹ ಮಾಡಿದ್ದಾರೆ. They are all patriots. If they are anti-social elements, if they are cirminals, why all these days action was not taken? ಈಗ ಶ್ರೀನಿವಾಸಲು ಮತ್ತು ರಾಮಲಿಂಗಂ ಇಬ್ಬರು ಅಲ್ಲಿಗೆ ಏಕೆ ಹೋಗಿದ್ದೀರಿ? ಇದರಿಂದ ನೀವು ತಪ್ಪು ಮಾಡಿದ್ದೀರಿ ಎಂದು ಅವರ ಮೇಲೆ ಏನಾದರು ಕೇಸ್ ಇದ್ದರೆ, ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ, ಆದರೆ, ಅವರ ಮೇಲೆ ಯಾವುದೇ ರೀತಿಯ ಕೇಸ್‌ಗಳು ಇಲ್ಲ. ಹಿಂದು ಮುಸ್ಲಿಂ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಕಷ್ಟವಾದದ್ದು ಎಂದು ನನ್ನ ಅಭಿಪ್ರಾಯ. ಇವತ್ತಿನ ದಿವಸ ಹಿಂದು ಮುಸ್ಲಿಂ ಸಮಸ್ಯೆಯನ್ನು ಬಹಳ ಸುಲಭವಾಗಿ ಹಬ್ಬಿಸಬಹುದು. ಆದರೆ ಇದನ್ನು ಬಹಳ ತಾಳ್ಮೆಯಿಂದ ಬಗೆಹರಿಸಬೇಕಾದರೆ ಎಷ್ಟೊಂದು ಸಮಯ ಬೇಕಾಗುತ್ತದೆ ಎನ್ನತಕ್ಕಂಥದನ್ನು ನಾವೆಲ್ಲರೂ ಸಹ ಗಮನಿಸಬೇಕಾಗುತ್ತದೆ. After the incident, as a Chief Minister, it is your duty to appreciate the action of these people, whatever it is Ramalingam or whether it is that lady. ಡಾ: ರಾಜ್‌ಕುಮಾರ್‌ರವರು ಬಿಡುಗಡೆ ಆದಮೇಲೆ ನಾವು ಅವರನ್ನು ಭೇಟಿ ಮಾಡಿದೆವು. ಆ ಸಂದರ್ಭದಲ್ಲಿ ಅನೇಕ ಕಾರಣಗಳಿಂದ ಕೆಲವು ವಿಚಾರಗಳನ್ನು ಅವರು ಮಾತನಾಡುವುದಕ್ಕೆ ಬಯಸಲಿಲ್ಲ. From his point of view, he is right. He is no prepared to discuss. Alright, we will agree. ಸ್ಟಿಕ್ ಅನ್ನು ತೋರಿಸುವುದಕ್ಕೆ ಸರ್ಕಾರ ಒಂದೂವರೆ ತಿಂಗಳು ತೆಗೆದುಕೊಂಡಿದೆ. ಈ ಒಂದು ಹಂತದಲ್ಲಿಯೆ ಸರ್ಕಾರ ಎಡವಿದೆ. ಇನ್ನು 7 ದಿವಸದಲ್ಲಿ ಕೃಪಾಕರ ಸೇನಾನಿಯವರನ್ನು ಬಿಡದೆ ಇದ್ದರೆ ನಿನಗೆ ಏನು ಮಾಡುತ್ತೇನೆ ನೋಡು ಎಂದು ಸನ್ಮಾನ್ಯ ಜೆ.ಎಚ್.ಪಟೇಲ್‌ರವರು ವೀರಪ್ಪನ್‌ಗೆ ಎಚ್ಚರಿಕೆಯನ್ನು ಕೊಟ್ಟಿದ್ದರು. ಈ ರೀತಿಯಾಗಿ ನೀವು ಸಹ ವೀರಪ್ಪನ್‌ಗೆ ಹೇಳಬೇಕಾಗಿತ್ತು. Threat should have been given to him. There was reaction in panic. ನಮಗೊಂದು ಸಮಸ್ಯೆ ಬಂದಿದೆ, ಏನು ಮಾಡುವುದೆಂದು ತಾವೆಲ್ಲರೂ ಕೂಡ ದಿಗ್ಭ್ರಮೆ ಆಗಿ ಬಿಟ್ಟಿದ್ದೀರಿ. ಇನ್ನೊಂದು ಹಂತದಲ್ಲಿ

ಸರ್ಕಾರ ಎಲ್ಲಿ ಫೆಯಿಲ್ಯೂರ್ ಆಗಿದೆ ಎಂದರೆ, You depended on only one emissary for nearly two months. ನಕ್ಕೀರನ್ ಗೋಪಾಲ್ ಒಬ್ಬರನ್ನು ಬಿಟ್ಟು ಬೇರೆ ಯಾರೂ ಸಹಿತ ಸಂಧಾನಕ್ಕಾಗಿ ಹೋಗುತ್ತಿರಲಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಹಾಗೆಯೇ ಸಂಧಾನಕ್ಕಾಗಿ ನೆಡುಮಾರನ್‌ರವರನ್ನು ಏಕೆ ಕಳುಹಿಸಿದ್ದೀರಿ ಎನ್ನತಕ್ಕಂಥದನ್ನು ನಾನು ಕೇಳುವುದಿಲ್ಲ. ಏಕೆಂದರೆ The choice was that of Veerappan, it was not your choice or our choice. ವೀರಪ್ಪನ್ ಸಂಧಾನಕ್ಕಾಗಿ ನಕ್ಕೀರನ್ ಗೋಪಾಲ್ ಬರಬೇಕು ಅಂದರೆ ನಕ್ಕೀರನ್ ಹೋಗಬೇಕಾಗಿತ್ತು ಅಥವಾ ನೆಡುಮಾರನ್ ಬರಬೇಕು ಎಂದು ಹೇಳಿದರೆ, ನೆಡುಮಾರನ್‌ರವರೆ ಸಂಧಾನಕ್ಕಾಗಿ ಹೋಗಬೇಕಾಗಿತ್ತು. ಈ ಒಂದು ದೃಷ್ಟಿಯಿಂದ ನಾವೆಲ್ಲರೂ ಸಿಕ್ಕಿಕೊಳ್ಳತಕ್ಕಂಥ ಪರಿಸ್ಥಿತಿ ಬಂತು. ಕರುಣಾನಿಧಿಯವರು ಪ್ರಾರಂಭದ ದಿನಗಳಲ್ಲಿ ಇದನ್ನು ಅವರು ಅಷ್ಟೊಂದು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ, ಬಹುಶ: ಅವರಿ ಸೀರಿಯಸ್ಸಾಗಿ ತೆಗೆದುಕೊಂಡಿದ್ದರೆ ಇನ್ನು ಬೇಗ ಈ ಸಮಸ್ಯೆ ಬಗೆಹರಿಯುತ್ತಿತ್ತೆಂದು ನಾನು ತಿಳಿದುಕೊಂಡಿರುತ್ತೇನೆ. ಇನ್ನು ಅನೇಕ ಜನಗಳ ಬಗ್ಗೆ, ಎಲ್‌ಟಿಟಿಇ ಕನೆಕ್ಷನ್ ಬಗ್ಗೆ, ಕೊಳತ್ತೂರು ಮನೆಯ ಬಗ್ಗೆ ಷಣ್ಮುಗಂ ಸುಂದರ್ ಬಗ್ಗೆ ಎಲ್ಲರ ಬಗ್ಗೆ ಟೀಕೆಗಳು ಆಗುತ್ತಿವೆ. If somebody is having some pro-LTTE idealogy, you cannot help it. ಏನು ಮಾಡುವುದಕ್ಕಾಗುತ್ತದೆ, ಏನು ಮಾಡುವುದಕ್ಕಾಗುವುದಿಲ್ಲ. ಆದರೆ ಅವರು ರಾಷ್ಟ್ರದ್ರೋಹಿ ಕೆಲಸಗಳಲ್ಲಿ, ರಾಷ್ಟ್ರ ವಿಭಜನೆಯ ಕೆಲಸದಲ್ಲಿ ಏನಾದರೂ ತೊಡಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಅದನ್ನು ನಾನು ಸಹಿತ ಒಪ್ಪುತ್ತೇನೆ. But we cannot be uncharitable to people like Srinivasulu, who has tried to give his life for the same of maintaining law and order in the State. He has 40 years of unblemished career. ಅವರನ್ನು ಟೀಕೆ ಮಾಡತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಒಂದು ವರ್ಷದಲ್ಲಿ ಎಸ್.ಟಿ.ಎಫ್‌ನ ಚಟುವಟಿಕೆಯ ಬಗ್ಗೆಗ ತಾವು ರಿವ್ಯೂ ಮಾಡಿದ್ದರೆ ತಮಗೂ ಕೂಡ ಇದು ಗೊತ್ತಾಗುತ್ತಿತ್ತು. ಇಷ್ಟು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳಿ ಈಗ ನಾವು ಏನು ಮಾಡಬೇಕು ಎನ್ನುವುದು ಬಹಳ ಮುಖ್ಯವಾದದ್ದು. ತಾವು ಸಾಂಗ್ಲಿಯಾನರವರ ನೇತೃತ್ವದಲ್ಲಿ ಶಂಕರ್ ಬಿದರಿ ಹಾಗೂ ಕೆಂಪಯ್ಯನವರನ್ನು ಸೇರಿಸಿ ಒಂದು ಎಸ್.ಟಿ.ಎಫ್. ಕಮಿಟಿಯನ್ನು ಮಾಡಿದ್ದೇವೆಂದು ಹೇಳಿರುತ್ತೀರಿ. ಶ್ರೀ ಕರುಣಾನಿಧಿಯವರನ್ನು ತಾವು ಏನು ಕೇಳಿರುತ್ತೀರಿ ಎನ್ನುವುದು ನಮಗೆ ಗೊತ್ತಿಲ್ಲ. ಕರುಣಾನಿಧಿಯವರು ಇದಕ್ಕೆ ಒಪ್ಪಿದ್ದಾರೆಯೇ? ಇದು ಜಾಯಿಂಟ್ ಎಸ್‌ಟಿಎಫ್ ಅಥವಾ ಬರೀ ನಮ್ಮ ಕರ್ನಾಟಕದ ಎಸ್‌ಟಿಎಫ್, ನೀವು ಕರುಣಾನಿಧಿಯವರ ಜೊತೆಯಲ್ಲಿ ಮಾತುಕತೆಯನ್ನು ಮಾಡಿದ್ದೀರಾ? ಏಕೆಂದರೆ ಶ್ರೀ ಕರುಣಾನಿಧಿಯವರ ಒಪ್ಪಿಗೆ ಇಲ್ಲದೆ, ನಾವು ಏನು ಮಾಡಿದರೂ ಕೂಡ ಉಪಯೋಗವಾಗುವುದಿಲ್ಲ. ನನಗೆ ತಿಳಿವಳಿಕೆ ಇರುವ

ಹಾಗೆ, ನೀವು ಒಂದು ಸಲ ಬಿಎಸ್‌ಎಫ್‌ದವರನ್ನು ಕರೆಸಿದ್ದೆವು. ಕೇಂದ್ರ ಸರ್ಕಾರದ ಗೃಹ ಮಂತ್ರಿಗಳಾಗಿದ್ದ ಶ್ರೀ ಶಂಕರ್‌ರಾವ್ ಚವಾಣ್‌ರವರನ್ನು ನಾನು ಆ ಸಂದರ್ಭದಲ್ಲಿ ಭೇಟಿ ಮಾಡಿದಾಗ 200 ಜನರನ್ನು ಕಳುಹಿಸಿಕೊಟ್ಟಿದ್ದರು. ಎರಡು ಬಿಎಸ್‌ಎಫ್ ಕಂಪನಿಗಳನ್ನು ಕಳುಹಿಸಿಕೊಟ್ಟು, ವಾಪಸ್ಸು ಕಳುಹಿಸಿಕೊಡಿ ಎಂದು ಮೂರು ತಿಂಗಳಿಗೊಂದು ಸಲ ಪತ್ರವನ್ನು ಕಳುಹಿಸುತ್ತಿದ್ದರು. ಅವರು ಬಂದು ಇಲ್ಲಿ ಏನು ಮಾಡುವುದಕ್ಕಾಗಲಿಲ್ಲ. - On records, it is in the file. ನನಗೆ ಗೊತ್ತಿರುವು ಹಾಗೆ ಎನ್‌ಎಸ್‌ಜಿ, ಬಿಎಸ್‌ಎಫ್, ಸಿಆರ್‌ಪಿ, ಐಟಿಬಿಎಫ್ ಅವರು ಯಾರೂ ಸಹಿತ ಗೆರಿಲ್ಲಾ ಆಕ್ಷನ್‌ದಲ್ಲಿ ನಾವು ತರಬೇತಿ ಪಡೆದಿದ್ದೇವೆ ಎಂದು ಅವರು ಎಲ್ಲಿ ಸಹಿತ ಅವರ ಒಪ್ಪಿಗೆಯನ್ನು ಕೊಡಲಿಲ್ಲ. ನಾವು ಎರಡು ಮೂರು ದಿವಸಗಳ ಕಾಲ ಕೇಂದ್ರ ಸರ್ಕಾರದ ಅಧಿಕಾರಿಗಳ, ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇವೆ. 1992ರಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅವತ್ತಿನ ಅಧಿಕಾರಿಗಳು, ಮತ್ತು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೇಂದ್ರ ಸರ್ಕಾರಕ್ಕೆ ಕೊಡುವುದು ಸೂಕ್ತ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದರು. Specialised Mountain Forceಗೆ ಇದು ಸಾಧ್ಯವೇ ಹೊರತು, ಆರ್ಡಿನರಿ ನಮ್ಮ ಪೊಲೀಸರಿಂದ ಇದು ಸಾಧ್ಯವಿಲ್ಲ. ಪೊಲೀಸರು ಒಳಗಡೆ ಹೋಗುತ್ತಾರೆ, ಊಟ ಮಾಡಿ ನೀರು ಕುಡಿದು ಬರುತ್ತಾರೆ. ಪಾಪ ನಾವು ಅವರಿಗೆ ಎಲ್ಲಿ ತರಬೇತಿಯನ್ನು ಕೊಟ್ಟಿದ್ದೇವೆ. ತಮಿಳುನಾಡು ಪೊಲೀಸರು ಹೋದರು ಅಷ್ಟೆ. ಭಕ್ತವತ್ಸಲಂರವರು ಅನೇಕ ವಿಚಾರಗಳನ್ನು ಅಲ್ಲಿ ಏನೇನು ಆಗುತ್ತದೆ ಎನ್ನುವ ಬಗ್ಗೆ ಹೇಳಿದ್ದಾರೆ. ನಾನು ನಿಮಗೆ ಏನು ಸಲಹೆ ಮಾಡುತ್ತೇನೆಂದರೆ, Under the leadership of the Government of India, you declare that area. You wirte a letter to the Union Government stating that this area should be declared as disturbed areas. ಅದನ್ನು ಡಿಕ್ಲೇರ್ ಮಾಡಿ, ಯೂನಿಯನ್ ಗೌರ್ನಮೆಂಟ್‌ನವರು ತಮ್ಮಲ್ಲಿರುವ ಎನ್‌ಎಸ್‌ಸಿ ಫೋರ್ಸ್‌ನ್ನು ಕಳುಹಿಸಿಕೊಡಲಿ. ಗೆರಿಲ್ಲಾ ಟ್ರೈನಿಂಗ್, ಉಲ್ಫಾ ಎಲಿಮೆಂಟ್ಸ್ ದಮನ ಮಾಡುವುದಕ್ಕೆ ಅವರು ಏನು ಪ್ರಯತ್ನವನ್ನು ಮಾಡುತ್ತಿದ್ದಾರೆ ಅವರನ್ನು ಕಳುಹಿಸಿ ಕೊಡಲಿ, ಅದಕ್ಕೂ ಮುಂಚೆ ಇನ್‌ಫರ್ಮೇಶನ್ ಗ್ಯಾದರ್ ಮಾಡಬೇಕು. ಈಗಾಗಲೇ ಸಾಂಗ್ಲಿಯಾನ್‌ರವರು ಎಂಎಂ ಹಿಲ್ಸ್‌ಗೆ ಹೋಗಿದ್ದಾರೆ, ಅದು ವೀರಪ್ಪನ್‌ಗೆ ಗೊತ್ತಾಗುವುದಿಲ್ಲವೇ? ಪಾಪ ಸಾಂಗ್ಲಿಯಾನ್‌ರವರು ಎಲ್ಲಿ ಹೋಗುತ್ತಾರೆ ದಿಂಬಮ್ ಮತ್ತು ಎಂಎಂ ಹಿಲ್ಸ್‌ವರೆಗೆ ಹೋಗುತ್ತಾರೆ, ನಂತರ ವಾಪಸ್ಸು ಬರುತ್ತಾರೆ. ಇಲ್ಲಿ ಅಷ್ಟೇ ಆಗುತ್ತದೆ. ಬಾಕಿ ಉಳಿದ ಅಧಿಕಾರಿಗಳು ಕೂಡ ಅಷ್ಟೆ, ಅಲ್ಲಿ ಮಾಹಿತಿ ಸಂಗ್ರಹಿಸುವುದೇ ಬಹಳ ದೊಡ್ಡ ಕೆಲಸ ಇದೆ I really appreciate you for posting those officers. They are having wide knowledge of that terrain. They are experienced in the field. I am not questioning their competence. ಆದರೆ ಅದು ಆಗುವುದಿಲ್ಲ,

ನನಗೆ ಅನುಮಾನ ಇದೆ, ಆದರೆ ನನಗೆ ಬಹಳ ಸಂತೋಷ. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಈ ವಿಚಾರದಲ್ಲಿ ತಮಿಳುನಾಡಿನ ಸರ್ಕಾರದ ಸಹಕಾರ ಬಹಳ ಮುಖ್ಯವಾಗಿದೆ. ಟೆರೇನು ಮತ್ತು ಕಾಡು ಹೆಚ್ಚು ಇರುವುದು ತಮಿಳುನಾಡಿನಲ್ಲಿ, ಆದಕ್ಕಾಗಿ ಇವರ ಜವಾಬ್ದಾರಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡಿ. ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ, ಅಲ್ಟರೇನೇಟಿವ್ ಪ್ಲಾನ್ ಮಾಡಿ ಇಟ್ಟುಕೊಂಡಿದ್ದೇವೆಂದು ಸಹ ಹೇಳಿರುತ್ತಾರೆ. ಆದ್ದರಿಂದ ಇದನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಡಿ, ನಮ್ಮ ಸಹಕಾರವನ್ನು ನಾವು ಕೊಡೋಣ. As it is joint task force ಕಮಾಂಡರ್ ಚೀಫ್ ತಮಿಳುನಾಡಿನವರು ಇರುತ್ತಾರೆ, ಜಾಯಿಂಟ್ ಕಮಾಂಡರ್ ಚೀಫ್ ಕರ್ನಾಟಕದವರು ಇರುತ್ತಾರೆ. Therefore please hand over to the Government of India. ಅವರು ಬೇಗ ಇದನ್ನು ಮಾಡುವುದಕ್ಕೆ ಅನುಕೂಲವಾಗಬಹುದು ಎನ್ನುವುದು ನನ್ನ ಭಾವನೆ ಇದೆ. ಮಾನ್ಯ ಗೃಹ ಸಚಿವರಾದ ಶ್ರೀ ಎಲ್.ಕೆ. ಅದ್ವಾನಿಯವರು ಇಬ್ಬರು ಮುಖ್ಯ ಮಂತ್ರಿಗಳನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದಾರೆ. ಆ ಮಾತುಕತೆ ಮಾಡುವ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುವುದೇನೆಂದರೆ, ಈ ವಿಐಪಿ ಸೆಕ್ಯೂರಿಟಿ ನಮ್ಮಲ್ಲಿರತಕ್ಕಂಥವರಿಗೆ ಯಾರಿಗಾದರೂ ಸಿಗುತ್ತದೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ನನ್ನ ಸ್ವಂತ ಅನುಭವವನ್ನು ಹೇಳುವುದಿಲ್ಲ, ಒಂದು ಖಾಸಗಿ ಅನುಭವವನ್ನು ತಮಗೆ ಹೇಳುತ್ತೇನೆ. ಬೀದರ್‌ನಲ್ಲಿ ಗುರುನಾನಕ್ ಗುರುದ್ವಾರದ ಅಧ್ಯಕ್ಷರಾಗಿ ಶ್ರೀ ಜೋಗಾನಂದರವರು ಇದ್ದರು, ಅವರಿಗೆ ನಾವು ಸೆಕ್ಯೂರಿಟಿಯನ್ನು ಕೊಟ್ಟಿದ್ದೆವು. ಆ ಸೆಕ್ಯೂರಿಟಿಯವರು ಮನೆಯ ಹೊರಗಡೆ ನಿಂತಿದ್ದರು. 4 ಜನರು ಹೋಗಿ ಆ ಜೋಗಾನಂದರವರನ್ನು ಸುಟ್ಟು ಬಂದರು. ಈ ರೀತಿಯಾದ ಸೆಕ್ಯೂರಿಟಿಯಿಂದ ಆಗುವುದಿಲ್ಲ. There is a necessity for reviewing the security of all these very very important persons. ಬರೀ ರಾಜಕಾರಣಿಗಳು, ಮಾನ್ಯ ಮಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಲಾ ಅಂಡ್ ಆರ್ಡರ್ ಪ್ರಾಬ್ಲಮ್‌ಗೆ ಕ್ರಿಯೇಟ್ ಆಗತಕ್ಕಂಥ ಪೊಟೆನ್ಷಿಯಲ್ ಇರತಕ್ಕಂಥ ಜನರು ಯಾರಿದ್ದಾರೆ, ಯಾರಿಗೆ ನೀವು ರಕ್ಷಣೆ ಕೊಡಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೀರಾ ಈ ಒಂದು ವಿಚಾರವನ್ನು ಕೇಂದ್ರದ ಗೃಹ ಸಚಿವರ ಗಮನಕ್ಕೆ ತಂದು, ಸ್ಪೆಸಲೈಸ್ಡ್ ಫೋರ್ಸ್‌ನ್ನು ಕರ್ನಾಟಕದಲ್ಲಿ ಮಾಡಬೇಕು ಎನ್ನುವ ಒಂದು ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಿ, ಈ ಲ್ಯಾಪ್ಸಸ್ ಬಗ್ಗೆ ಒಂದು ತನಿಖೆ ಆಗಬೇಕು. ತನಿಖೆಯಾಗದೆ ಹೋದರೆ ಜನಗಳಿಗೆ ಅನೇಕ ಅನುಮಾನಗಳು ಇವೆ. ನಮ್ಮ ಅನೇಕ ಗೌರವಾನ್ವಿತ ಸದಸ್ಯರುಗಳು ತಮ್ಮ ಅನುಮಾನವನ್ನು ವ್ಯಕ್ತಮಾಡಿದರು. ಕೆಲವರು ವೀರಪ್ಪನ್ ಈಗಾಗಲೇ ಶ್ರೀಲಂಕಾಕ್ಕೆ ಹೊರಟು ಹೋಗಿದ್ದಾನೆ ಅವನಿಗೆ ಸೇಫ್ ಪ್ಯಾಸೇಜ್ ಕೊಟ್ಟಿದ್ದಾರೆಂದು ಹೇಳಿದರು. ಕೆಲವರು ಏನೇನೋ ಮಾತುಕತೆಯಾಗಿ ವ್ಯವಹಾರವಾಗಿದೆ ಎಂದು ಹೇಳಿದರು. ಈ ರೀತಿ ಸಂಧಾನ ಮಾಡುವಾಗ ಏನೇನು

ಮಾತುಕತೆಯಾಗುತ್ತದೆ ಎನ್ನತಕ್ಕಂಥದ್ದು ನಮಗೆ ಅರ್ಥವಾಗುತ್ತದೆ. ಆದರೆ ಯಾವುದೇ ದೃಷ್ಟಿಯಿಂದ ಜನಗಳಿಗೆ ಇದು ಗೊತ್ತಾಗಬೇಕಾಗುತ್ತದೆ. ಒಂದು ಟರ್ಮ್ಸ್ ಆಫ್ ರೆಫರೆನ್ಸ್, 6 ತಿಂಗಳು ಸಮಯವನ್ನು ಕೊಟ್ಟು, ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಿಂದ ಈ ಸೆಕ್ಯೂರಿಟಿ ಲ್ಯಾಪ್ಸಸ್ ಮತ್ತು ಈ ಮೂರು ತಿಂಗಳಲ್ಲಿ ಇಬ್ಬರು ಮುಖ್ಯಮಂತ್ರಿಗಳಿಂದ ಆಗಿರತಕ್ಕಂಥ ಮಾತುಕತೆಗಳು ಮತ್ತು ಲ್ಯಾಪ್ಸಸ್ ಬಗ್ಗೆ ಜನರಿಗೆ ಗೊತ್ತಾಗಬೇಕಾದ ಅವಶ್ಯಕತೆ ಇದೆ. ಸರ್ಕಾರದಿಂದ 250 ಪುಟಗಳ ಡಾಕ್ಯುಮೆಂಟ್ಸ್‌ನ್ನು ವೀರಪ್ಪನ್‌ಗೆ ತಾವು ಕಳುಹಿಸಿಕೊಟ್ಟಿದ್ದೀರಿ. ಎಸ್‌ಟಿಎಫ್‌ನ ಪಾತ್ರ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಒಂದು ನ್ಯಾಯಾಂಗ ತನಿಖೆಯನ್ನು ಮಾಡುವುದರಿಂದ ಎಲ್ಲರ ಬಗ್ಗೆ ಜನರಿಗೆ ಗೊತ್ತಾಗಬೇಕು. ಇಂತಹ ಅವಕಾಶಗಳು ಮತ್ತೆ ಇರುವುದಿಲ್ಲ ಎನ್ನುವುದು ಸಾರ್ವಜನಿಕರಿಗೆ ಗೊತ್ತಾಗುತ್ತದೆ ಎನ್ನುವ ದೃಷ್ಟಿಯಿಂದ ಒಂದು ತನಿಖೆಯನ್ನು ಮಾಡಿಸುವುದು ಒಳ್ಳೆಯ ಕೆಲಸ. ಈ ತರಹದ ಪ್ರಕರಣಗಳು ಇನ್ನು ಮುಂದೆ ಆಗದಿರುವ ಹಾಗೆ ನೋಡಿಕೊಳ್ಳುವುದು ಅವಶ್ಯಕತೆ ಇದೆ ಎನ್ನುವುದನ್ನು ಹೇಳುತ್ತೇನೆ. ನಮ್ಮ ಪೊಲೀಸರಿಗೆ ಒಳ್ಳೆಯ ತರಬೇತಿ ವಿಚಾರದಲ್ಲಿ ಸಿದ್ಧತೆಗಳನ್ನು ನಾವು ಮಾಡಿಕೊಂಡಿರುವುದಿಲ್ಲ. 1947 ರಲ್ಲಿ ಸ್ವಾತಂತ್ರ್ಯ ಬಂದಾಗ ನಮ್ಮ ಪೊಲೀಸರಿಗೆ ಯಾವ ರೀತಿಯಾದ ತರಬೇತಿಯನ್ನು ನಾವು ಕೊಡುತ್ತಿದ್ದೇವೆ ಅದೇ ತರಹ ತರಬೇತಿಯನ್ನು ನಾವು ಇಟ್ಟುಕೊಂಡಿದ್ದೇವೆಯೇ ಹೊರತು ತರಬೇತಿಗೆ ಹೆಚ್ಚಿನ ಮಹತ್ವವನ್ನು ನಾವು ಕೊಟ್ಟಿರುವುದಿಲ್ಲ. ವಿಐಪಿ ಸೆಕ್ಯೂರಿಟಿ ಇರಬಹುದು, ಕೋಮು ಗಲಭೆಗಳ ಸಂದರ್ಭ ಇರಬಹುದು, ಕ್ರೈಸಿಸ್ ಮ್ಯಾನೇಜ್‌ಮೆಂಟ್ ಇರಬಹುದು, ಇಂತಹ ಸಂದರ್ಭದಲ್ಲಿ ತರಬೇತಿ ಇರುವ ಪೊಲೀಸ್ ಪಡೆ ನಮ್ಮಲ್ಲಿಲ್ಲ. ಅಂತಹ ತರಬೇತಿ ಕೊಡುವುದಕ್ಕೆ ತಾವು ಗಮನವನ್ನು ಕೊಟ್ಟರೆ ಬಹಳ ಉಪಯೋಗವಾಗುತ್ತದೆ. ನಮ್ಮೆಲ್ಲರಿಗೂ ಸಹಿತ ಡಾ: ರಾಜ್ ಕುಮಾರ್‌ರವರು ಸುರಕ್ಷಿತವಾಗಿ ಬಂದಿದ್ದಾರೆಂದು ಹೇಳಿ, ಮುಂದಿನ ದಿನಗಳಲ್ಲಿ ಈ ವೀರಪ್ಪನ್ ಹಿಡಿಯುವ ಕೆಲಸವನ್ನು ತಾವು ಮಾಡಿರುವ ಬಗ್ಗೆ ಎಸ್.ಟಿ.ಎಫ್ ಪಡೆಯವರು ಮಾಡಿದರೆ ಬಹಳ ಸಂತೋಷ, ನಿಮ್ಮ ರಾಜಕೀಯ ನಾಯಕತ್ವಕ್ಕೂ ಒಂದು ಮೆರಗು ಆಗುತ್ತದೆ, ಅದು ನಿಮ್ಮ ನಿಜವಾದ ಸಾಧನೆಯಾಗುತ್ತದೆ. ಈಗ ರಾಜ್‌ಕುಮಾರ್‌ರವರು

*4.30* ಪಿ.ಎಂ.

ಬಿಡುಗಡೆಯಾಗಿ ಹೊರಗಡೆ ಬಂದಿರುವ ಬಗ್ಗೆ ಅನೇಕ ಅನುಮಾನಗಳು ಇವೆ. ಅದು ಸರ್ಕಾರದ ಅಥವಾ ಅವರ ಕುಟುಂಬ ವರ್ಗದವರ, ಅವರ ಹಿತೈಷಿಗಳ ಸಂಧಾನದಿಂದ ಬಂದಿದ್ದಾರೋ ಅಥವಾ ಏನು ಎಂದು ಗೊತ್ತಿಲ್ಲ. ಆದರೂ ಸಹ ಡಾ: ರಾಜ್‌ಕುಮಾರ್‌ರವರು ಬಿಡುಗಡೆಯಾಗಿ ಬಂದಿರುವುದು ನಮಗೆ ಸಂತೋಷವಾಗಿದೆ. ಡಾ: ರಾಜ್‌ಕುಮಾರ್‌ರವರು ಕೊಟ್ಟಿರುವಂತಹ ಅನೇಕ ವಿಚಾರಗಳು ಏನು ಇದೆ ಅದರಲ್ಲೂ ಸಹಿತ ಗ್ಯಾಪ್ಸ್ ಇರತಕ್ಕಂಥದ್ದು ಅನೇಕ ಅನುಮಾನಗಳಿಗೆ ಎಡೆಯನ್ನು ಮಾಡಿಕೊಟ್ಟಿದೆ. ಇದರಿಂದಾಗಿ ಈ

ತನಿಖೆಯನ್ನು ಮಾಡುವುದರಿಂದಾಗಿ ಈ ಎಲ್ಲಾ ಅನುಮಾನಗಳಿಗೆ ಅವಕಾಶಗಳು ಇರುವುದಿಲ್ಲ ಮತ್ತು ಅನೇಕ ವ್ಯಕ್ತಿಗಳ ವಿಚಾರದ ಬಗ್ಗೆ ನಾವು ಇಲ್ಲಿ ಮಾತನಾಡುತ್ತೇವೆ ನಾಳೆಯ ದಿವಸ ಅದು ಮಾಧ್ಯಮಗಳಲ್ಲಿ ಬರುತ್ತದೆ. ವೈಯಕ್ತಿಕವಾಗಿ, ಅವರ ಗೌರವಕ್ಕೆ ಧಕ್ಕೆ ಬರುತ್ತದೆ. ಈ ಎರಡು ವಿಚಾರಗಳ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಒತ್ತಾಯ ಮಾಡಿ ನನಗೆ ಮಾತನಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸುದೀರ್ಘವಾದಂತಹ ಚರ್ಚೆಗೆ ಸರ್ಕಾರದ ಅಡಚಣೆಗಳು ಇರುವುದಿಲ್ಲ ಎನ್ನುವ ಮಾತಿನ ಪ್ರಕಾರ ಸದನದಲ್ಲಿ ನಿನ್ನೆಯಿಂದ ಇಂದಿನವರೆಗೂ ದೀರ್ಘವಾದಂತಹ ಚರ್ಚೆಯಾಗಿದೆ. ಕಳೆದ ಹತ್ತಾರು ವರ್ಷಗಳಲ್ಲಿ ಈ ವೀರಪ್ಪನ್ ಪ್ರಕರಣದಿಂದ ರಾಜ್ಯದ ಮೇಲೆ ಆಗಿರತಕ್ಕಂತಹ ಪರಿಣಾಮಗಳು, ಇದನ್ನು ಹೇಗೆ ಪರಿಹರಿಸಬಹುದಿತ್ತು, ಕಳೆದ ಒಂದು ವರ್ಷದಲ್ಲಿ ನಾವು ಹೇಗೆ ಇದನ್ನು ಪರಿಹಾರ ಮಾಡುವುದರಲ್ಲಿ ವಿಫಲರಾಗಿ ದೊಡ್ಡ ಗಂಡಾಂತರಕ್ಕೆ ಈ ರಾಜ್ಯವು ಸಿಕ್ಕಿಹಾಕಿಕೊಂಡಿತು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ವಿಶ್ಲೇಷಣೆಗಳನ್ನು ಕೊಟ್ಟಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಸನ್‌ಮಿತ್ರರುಗಳಿಗೂ ನಾನು ವಂದನೆಗಳನ್ನು ಸಮರ್ಪಿಸುತ್ತೇನೆ. ಅವರ ಭಾಷಣದ ಅವಧಿಯಲ್ಲಿ ಅವರು ಕೊಟ್ಟಿರತಕ್ಕಂತಹ ರಚನಾತ್ಮಕವಾದಂತಹ ಸಲಹೆಗಳನ್ನು ಸ್ವೀಕರಿಸಿ, ಆ ಸಲಹೆಗಳನ್ನು ನಮ್ಮ ಕಾರ್ಯಸೂಚಿಯನ್ನಾಗಿ ನಾವು ಅಳವಡಿಸಿಕೊಂಡು ಮಾಡುತ್ತೇವೆಂದು ಹೇಳಿ ಈ ಸದನಕ್ಕೆ ಆಶ್ವಾಸನೆಯನ್ನು ಕೊಡುತ್ತೇನೆ. ಈ ಚರ್ಚೆಯನ್ನು 6 ವಿಭಾಗಗಳಾಗಿ ವಿಂಗಡಿಸಬಹುದು, ಮೊದಲನೆಯದಾಗಿ ಅಪಹರಣದ ಹಿನ್ನಲೆಯಲ್ಲಿ ಗುಪ್ತಚಾರ ಇಲಾಖೆಯ ವೈಫಲ್ಯ, ಎರಡನೆಯದಾಗಿ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಗ್ರಾನೈಟ್ ಉದ್ಯಮಕ್ಕೆ ಅನುಮತಿಯನ್ನು ಕೊಟ್ಟಿದ್ದುದರ ಪ್ರಾಸ್ ಅಂಡ್ ಕಾನ್ಸ್, ಬೆಂಗಳೂರು ಉಗ್ರಗಾಮಿಗಳ ನೆಲೆಯಾಗಬಹುದು ಎನ್ನತಕ್ಕಂತಹ ಅನುಮಾನ, ಅಪಹರಣದ ಅವಧಿಯಲ್ಲಿ ಸರ್ಕಾರಕ್ಕೆ 5 ಸಾವಿರ ಕೋಟಿ ರೂಪಾಯಿಗಳ ನಷ್ಟವಾಗಿದೆ, ಡಾ: ರಾಜ್‌ಕುಮಾರ್‌ರವರ ಬಿಡುಗಡೆಯ ಮಾತುಕತೆಯಲ್ಲಿ ಯಾರ್ಯಾರ ಪಾತ್ರ ಎಷ್ಟೆಷ್ಟು ಇತ್ತು, ನ್ಯಾಯಾಧೀಶರ ವಿಚಾರಕ್ಕೆ ಸಿಬಿಐ ವಿಚಾರಕ್ಕೆ ಇವುಗಳೆಲ್ಲವು ಪ್ರಸ್ತಾಪವಾಯಿತು. ವೀರಪ್ಪನ್ ವ್ಯವಹಾರದಲ್ಲಿ ಹಿಂದಿನ ಸರ್ಕಾರ ತೆಗೆದುಕೊಂಡಂತಹ ನಿಲುವು ಹೀಗೆ ಬ್ರಾಡ್ ಆಗಿ 6 ವಿಭಾಗಗಳಾಗಿ ನಾವು ಈ ಬೆಳವಣಿಗೆಯನ್ನು ವಿಶ್ಲೇಷಣೆ ಮಾಡಬೇಕಾಗಿರುವಂತದ್ದು ಅಗತ್ಯವಾಗಿದೆ. ಮೊದಲನೆಯದಾಗಿ ಗುಪ್ತಚಾರ ಇಲಾಖೆಯ ವೈಫಲ್ಯ, ಈ ವೈಫಲ್ಯತೆಯು ನಿನ್ನೆ ಮತ್ತು ಮೊನ್ನೆಯದಲ್ಲ, 1997ನೇ ಇಸವಿಯಲ್ಲಿ ಅರಣ್ಯ ಅಧಿಕಾರಿಗಳನ್ನು ವೀರಪ್ಪನ್ ಹಿಡಿದುಕೊಂಡು ಹೋದಾಗ ಅಥವಾ ಅದಕ್ಕೆ ಮೊದಲೋ ಅಥವಾ ಅದಾದಮೇಲೋ ಕೃಪಾಕರ ಸೇನಾನಿಯವರನ್ನು ಹಿಡಿದುಕೊಂಡು ಹೋದಾಗ ಬಹುಶ: ಅಲ್ಲಿ ನಮ್ಮ ರಾಜ್ಯದ ಗುಪ್ತಚಾರದ ಸಾಫಲ್ಯತೆಯನ್ನು

ಕೆಲವರು ಕಾಣಬಹುದು, ನಾವು ವೈಫಲ್ಯತೆಯನ್ನು ಕಾಣಬಹುದು. ಅಂದು ಕಂಡಂತಹ ವೈಫಲ್ಯತೆ ಇವತ್ತು ಮುಂದುವರಿದಿದ್ದರೆ ಅದಂ ನಾವು ತಿದ್ದಿಕೊಳ್ಳಬೇಕಾಗಿರುವಂತಹ ಅವಶ್ಯಕತೆ ಇದೆ ಎನ್ನುವಂತಹ ದೃಷ್ಟಿಯಿಂದ ಈ ಮಾತುಗಳನ್ನು ಹೇಳುತ್ತೇನೆ. ಗುಪ್ತಚಾರ ಇಲಾಖೆ ಫೈಲ್ಯೂರ್ ಎಂದು ಹೇಳಿದರು, ಮತ್ತು ಅರ್ಕೇಶ್ ಎಂಬಂತಹ ಅಧಿಕಾರಿ ಆತನು ಮೊಟ್ಟಮೊದಲನೆಯ ಬಾರಿಗೆ ಈ ವಿಚಾರದ ಮೇಲೆ ಬೆಳಕನ್ನು ಚೆಲ್ಲಿದ ಎನ್ನುವಂತಹ ವಾದ ಸದನದ ನಾನಾ ಭಾಗಗಳಲ್ಲಿ ಕೇಳಿ ಬಂತು. ಆದರೆ ರೇಕಾರ್ಡ್‌ನ್ನು ಸ್ಟ್ರೈಟ್ ಆಗಿ ಇಡಬೇಕಾಗಿರತಕ್ಕಂಥದ್ದು ಅವಶ್ಯಕವಾಗಿದೆ. ದಿನಾಂಕ: 4-6-1999ನೇ ಇಸವಿಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಇಂಟಲಿಜೆನ್ಸ್, he visited Dr. Rajkumar's residence to inform them about the risks faced by the family. On 8-7-99, a letter was addressed to the I.G. (intelligence) Tamil Nadu by our ADG, our Intelligence Officer. On 2-8-99, a letter was addressed to Dr. Rajkumar himself. On 6-2-2000 a report from the Police Inspector in VIP Security at Bangalore, that Dr. Rajkumar has refused security stating that he does not need any security. This is upto 6-2-2000. ಆಮೇಲೆ ಮೇ ತಿಂಗಳಲ್ಲಿ ಅರ್ಕೇಶ್ ಅವರದು ಸ್ಟೇಟಸ್ ರಿಪೋರ್ಟ್, ಇದು ಯಾವಾಗ ಬರುತ್ತದೆಂದರೆ ಮೇ 2000. ನಾನು ನಮೂದು ಮಾಡಿರತಕ್ಕಂತಹ ದಿನಾಂಕ 20ನೇ ಶತಮಾನದ್ದು, ಈ ಅರ್ಕೇಶ್ ನೋಟಿಂಗ್ 21ನೇ ಶತಮಾನದ್ದು ಅಂದರೆ ಮೊದಲನೆಯ ಸಹಸ್ರಮಾನದಲ್ಲಿ ಬರತಕ್ಕಂಥದ್ದು What does one make out of this? Mr. Scindia, what do you make out of it?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ತಾವೇನು ಹೇಳಿದ್ದಾರೆಂದರೆ, ಡಾ: ರಾಜ್‌ಕುಮಾರ್‌ರವರ ಅಪಹರಣದ ಹಿನ್ನಲೆಯಲ್ಲಿ ಇಂಟಲಿಜೆನ್ಸ್ ಯಾವ ರೀತಿಯಾಗಿ ಫೈಲ್ಯೂರ್ ಆಗಿದೆ ಆ ರೀತಿ ಕೃಪಾಕರ ಸೇನಾನಿಯ ವಿಚಾರದಲ್ಲೂ ಸಹ ಇಂಟಲಿಜೆನ್ಸ್ ಫೈಲ್ಯೂರ್ ಆಯಿತು. ಅದು ಸಹ ಹೀಗೇ ಆಯಿತು ಎಂಬ ಅರ್ಥದಲ್ಲಿ ತಾವು ಹೇಳುತ್ತಿದ್ದೀರಿ.

Sri. S.M. Krishna :— There was intelligence failure in his case.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಹೇಳತಕ್ಕಂಥದ್ದು there is a difference. ಕೃಪಾಕರ ಸೇನಾನಿ ಹೋಗತಕ್ಕಂಥದಕ್ಕೂ ಡಾ: ರಾಜ್‌ಕುಮಾರ್‌ರವರರಿಗೂ ಬಹಳ ವ್ಯತ್ಯಾಸಗಳು ಇದೆ. ಕೃಪಾಕರ ಸೇನಾನಿಯವರ ವೈಯಕ್ತಿಕ ವಿಚಾರದ ಬಗ್ಗೆ ಮಾತನಾಡುತ್ತಿಲ್ಲ, ಅವರು ನಮಗೆ ಬೇಕಾಗಿರತಕ್ಕಂಥವರು, ಅವರು ಕರ್ನಾಟಕದ ಮುಖ್ಯವಾದಂತಹ ಪ್ರಜೆಯಾಗಿದ್ದಾರೆ. ಕೃಪಾಕರ ಸೇನಾನಿ ಅಪಹರಣವಾಗಿದ್ದಾಗ ಇದ್ದ ಪರಿಸ್ಥಿತಿಗೂ ಮತ್ತು ಡಾ: ರಾಜ್‌ಕುಮಾರ್ ಅಪಹರಣವಾದ ಮೇಲೆ ಇದ್ದ ಪರಿಸ್ಥಿತಿಯ ಬಗ್ಗೆ ತಮಗೂ ಕೂಡ ತಿಳಿದೇ ಇದೆ. ಈ ಎರಡು ವ್ಯತ್ಯಾಸಗಳನ್ನು ತಾವೇ ಗಮನಿಸಬೇಕು.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅರ್ಕೇಶ್‌ರವರು ಏನು ಸ್ಟೇಟಸ್ ರಿಪೋರ್ಟ್‌ನ್ನು ಸರ್ಕಾರಕ್ಕೆ ಕಳುಹಿಸಿದರು ಎಂದು ಮಾನ್ಯ ಸದಸ್ಯರುಗಳು ಹೇಳಿದರು. ಅದನ್ನೇ ಆಧಾರವಾಗಿಟ್ಟುಕೊಂಡು ದೊಡ್ಡ ಅಪರಾದ ನಡೆದುಹೋಗಿದೆ. ಇಲ್ಲಿಂದ ಹಿಡಿದು ಅಲ್ಲಿಯವರೆಗೆ ದೆಹಲಿಯವರೆಗೂ ಅಪರಾಧವಾಗಿದೆಯೆಂದು ಯಾರು ಹೇಳಿದ್ದಾರೆ ಅವರು ಈ ಪುಸ್ತಕ ಎಲ್ಲವನ್ನು ಓದಬೇಕಾಗಿಲ್ಲ. ನಾನು ಹೇಳಿದ ಡೇಟ್‌ಗಳನ್ನು ಗುರುತು ಮಾಡಿಕೊಂಡರೆ ಸಾಕುಗುತ್ತದೆ. ಮಾನ್ಯ ಸಿಂಧ್ಯಾರವರು ಹಿಂದೆ ಗೃಹ ಸಚಿವರಾಗಿದ್ದರು. ಏಕೆಂದರೆ ಅವರು ಮಾಡಿದ ಭಾಷಣದಲ್ಲಿ ಜವಾಬ್ದಾರಿಯನ್ನು ನಿರ್ವಹಿಸಿರತಕ್ಕವರು ಯಾವ ರೀತಿ ಮಾತನಾಡಬಹುದು ಎಂಬುದಕ್ಕೆ ಒಂದು ಉದಾಹರಣೆಯಾಗಿ ಅವರು ಹೇಳಿರತಕ್ಕದ್ದು ಎಂದು ನಾನು ಭಾವನೆ ಮಾಡುತ್ತೇನೆ. ಏಕೆಂದರೆ ಬಹಳ ಸದಸ್ಯರು ಜವಾಬ್ದಾರಿಯನ್ನು ನಿರ್ವಹಿಸದೆ ಒಂದು ಸಮಸ್ಯೆಯನ್ನು ವಿಶ್ಲೇಷಣೆ ಮಾಡುವುದರಲ್ಲಿ ಹೇಗೆ ಅದಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಆ ಸಮಸ್ಯೆಯನ್ನು ನೋಡುತ್ತೇವೆ ಎಂಬುದಕ್ಕೆ ಅವರು ಮಾಡಿರತಕ್ಕ ಭಾಷಣ ಈ ದಿವಸ ನನಗೆ ಬಹಳ ತೃಪ್ತಿಯನ್ನು ತಂದಿದೆ. ಆದರೆ ಕೆಲವು ಅಮೆಂಡ್‌ಮೆಂಟ್ಸ್ ಮಾಡಬೇಕಾಗುತ್ತದೆ. ನಿಮ್ಮ ಭಾಷಣ ಉದ್ದಕ್ಕೂ ಕೆಲವು ಮಿಡ್‌ಟವರ್ಸ್ ಕರೆಕ್ಷನ್ ಮಾಡಬೇಕಾಗುತ್ತದೆ. ತಾವು ಹೇಳಿದಿರಿ, ಗೃಹಸಚಿವರಾಗಲೀ ಮುಖ್ಯಮಂತ್ರಿಗಳಾಗಲೀ ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಿದ್ದಾರೆಯೇ? ಅಲ್ಲಿಗೆ ಹೋಗಿ ರಿವ್ಯೂ ಮಾಡಿದ್ದೀರಾ ಎಂದು ಸಿಂಧ್ಯಾರವರು ಕೇಳುತ್ತಾರೆ. ಮಾನ್ಯ ಸಿಂಧ್ಯರವರ ಗಮನಕ್ಕೆ ತರುವುದಾದರೆ, ನಮ್ಮ ಗೃಹ ಸಚಿವರು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ದಿನಾಂಕ: 22-11-1999ರಂದು ಬಂಡೀಪುರದಲ್ಲಿ ಎಸ್‌ಟಿಎಫ್ ಕಾರ್ಯಾಚರಣೆಯ ಪರಿಶೀಲನಾ ಸಭೆಯನ್ನು ನಡೆಸಿದ್ದಾರೆ. ತಾವು ಹೇಳಬೇಕಾಗಿತ್ತು, ಒಂದು ಮೀಟಿಂಗ್ ಮಾಡಿದ್ದರು ಅಲ್ಲಿಗೆ ಮುಖ್ಯಮಂತ್ರಿಗಳು ಹೋಗಿರಲಿಲ್ಲವೆಂದು. ಅದಕ್ಕೆ ನಾನು ಮಿಡ್‌ಟವರ್ಸ್ ಕರೆಕ್ಷನ್ಸ್ ಎಂದು ಹೇಳಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ನಾನು ಅದನ್ನು ಹೇಳುತ್ತಿದ್ದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೊಸದಾಗಿ ಗೃಹಮಂತ್ರಿಗಳಾದ ಮೇಲೆ ಪಾಪ ಅವರಿಗೆ ಬೇರೆ ಬೇರೆ ರೀತಿಯಲ್ಲಿ ಬೇಜಾರಾಗಿತ್ತು. ಅದಕ್ಕೋಸ್ಕರ ಬಂಡೀಪುರಕ್ಕೆ ರೆಸ್ಟ್‌ಗೆ ಹೋಗಿದ್ದರು. ಅವರು ಎಸ್‌ಟಿಎಫ್ ಆಪರೇಷನ್ ಮಾಡಿದ್ದಾರೆಂದು ನನಗೆ ಗೊತ್ತಾಗಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ನಿಮ್ಮ ಮಾಹಿತಿಗೆ ನಾನು ಇನ್ನೂ ಮುಂದೆ ಹೋಗಿ ಹೇಳುತ್ತೇನೆ. ಬಂಡೀಪುರಕ್ಕೆ ದಿಂಬಂ, ಮಲೆಮಹದೇಶ್ವರ ಬೆಟ್ಟಕ್ಕೆ ಹೋಗಿದ್ದೆ. ವೀರಪ್ಪ ಯಾವ ಟೆರೈನ್‌ನಲ್ಲಿ ಅಟ್ಯಾಕ್ ಮಾಡಿದ್ದ ಆ ರಸ್ತೆಯಲ್ಲಿ ಹೋಗಿ ಸುಮಾರು ಹತ್ತು ಹದಿನೈದು ನಿಮಿಷ ನಿಂತುಕೊಂಡು ನೋಡಿ ಬಂದಿದ್ದೇನೆ.

Sri S.M. Krishna :— And he was accompanied by the DGP Sri Srinivasulu and other officers who are relevant to this Task Force. ಆಮೇಲೆ ನಿಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಏನೇನು ಸ್ಪೆಶಲ್ ಸ್ಪೆಷಲಿಟೀಸ್ ಅನ್ನು

ಅಂದರೆ under difficult circumstances ನಲ್ಲಿ ಯಾರ್ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಏನು ಕೊಟ್ಟಿದ್ದೀರಿ ಅದನ್ನು ಈ ಸರ್ಕಾರ ಹಿಂದೆ ತೆಗೆದುಕೊಂಡಿಲ್ಲ. ಅದನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ತಾವು ತಮ್ಮ ಭಾಷಣದಲ್ಲಿ ಒಂದು ಕಡೆ ಹೇಳಿದ್ದೀರಿ, ಸಾಂಗ್ಲಿಯಾನರವರು ಈಗ ಹೋಗುತ್ತಾರೆ ಅವರು ಏನು ಮಾಡುತ್ತಾರೆ ಅದು ವೀರಪ್ಪನಿಗೆ ಗೊತ್ತಾಗುವುದಿಲ್ಲವೇ? ಹಾಗೆಂದು ಹೇಳುತ್ತಾರೆ. ಮಾನ್ಯ ಸದಾನಂದಗೌಡರು ಹೇಳುತ್ತಾರೆ ನೀವು ತಕ್ಷಣ ಏಕೆ ಕಳುಹಿಸಲಿಲ್ಲವೆಂದು, 15ನೇ ತಾರೀಖು ರಾಜ್‌ಕುಮಾರ್ ವಾಪಸ್ಸು ಬಂದರು 15ನೇ ತಾರೀಖು ನೀವು ಏಕೆ ಕಳುಹಿಸಲಿಲ್ಲವೆಂದು ಅಟ್ಯಾಕ್ ಮಾಡಿದರು. ಹಿಂದಿನ ಗೃಹಮಂತ್ರಿಗಳು ಹೇಳುತ್ತಾರೆ ನಾಲ್ಕೈದು ದಿವಸಗಳಾದ ಮೇಲೆ ಸಾಂಗ್ಲಿಯಾನರವರು ಹೋದರೆ ಎಲ್ಲಿಗೆ ಹೋಗುತ್ತಾರೆ? ದಿಂಬಂವರೆಗೆ ಹೋಗುತ್ತಾರೆ, ದಿಂಬಂನಿಂದ ವಾಪಸ್ಸು ಅವರ ಠಾಣೆಗೆ ಬರುತ್ತಾರೆ. 15ನೇ ತಾರೀಖು ರಾತ್ರಿ ಹೋಗಿದ್ದರೆ ಅವರು ಎಲ್ಲಿಗೆ ಹೋಗುತ್ತಿದ್ದರು? ದಿಂಬಂಗೆ ಹಾಗೆಂದು ನೀವು ಸದಾನಂದಗೌಡರಿಗೆ ಪುರಸೊತ್ತು ಇದ್ದಾಗ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ :— ಇದರಲ್ಲಿ ನಮಗೆ ಒಂದು ವ್ಯತ್ಯಾಸ ಕಾಣಿಸುತ್ತಿರುವುದು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎನ್ನುವ ನಮ್ಮ ಮನಸ್ಸಿನ ಭಾವನೆಯನ್ನು ವ್ಯಕ್ತ ಮಾಡಿದ್ದೇವೆ. ಸಿಂಧ್ಯಾರವರು ಏನು ಹೇಳಿದ್ದಾರೆಂದರೆ, ಅವರು ಅನುಭವ ಇದ್ದವರು ನಿಮ್ಮ ಕಾಲದಲ್ಲಿ ಸ್ವಲ್ಪ ತಡವಾದರೂ ಪರವಾಗಿಲ್ಲವೆಂದು ಹೇಳಿದ್ದಾರೆ. ಆದರೆ ನಾವು ಹೇಳುವುದು ನಿಮ್ಮ ಕಾಲದಲ್ಲಿ ಸ್ಪೀಡ್ ಆಗಬೇಕೆನ್ನುವ ಭಾವನೆಯನ್ನು ವ್ಯಕ್ತ ಮಾಡಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ :— ಆವೇಶದಿಂದ ಇಂತಹ ಕ್ಲಿಷ್ಟ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ವೆಲ್ ಡಾಟ್‌ಔಟ್ ಸ್ಟ್ರಾಟಜಿಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಮಯ ಬೇಕಾಗುತ್ತದೆ. ಈಗ why did we choose Sangliana? why did we bring in Shankar Bidri? Why did we add Kempaiah? A lot of thought has gone into this and this measure of the State Government has been hailed and appreciated by the people. ತಾವು ಹೇಳುತ್ತೀರಿ, ಜನಗಳು ನಮನ್ನು ಬಿಡುತ್ತಿಲ್ಲ ರಾಜ್‌ಕುಮಾರ್‌ರವರು ಕಾಡಿನಿಂದ ನಾಡಿಗೆ ಹೇಗೆ ಬಂದರು ಎಂಬುದನ್ನು ತಿಳಿದುಕೊಳ್ಳಲು ಹೇಳುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆ. ಜನ ನಿಮ್ಮನ್ನು ನಮ್ಮನ್ನು ಕೇಳುತ್ತಿದ್ದುದು ಹೇಗಾದರೂ ಮಾಡಿ ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬನ್ನಿಯೆಂದು. ಈ ಪಕ್ಷದವರು ಅಲ್ಲಿ ಕುಳಿತಿದ್ದಾರಲ್ಲ ಅವರ ಅಪ್ರೋಚ್ ಮತ್ತು ನಮ್ಮ ಅಪ್ರೋಚ್ ರಾಜ್‌ಕುಮಾರ್‌ರವರು ಅವರ ಮನೆಗೆ ಬಂದರೆ ಸಾಕೆಂದು ಆಗಿತ್ತು.

ಶ್ರೀ ಸಿ. ಬೈರೇಗೌಡ :— ತಾವು ಸರ್ವ ಪಕ್ಷಗಳ ಸಭೆಯನ್ನು ಕರೆದ ಸಂದರ್ಭದಲ್ಲಿ ನಾವು ಕೂಡ ಅದನ್ನೇ ಹೇಳಿದ್ದೇವೆ. ಇದರ ಜೊತೆಗೆ ಬೇರೆ ಬೇರೆ ವಿಚಾರಗಳನ್ನು ಹೇಳಿದ್ದೇವೆ. ತಾವು ಅಲ್ಲಿಂದ ಈ ಕಡೆಯವರೆಗೆ ಮಾತ್ರ ಕೈ ತೋರೀಸಿದಿರಿ...

ಶ್ರೀ ಎಸ್.ಎಂ. ಕೃಷ್ಣ :— ಹಾಗಾದರೆ ಇಲ್ಲಿಂದ ಹಿಡಿದು ಅಲ್ಲಿಯವರೆಗೆ ಬೇಗ ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬನ್ನಿ ಹಾಗೆಂದು ಹೇಳಿದರು. ಸುರೇಶ್‌ಕುಮಾರ್ ಮತ್ತು ಸದಾನಂದಗೌಡರು ಎಲ್ಲರೂ ಸೇರಿ ಹೇಳಿದರು.

ಶ್ರೀ ಎಸ್. ಸುರೇಶ್‌ಕುಮಾರ್ :— ಇದು ಕೂಡ ಮಿಡ್‌ಟವರ್ ಕರೆಕ್ಷನ್.

Sri S.M. Krishna :— This is a mid course correction, that means everyone of us is liable if we have the wisdom and go in and accept the mid course correction like me. ಇಲ್ಲಿಂದ ಅಲ್ಲಿಯವರೆಗೆ ಸಧ್ಯ ರಾಜ್‌ಕುಮಾರ್ ಬಂದರೆ ಸಾಕು, ನಾವೆಲ್ಲ ಸೇರಿ ಅವರನ್ನು ಸೇರಿಸಿಕೊಂಡು ಅಭಿಮಾನಿ ದೇವರುಗಳನ್ನು ಸೇರಿಸಿಕೊಂಡು.....

ಶ್ರೀ ಬಿ.ಹೆಚ್ ಬನ್ನಿಕೋಡ್ :— ಇಡೀ ಸದನ ಹೇಗಾದರೂ ರಾಜ್‌ಕುಮಾರ್ ಬರಲಿಯೆಂದು ಎಲ್ಲರೂ ಹೇಳುತ್ತಿದ್ದರು. ಅವರು ಬಂದನಂತರ ಇವುಗಳೆಲ್ಲ ಕೇಳುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ :— ನಾನು ಬಹಳ ಸಾರಿ ಹೇಳಿದ್ದೇನೆ. ಮುಕ್ತ ಕಂಠದಿಂದ ನಾನು ಅಕನಾಲೆಡ್ಜ್ ಮಾಡಿಕೊಂಡಿದ್ದೇನೆ. ವಿರೋಧಪಕ್ಷಗಳ ನಾಯಕರುಗಳು ಕೊಟ್ಟಂತಹ ಸಹಕಾರ ಬಹುಶ: ಯಾವ ಸರ್ಕಾರಕ್ಕೂ ಕಳೆದ 50 ವರ್ಷಗಳಲ್ಲಿ ಈ ಪ್ರಮಾಣದಲ್ಲಿ 109 ದಿವಸಗಳ ಸಹಕಾರವನ್ನು ಈವೊಂದು ವಿಚಾರದಲ್ಲಿ ಕರ್ನಾಟಕ ಸರ್ಕಾರದ ಚರಿತ್ರೆಯಲ್ಲಿ ಯಾವ ಸರ್ಕಾರಕ್ಕೂ ಯಾವ ವಿರೋಧ ಪಕ್ಷಗಳೂ ಕೊಟ್ಟಿಲ್ಲವೆನ್ನುವುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಆದ್ದರಿಂದ ನಾನು ಅನ್ಯಥಾ ಯಾರನ್ನೂ ದೂರತಕ್ಕ ದೂರ್ತತನಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ಸದನದ ಗಮನಕ್ಕೆ ತರುವುದಕ್ಕೆ ನಾನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಗ್ರಾನೈಟ್ ಉದ್ಯಮಕ್ಕೆ ಅನುಮತಿ ಕೊಟ್ಟಿದ್ದರಿಂದ ದೊಡ್ಡ ಆಘಾತವಾಯಿತು ದೊಡ್ಡ ದುರಂತವಾಯಿತು ಎಂದು ಕೆಲವರು ಹೇಳಿದರು. ನಾನು ಯಾರೋ ಒಬ್ಬರನ್ನು ಕುರಿತು ಈ ಮಾತನ್ನು ಹೇಳುತ್ತಿಲ್ಲ. ಅದಕ್ಕೆ ನಾನು ಆರು ವಿಭಾಗಗಳಾಗಿ ವಿಭಜಿಸಿದ್ದೇನೆ. ಇದಕ್ಕೆ ಯಾರ‍್ಯಾರು ಧ್ವನಿಗೂಡಿಸಿದ್ದಾರೆ ಅವರಿಗೆ ಈ ಉತ್ತರ. ಗ್ರಾನೈಟ್ ಕಲ್ಲು ಗಣಿಗಾರಿಕೆಯನ್ನು 1992ರಲ್ಲಿ ನಿಷೇಧಿಸಿದ್ದಾರೆ. ಮಾನ್ಯ ಸದಸ್ಯರಾದ ಗುರುಸ್ವಾಮಿಯವರು ಒಂದು ಮಾತು ಹೇಳಿದ್ದಾರೆ. ಕೆಲವು ಶರತ್ತುಗಳನ್ನು ಹಾಕಿ ಗ್ರಾನೈಟ್ ಕಲ್ಲು ಗಣಿಗಾರಿಕೆ ಮಾಡಲಿಕ್ಕೆ ದಿನಾಂಕ: 7-7-2000ರಲ್ಲಿ ಅನುಮತಿಯನ್ನು ನೀಡಲಾಯಿತು. ಯಾರಿಗೆ ಕೊಟ್ಟರು ಎನ್ನುವುದಕ್ಕೆ ಮಾನ್ಯ ಸಿಂಧ್ಯಾರವರೇ, ನಾನು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ನಮಗೆ ಮನವಿಯನ್ನು ಕೊಟ್ಟರು. ಕಾಂಗ್ರೆಸ್ ಅತ್ಯಂತ ಪ್ರಭಾವಶಾಲಿ ರಾಜಕೀಯ ಪಕ್ಷ. ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಎಲ್ಲಿಗೆ

ಹೋದರೂ ಸಹಸ್ರಾರು ಜನ ಸೇರುತ್ತಾರೆ. ನೂರಾರು ಅಹವಾಲುಗಳು ಬರುತ್ತವೆ. ಇದು ನನ್ನ ಗಮನಕ್ಕೆ ಆಗ ತಂದಿದ್ದರು, ಅದು ನನಗೆ ಜ್ಞಾಪಕವಿಲ್ಲ. ಆದರೆ ನನ್ನ ಮೇಲೆ ಈ ಮನೆಯ ಕೆಲವು ಸದಸ್ಯರು ಆಪಾದನೆ ಮಾಡಿ ಹೇಳಿದರು. ಮಹದೇವಸ್ವಾಮಿಯವರು, ನನಗೆ ಅವರ ಬಗ್ಗೆ ಗೌರವವಿದೆ. ಯಾವ ಕಾರಣಕ್ಕೋಸ್ಕರ ಒತ್ತಾಯ ಬಂತು ಹಾಗೆಂದು ಕೇಳಿದರು. He put it in his right perspective. ಅಲ್ಲಿ ಬೆಳೆ ವಿಫಲವಾಯಿತು, ಜನರಿಗೆ ಜೀವನೋಪಾಯಕ್ಕೆ ಮಾರ್ಗ ಇರಲಿಲ್ಲ. ಗ್ರಾನೈಟ್ ಕಲ್ಲುಗಣಿಗಾರಿಕೆ ಬ್ಯಾನ್ ಆಗಿತ್ತು. ಜನರು ವಲಸೆ ಹೋಗುವುದಕ್ಕೆ ಪ್ರಾರಂಭಿಸಿದ್ದರು, ಅಂತಹ ಸಮಯದಲ್ಲಿ ಸರ್ಕಾರದ ಮೇಲೆ ಜನ ಪ್ರತಿನಿಧಿಗಳಿಂದ ಒತ್ತಾಯ ಬಂದಿತ್ತು; ಮತ್ತೊಂದು ಸಲ ನೋಡಿ ಪುನರ್ ವಿಮರ್ಶೆ ಮಾಡಿ ಎಂದು. ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಅವರಿಗೆ ಅದನ್ನು ರೆಫರ್ ಮಾಡಿದೆವು. ಅವರು ಕೆಲವು ಷರತ್ತುಗಳೊಡನೆ ಇಲ್ಲಿ ಗಣಿಗಾರಿಕೆಯನ್ನು ಮಾಡಬಹುದು ಎಂದು ಅವರ ವರದಿಯನ್ನು ನಮಗೆ ಕಳುಹಿಸಿಕೊಟ್ಟರು. ಆನಂತರ ತಕ್ಷಣ ಗಣಿರಾಗಿಕೆಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವೇ ಎನ್ನತಕ್ಕದ್ದನ್ನು ಒಳಹೊಕ್ಕು ನೋಡಬೇಕಾಗಿದ್ದರೆ ಅದಾದಮೇಲೆ ನಡೆಯಬೇಕಾಗಿರತಕ್ಕಂಥ ಪ್ರಕ್ರಿಯೆಗಳು ಇದಕ್ಕೆ ಬೆಳಕನ್ನು ಚೆಲ್ಲುತ್ತವೆ. Under the rules, the competent Authority shall, before granting or renewing, consult, in case of specified minor minerals, the Deputy Commissioner of the District concerned and this is s minor mineral in that aea. The Deputy Commissioner or the Tahsildar as the case may be shall send the recommendations within 30 days from the date of receipt of the communication from the competent authority. ಆದ್ದರಿಂದ ಜುಲೈ 7 ರಂದು ನಾವೇನು ತೀರ್ಮಾನ ಮಾಡಿದ್ದೆವು, ಅದಕ್ಕೆ 30 ದಿವಸ ಸೇರಿಸಿಕೊಳ್ಳಿ. ಆ 30 ದಿವಸಗಳು ಸೇರಿದ ಮೇಲೆ - it has to go before the designated committee at the Secretariat level here. Therefore ಕನಿಷ್ಟ ಮೂರು ತಿಂಗಳು ಒಂದು ಗಣಿಗಾರಿಕೆ ಗುತ್ತಿಗೆಯನ್ನು ಗ್ರಾಂಟ್ ಮಾಡುವುದಕ್ಕೆ ಬೇಕಾಗುತ್ತದೆ. ಈ ಮಧ್ಯೆ 8.8.2000ನೇ ದಿವಸ ಈ ಗಣಿಗಾರಿಕೆಯನ್ನು ನಾವು ವಾಪಸ್ಸು ತೆಗೆದುಕೊಂಡೆವು. ಇದಕ್ಕೆ ಸೀಮಿತವಾದಂತೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಗಣಿಗಾರಿಕೆಯನ್ನು ತಾತ್ವಿಕವಾಗಿ ಒಪ್ಪಿದ್ದರೂ ಕೂಡ ಗಣಿಗಾರಿಕೆ ಕೆಲಸವನ್ನು ಮಾಡುವುದಕ್ಕೆ ಕನಿಷ್ಟ ಇನ್ನೂ ಮೂರು ತಿಂಗಳು ಬೇಕಾಗಿತ್ತು. ಈ ಮೂರು ತಿಂಗಳ ಅವಧಿಯಲ್ಲಿ ಒಂದು ತಿಂಗಳಲ್ಲೇ ಅದನ್ನು ನಾವು ವಾಪಸ್ಸು ತೆಗೆದುಕೊಂಡೆವು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:— ಗಣಿಗಾರಿಕೆಗೆ ಅನುಮತಿಯನ್ನು ಕೊಟ್ಟು ಪ್ರಾರಂಭ ಮಾಡುವುದಕ್ಕೆ ಮೂರು ತಿಂಗಳು ಬೇಕಾಗುತ್ತದೆ ಎಂದು ತಾವು ಹೇಳಿರತಕ್ಕ ವಿವರಣೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಗಣಿಗಾರಿಕೆಯನ್ನು ಹಿಂದೆ

ಏಕೆ ನಿಷೇದ ಮಾಡಿದ್ದು ಎಂದರೆ ವೀರಪ್ಪನ್‌ನ ಕಾರ್ಯಚಟುವಟಿಕೆಗೆ ಪಕ್ಕದಲ್ಲಿದೆ, ಈ ಗಣಿಗಾರಿಕೆ ಆಗುವುದರಿಂದ ಅವನ ಕಾರ್ಯಚಟುವಟಿಕೆಗೆ ಅನುಕೂಲವಾಗುತ್ತದೆ, ಮತ್ತೆ ಅವನು ಈ ತರಹ ಎಲ್ಲ ಅಪರಾಧ ಕೃತ್ಯಗಳನ್ನು ಮಾಡುತ್ತಾನೆ ಎನ್ನುವ ಕಾರಣಕ್ಕೋಸ್ಕರ ಅದನ್ನು ತಡೆಹಿಡಿದಿದ್ದು. ಆದರೆ ನೀವು ಮತ್ತೆ ಅನುಮತಿ ಕೊಡುವಾಗ ವೀರಪ್ಪನ್ ವಾಸಸ್ಥಳದ ವಿವರಗಳನ್ನು ಹೇಳಿದ್ದೀರಾ? ಈಗ ಆತ ಏನು ಮಾಡುತ್ತಿದ್ದಾನೆ ಎನ್ನುವುದರ ಬಗ್ಗೆ ಎಂದು ಸ್ಪಷ್ಟವಾದ ಮಾಹಿತಿ ಸರ್ಕಾರದಲ್ಲಿ ಅದನ್ನು ಸ್ಪಷ್ಟಪಡಿಸದೆ ಅನುಮತಿಯನ್ನು ಕೊಟ್ಟಿದ್ದೀರಿ ಎನ್ನುವ ವಿಚಾರದಲ್ಲಿ ಅಷ್ಟೇ ನಾವು ಪ್ರಸ್ತಾಪ ಮಾಡಿದ್ದೇವೆಯೇ ಹೊರತು ಗಣಿಗಾರಿಕೆ ಅನುಮತಿ ಕೊಡಬಾರದಿತ್ತು, ಅದನ್ನು ಮಾಡಬಾರದು ಎನ್ನುವ ಉದ್ದೇಶದಿಂದ ಅಲ್ಲ. ಆ ವೀರಪ್ಪನ್‌ನ ಕಾರ್ಯಚಟುವಟಿಕೆ ಏನಿದೆ, ಆತನ ಬಗ್ಗೆ ಸ್ವಲ್ಪ ಮಾಹಿತಿಯನ್ನು ತೆಗೆದುಕೊಂಡು ಕೊಡಬೇಕಿತ್ತು ಎಂದಷ್ಟೇ ಹೇಳಿದ್ದೇವೆ.

ಶ್ರೀ ಎಸ್.ಎಂ. ಕೃಷ್ಣ:— ವೀರಪ್ಪನ್‌ನ್ನು ಕೇಳದೆಯೇ ನಾವು ಗಣಿಗಾರಿಕೆಗೆ ಅವಕಾಶ ಕೊಟ್ಟೆವು ಅಂತ ತಾವು ಹೇಳುತ್ತಿದ್ದೀರಿ. ಗಣಿಗಾರಿಕೆ ಪ್ರಾರಂಭವಾಗಿರಲಿಲ್ಲ. ಇದನ್ನು ಮಹದೇವ ಪ್ರಸಾದರೂ ಒಪ್ಪುತ್ತಾರೆ. ಗಣಿಗಾರಿಕೆ ವಿಚಾರದಲ್ಲಿ ನಿಮಗೂ ಸ್ವಲ್ಪ ಪರಿಜ್ಞಾನ ಇರಬೇಕಲ್ಲ. ನನಗಿರುವಷ್ಟು ಅಲ್ಲದಿದ್ದರೂ ಸ್ವಲ್ಪವಾದರೂ ಇಟ್ಟುಕೊಳ್ಳಿ. ಆದ್ದರಿಂದ ಕನಿಷ್ಟ ಮೂರು ತಿಂಗಳು ಬೇಕಿತ್ತಲ್ಲವೆ? ಈ ಮೂರು ತಿಂಗಳ ಅವಧಿಯ ಒಂದು ತಿಂಗಳಲ್ಲೇ ಇದು ಸರ್ಕಾರದ ಆಜ್ಞೆ ಏನು ಆಗಿತ್ತು 8ನೇ ತಾರೀಕಿಗೆ ಅದರ ಹನ್ನೊಂದು ದಿವಸವೂ ಮುಗಿಯಿತು. ಬೆಂಗಳೂರು ಉಗ್ರಗಾಮಿಗಳ ನೆಲೆಯಾಗುತ್ತಿದೆ, ಕ್ರಿಮಿನಲ್ಸ್ ಗಳ ಸ್ವರ್ಗವಾಗತ್ತಿದೆ ಹಾಗೆಂದು ಹೇಳಿ ಬಹಳ ತೀಕ್ಷ್ಣವಾದಂಥ ವಾಕ್ಯಗಳು ಮಾನ್ಯ ವಿರೋಧ ಪಕ್ಷದ ನಾಯಕರಿಂದ ಬಂದವು. ಬೆಂಗಳೂರನ್ನು ಕ್ರಿಮಿನಲ್‌ಗಳ ಸ್ವರ್ಗ ಮಾಡಿಕೊಡುವುದಕ್ಕೆ ಈ ಸದನದಲ್ಲಿ ನಾವು ಯಾ, ಅಂತಹ ವಾತಾವರಣ ಸೃಷ್ಟಿಯಾಗುವುದಕ್ಕೆ ಪ್ರತ್ಯಕ್ಷವಾಗಲೀ ಪರೋಕ್ಷವಾಗಲೀ ಉತ್ತೇಜನ ಕೊಡತಕ್ಕವರು ಅಲ್ಲ. ಆದರೆ ಬೆಂಗಳೂರಿನಲ್ಲಿ ಒಂದು ವಿಶೇಷವಾದಂಥ ಬೆಳವಣಿಗೆ ಕಳೆದ ಒಂದು ವರ್ಷದಿಂದ ಏನಾಗಿದೆ ಎಂದರೆ - Bangalore has become the focus of attention of international investors. Investments propserity bring its own set of problems. I am sure Suresh Kumar will understand and appreciate. Where there is prosperity problems also accompany prosperity. ಇವತ್ತು ಎಕನಾಮಿಕ್ ಟೈಮ್ಸ್‌ನಲ್ಲಿ ನೀವು ನೋಡಿರಬಹುದು. Massachussets Institute of Technology ವಿಭಾಗದವರು ಡೆಲ್ಲಿಗೆ ಬಂದಿದ್ದರು. They are looking around in Asia. ಏಷಿಯಾ ದೇಶದಲ್ಲಿ ಎಲ್ಲಿ ತಮ್ಮ ಹೊಸ ಔಟ್‌ಲೆಟ್‌ನ್ನು ಪ್ರಾರಂಭ ಮಾಡಬೇಕೆಂದು ಹೋದಾಗ ನಮ್ಮ ಕಾಡಿಗೆ ಸಂಧಾನಕಾರರು ಹೋದಹಾಗೆ ಆ ಹೂಡಿಕೆದಾರರನ್ನು ಆಕರ್ಷಿಸುವುದಕ್ಕೆ ನಮ್ಮ ಸಂಧಾನಕಾರರು ಅಲ್ಲಿಗೆ ಹೋಗಿದ್ದರು. ನಾನು ದೂರವಾಣಿ ಮೂಲಕ ಅವರೊಡನೆ ಮಾತನಾಡಿದೆ. ನಾನು ಮಾತನಾಡುತ್ತಾ ಇದ್ದಂಥ ಕಾಲದಲ್ಲಿ - a representative of the massachussets Institute of Technology, has said that there are

powerful people singing the praise of Bangalore here. Powerful people who were siting in the room were singing in praise of Bangalore. New found importance of Bangalore City will have to be taken into reckoning while assessing the perspective of the crime rate in Bangalore City. ಸೆಪ್ಟೆಂಬರ್ ತಿಂಗಳಲ್ಲಿ 38 ಕೊಲೆಗಳು ಆಗಿ ಹೋಗಿವೆ ಎಂದು ಹೇಳಿದರು. ಮಾನ್ಯ ಗೃಹಸಚಿವರು ಈಗಾಗಲೇ ಆ ಸದನದಲ್ಲಿ ಕ್ರೈಮ್ ರೇಟ್ ವಿಚಾರದಲ್ಲಿ ಒಂದು ಕಂಪೇರೇಟೀವ್ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ಈ ಬೆಂಗಳೂರು ಭೂಗತ ಚಟುವಟಿಕೆಗಳ ಒಂದು ಕೇಂದ್ರವಾಗುತ್ತಿದೆ ಎನ್ನತಕ್ಕಂಥ ಮಾತನ್ನು ಏಕೆ ಉಪಯೋಗಿಸಿದರು ಎಂದು ಹೇಳಿದರೆ ತಾವು ಹೇಳುತ್ತಿರತಕ್ಕದ್ದು ನಿಜ. ಪ್ರತ್ಯಕ್ಷವಾಗಲಿ ಅಥವಾ ಪರೋಕ್ಷವಾಗಲಿ ಯಾರೂ ಸಹಿತ ಇದರಲ್ಲಿ ಅಧಿಕಾರದಲ್ಲಿರತಕ್ಕಂಥವರು ಬೆಂಬಲ ಕೊಡುವುದಿಲ್ಲ ಮತ್ತು ಬೆಂಗಳೂರು ಒಂದು ಸುವ್ಯವಸ್ಥೆ, ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗತಕ್ಕಂಥ ನಗರ ಆಗಬೇಕು ಎನ್ನತಕ್ಕದ್ದು ನಮ್ಮೆಲ್ಲರ ಬಯಕೆ. ಇದು ತಾವು ಅಧಿಕಾರಕ್ಕೆ ಬಂದಮೇಲೆ ಆಗಿರತಕ್ಕದ್ದು ಅಲ್ಲ. ತಾವು ಬರುವುದಕ್ಕೆ ಮುಂಚೆ ಸಹ ಇನ್‌ಫಾರ್ಮೇಶನ್ ಅಂಡ್ ಟೆಕ್ನಾಲಜಿ ಇತ್ತು. ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ತಾವು ಕೊಟ್ಟಿದ್ದೀರಿ. ಲಾ ಅಂಡ್ ಆರ್ಡರ್ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿ ಇತ್ತು. ಆದರೆ ಈ ಮಾತನ್ನು ಏಕೆ ಉಪಯೋಗಿಸಿದರು ಎಂದರೆ ತಮ್ಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ತಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಏನು ಹೇಳಿದ್ದೀರಿ ಎನ್ನುವುದನ್ನು ತಾವು ಅಪ್ಪಣೆ ಕೊಟ್ಟರೆ ನಾನು ಹೇಳುತ್ತೇನೆ. ಏನು ಹೇಳಿದ್ದೀರಿ ಎಂದರೆ -

> "..ಜನತಾದಳ ಸರ್ಕಾರದ ಆಡಳಿತದಲ್ಲಿ ಕಾನೂನು ವ್ಯವಸ್ಥೆ ತುಂಬಾ ಕ್ಷೀಣಿಸಿದೆ. ಇದು ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ. ಭೂಗತ ಚಟುವಟಿಕೆಗಳನ್ನು ಹತ್ತಿಕ್ಕಲು ಹಿಂದೆ ನಮ್ಮ ಸರ್ಕಾರ ಕಟ್ಟುನಿಟ್ಟಿನ ನಿಲುವನ್ನು ತಳೆದಿತ್ತು. ಆದರೆ ಇಂತಹ ಚಟುವಟಿಕೆಗಳು ಬೆಂಗಳೂರು ಅಷ್ಟೇ ಅಲ್ಲ, ಹುಬ್ಬಳ್ಳಿ, ಧಾರವಾಡ, ಮಂಗಳೂರಿನಂಥ ನಗರಗಳಿಗೂ ಹಬ್ಬಿ ಒಂದು ಸಾವಿರಕ್ಕಿಂತ ಹೆಚ್ಚಿರುವ ಅಪರಾಧ ಪ್ರಮಾಣದಲ್ಲಿ ಪಾಟ್ನಾ ನಗರದ ನಂತರ ಬೆಂಗಳೂರು ಎರಡನೇ ಸ್ಥಾನದಲ್ಲಿ ವೃದ್ಧಿಸಿರುವುದು ಗಾಬರಿ ಹುಟ್ಟಿಸುವ ವಿಷಯ .."

ಎಂದು ತಾವು ತಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅಂದರೆ ಆರು ತಿಂಗಳಲ್ಲೇ ಇದೆಲ್ಲ ಕಡಿಮೆ ಆಗಿ ಹೋಯಿತಾ ಎಂದು ತಾವು ಹೇಳಿ, ಅಷ್ಟೇ ಸ್ವಾಮಿ.

ಶ್ರೀ ಎಸ್.ಎಂ. ಕೃಷ್ಣ:— ಬೆಂಗಳೂರಿನಲ್ಲಿ 98-99 ಮತ್ತು 2000ದಲ್ಲಿ ಈ ಕೊಲೆಗಳು ಪ್ರತಿ ತಿಂಗಳೂ ನಿಯಮಿತ ಸಂಖ್ಯೆಯಲ್ಲಿ ನಡೆಯುವುದಿಲ್ಲ. ಅದಕ್ಕೆ ಬೇಕಾದಷ್ಟು ಕಾರಣಗಳು ಇರುತ್ತವೆ. ಆದ್ದರಿಂದ ಶಾಂತಿ ಮತ್ತು ಸುವ್ಯವಸ್ಥೆ ಮತ್ತು ಇಂದು ನಗರದಲ್ಲಿ ಎಷ್ಟರಮಟ್ಟಿಗೆ ಕ್ರೈಮ್ ಪ್ರಿವೆನ್‌ಶನ್ ಆಗಿದೆ ಅದರ ಬಗ್ಗೆ ಯೋಚನೆ ಮಾಡಿ ಕಾರ್ಯಕ್ರಮ ರೂಪಿಸಿ ಎಂದು ಅದಕ್ಕೆ ವಿಶೇಷವಾದಂಥ ಮಹತ್ವವನ್ನು ಕೊಡಬೇಕು ಎನ್ನತ್ತಕಂಥ ದೃಷ್ಟಿಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಗಮನಕ್ಕೆ ತಂದು ಇದನ್ನು ಸ್ವರ್ಗ ಮಾಡಬೇಡಿ, ಕ್ರಿಮಿನಲ್‌ಗಳಿಗೆ ನರಕದ ಹಾಗೆ ಮಾಡಿ ಎಂದು ಸೂಚ್ಯವಾಗಿ ಹೇಳಿದ್ದಾರೆ ಎಂದು ನಾನು ಭಾವನೆ ಮಾಡುತ್ತೇನೆ. ಅದಕ್ಕೆ ರಚನಾತ್ಮಕವಾದಂಥ ಸಲಹೆಗಳನ್ನು ಮಾನ್ಯ ವಿರೋಧ ಪಕ್ಷದವರು ಕೊಟ್ಟರೆ ಆ ಸಲಹೆಗಳನ್ನು ನಾವು ಒಪ್ಪಿ ನಾವು ನಮ್ಮ

*5.00* ಪಿ.ಎಂ.

ಕಾರ್ಯಕ್ರಮದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುತ್ತೇವೆ. ಉಗ್ರಗಾಮಿಗಳ ಮೇಲೆ ಸರ್ಕಾರ ನೀಗಾ ವಹಿಸಬೇಕೆಂದು ಹೇಳಿದ್ದಾರೆ, ಅದಕ್ಕೆ ಅಪಸ್ವರ ಬರುವುದಕ್ಕೆ ಸಾಧ್ಯವೇ ಇಲ್ಲ. ಉಗ್ರಗಾಮಿಗಳಿಂದ ಕಾಂಗ್ರೆಸ್ ಪಕ್ಷ, ಕಾಂಗ್ರೆಸ್ ನಾಯಕತ್ವ ಎಷ್ಟು ಬಾಧಿತವಾಗಿದೆ ಎನ್ನತಕ್ಕಂತಾದ್ದು ನಮ್ಮ ಇತಿಹಾಸದ ದಾಖಲೆಗಳಲ್ಲಿ ಈಗಾಗಲೇ ಸೇರಿಹೋಗಿದೆ. ಸ್ವರ್ಗೀಯ ರಾಜೀವ್ ಗಾಂಧಿಯವರನ್ನು ಯಾವ ಸಂಸ್ಥೆಯವರು ಕೊಲೆ ಮಾಡಿದರೋ ಅಂತಹ ಸಂಸ್ಥೆಯವರಿಗೆ ಬೆಂಗಳೂರಿನಲ್ಲಾಗಲೀ ಅಥವಾ ಕರ್ನಾಟಕದಲ್ಲಾಗಲೀ ನಾವು ಆಶ್ರಯವನ್ನು ಕೊಡುತ್ತೇವೆ ಅಥವಾ ಕೊಡತಕ್ಕಂಥ ಮನಸ್ಸನ್ನು ಮಾಡುತ್ತೇವೆಂದು ಯಾರು, ಯಾವ ಬಾಯಲ್ಲಿ ಹೇಳುವುದಕ್ಕಾಗುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ಉಗ್ರಗಾಮಿಗಳು, ಅವರು ಯಾರೇ ಇರಲಿ, ಅವರು ಶ್ರೀಲಂಕಾವಾದಿಗಳು ಇರಲಿ ಅಥವಾ ಐ.ಎಸ್.ಐನವರು ಇರಲಿ ಅಥವಾ ಮತ್ತೊಂದು ರಂಗಿನವರು ಇರಲಿ ಅವರೆಲ್ಲರನ್ನೂ ಮೂಲೋತ್ಪಾಟಣೆ ಮಾಡಬೇಕೆಂದು ಈ ಸರ್ಕಾರದ ಸ್ಥಿರ ಸಂಕಲ್ಪ. ಈ ಸದನದಲ್ಲಿ ನಾನು I say with all the force at my command, we had started operations since day-before-yesterday, to monitor to find out and if any hon.member ಇದರ ಬಗ್ಗೆ ಯಾವುದಾದದರೂ ಕುರುಹುಗಳಿದ್ದರೆ, ಸೂಚನೆಗಳಿದ್ದರೆ ಅಥವಾ ಇದರ ಬಗ್ಗೆ ಸುಳಿವುಗಳು ಸಿಕ್ಕಿದರೆ, ಆ ಸುಳಿವನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ನಾನು ವಿನಮ್ರವಾಗಿ ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ, ಇದು ನಮ್ಮ, ನಿಮ್ಮ ಹಿತದೃಷ್ಟಿಯಿಂದ ಈ ರಾಜ್ಯದಲ್ಲಿ ಈ ಉಗ್ರಗಾಮಿಗಳ ಸೊಲ್ಲು ಸಂಪೂರ್ಣವಾಗಿ ಅಡಗಿ ಹೋಗಬೇಕೆಂದು ಈ ಸರ್ಕಾರದ ಇಷ್ಟಾರ್ಥ, ಈ ಸರ್ಕಾರದ ರಾಜಕೀಯ ಇಚ್ಛೆ. ಅದಕ್ಕೆ ತಾವು ಸ್ಪಂದಿಸಬೇಕೆಂದು ಈ ಸಮಯದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಆ ಸಂಧಾನಕಾರರ ವಿಚಾರ ಇಲ್ಲಿ ಬರುತ್ತದೆ. ನನ್ನ ಸ್ಟೇಟ್‌ಮೆಂಟ್‌ನಲ್ಲಿ ನಾನು ಹೇಳಿದ್ದೇನೆ. ನಾನು ಮೊದಲನೇ ದಿನದಿಂದ ಕೊನೇ ದಿವಸದವರೆಗೂ ಮಾಡಿದ ಕೆಲಸ ಏನು ಎಂದರೆ ಈ ಅಪಹರಣ

ತಮಿಳುನಾಡಿನ ನೆಲದಲ್ಲಿ ನಡೆಯಿತು. ಅಪಹರಣಕಾರರು ಮತ್ತು ಒತ್ತೆ ತೆಗೆದುಕೊಂಡು ಹೋಗಿರತಕ್ಕಂಥ ರಾಜ್‌ಕುಮಾರ್ ಮತ್ತಿತರರು ತಮಿಳುನಾಡಿನ ನೆಲದಲ್ಲಿದ್ದಾರೆ ಎನ್ನತಕ್ಕಂಥಾದ್ದು ಸರ್ವವಿಧಿತವಾದಂಥ ವಿಚಾರ. ಅದನ್ನು ಯಾರೂ ಇಲ್ಲವೆಂದು ಹೇಳತಕ್ಕಂಥ ಮಾತನ್ನು ಇದುವರೆಗೂ ಆಡಿಲ್ಲ. ಇನ್ನು ಮುಂದೆ ಆಡುತ್ತಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅಂದಮೇಲೆ, ಎರಡು ರಾಜ್ಯಗಳ ಮಧ್ಯೆ ಈ ಸಮಸ್ಯೆ ಉದ್ಭವಿಸಿತು. ಯಾರೋ ಒಬ್ಬ ಸದಸ್ಯರು ಹೇಳಿದರು. ಮೊಟ್ಟಮೊದಲನೆಯ ತಪ್ಪು ಮುಖ್ಯಮಂತ್ರಿಗಳು ಮಾಡಿದ್ದು ಏನೆಂದರೆ, ಮದ್ರಾಸಿಗೆ ದೌಡಾಯಿಸಬಾರದಾಗಿತ್ತು ಎಂದು. ಈ ವಿಚಾರದ ಬಗ್ಗೆ ಯಾರಾದರೂ ಸ್ವಲ್ಪ ಕಾಲ ಆಲೋಚನೆ ಮಾಡಿ. ಒಂದು ಪಕ್ಷ ನಾನು ಅಲ್ಲಿಗೆ ಹೋಗಲೇ ಇಲ್ಲವೆಂದಾಗ, ಇವರು ಎಂತಹ ನಾಲಾಯಕ್ ಮುಖ್ಯಮಂತ್ರಿ. ಡಾ: ರಾಜ್‌ಕುಮಾರ್ ಮತ್ತು ಇತರೆ ನಾಲ್ಕು ಜನರನ್ನು ವೀರಪ್ಪನ್ ಕರೆದುಕೊಂಡು ಹೊರಟು ಹೋಗಿದ್ದಾನೆ. ಇವರು ಇನ್ನೂ ಬೆಂಗಳೂರಿನಲ್ಲಿ ಕುಳಿತುಕೊಂಡು ಮೋಜು ಮಾಡುತ್ತಿದ್ದಾರೆ, ಇವರಿಗೇನು ಬಂದಿತ್ತು. ಮದ್ರಾಸಿಗೆ ಹೋಗಿ ಆ ಸರ್ಕಾರದ ಜೊತೆಯಲ್ಲಿ ಮಾತನಾಡಿ, ಆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ರಾಜ್‌ಕುಮಾರ್ ಅವರನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡಬಾರದಾಗಿತ್ತೇ; ಹಾಗೆಂದು ಮಾತನಾಡತಕ್ಕಂಥ ಜನಗಳು ಲಕ್ಷಾಂತರ ಸಂಖ್ಯೆಯಲ್ಲಿ ಇದ್ದಾರೆ ಎನ್ನುವುದನ್ನು ನೀವು ಒಪ್ಪುತ್ತೀರಿ ಎಂದು ಭಾವಿಸುತ್ತೇನೆ. ನನ್ನ ಕಾಮನ್ ಸೆನ್ಸ್‌ಗೆ, ನನ್ನ ವಿಜ್‌ಡಮ್‌ಗೆ ಭಗವಂತ ಎಷ್ಟು ವಿಜ್‌ಡಮ್ ಕೊಟ್ಟಿದ್ದಾನೋ ನನ್ನ ವಿಜ್‌ಡಮ್‌ನಲ್ಲಿ ಮತ್ತು ನಮ್ಮ ಗೃಹಸಚಿವರ ವಿಜ್‌ಡಮ್‌ನಲ್ಲಿ, ನಮಗೆ ಅಡ್ವೈಸ್ ಮಾಡಿದಂಥ ಅಧಿಕಾರಿಗಳ ವಿಜ್‌ಡಮ್‌ನಲ್ಲಿ ನಾವು ತಕ್ಷಣ ಮಾಡಬೇಕಾಗಿರತಕ್ಕಂಥ ಕೆಲಸ ಏನೆಂದರೆ, ಮದ್ರಾಸಿಗೆ ಹೋಗಬೇಕು, ಅಲ್ಲಿಯ ಮುಖ್ಯಮಂತ್ರಿಗಳನ್ನು ಮತ್ತು ಆ ಸರ್ಕಾರವನ್ನು ಕೇಳಬೇಕು, ಅವರ ಕಾರ್ಯಾಚರಣೆಗೆ ನಾವು ಬೆಂಬಲ ಕೊಡಬೇಕು. ಮಾನ್ಯ ಸದಸ್ಯರೊಬ್ಬರು ಹೇಳಿದರು, ತಕ್ಷಣ within 12 hours after you got the message, you should have sent our forces into the forest and captured. Suppose being he devil's advocate ನಾನು ಆರ್ಡರ್ ಮಾಡಿದ್ದೆ. ನಾನು ಮತ್ತು ಹೋಮ್ ಮಿನಿಸ್ಟರು ನಮ್ಮ ಟಾಸ್ಕ್‌ಫೋರ್ಸ್ ಮುಖಂಡರಿಗೆ `go into the jungle, catch hold of Veerappan' ಎಂದು ಹೇಳಿದ್ದರೆ, ಏನಾಗುತ್ತಿತ್ತು? ಮಾನ್ಯ ಸಿಂಧ್ಯರವರು, ಅವರ ಅನುಭವದ ಆಧಾರದ ಮೇಲೆ ಹೇಳುತ್ತಾರೆ, ಆ ಕಾಡಿನಲ್ಲಿ 10 ಅಡಿ ಆಚೆಗೆ ಏನು ನಡೆಯುತ್ತಾ ಇದೆ ಎಂಬುದು ಗೊತ್ತಾಗುವುದಿಲ್ಲವೆಂದು ಹೇಳುತ್ತಾರೆ. ಯಾವ ಭಾಗಕ್ಕೆ ರಾಜ್‌ಕುಮಾರ್ ಅವರನ್ನು ಆ ವೀರಪ್ಪನ್ ಕರೆದುಕೊಂಡು ಹೋಗಿದ್ದಾನೆ, ಯಾವ ತಾಣದಲ್ಲಿ ಅವರನ್ನು ಅಡಗಿಸಿ ಇಟ್ಟಿದ್ದಾನೆ ಎನ್ನತಕ್ಕಂಥ ಬೇಹುಗಾರಿಕೆ ಇಲ್ಲದೆ, ನಾವು ಆಪರೇಷನ್ ಶುರು ಮಾಡಿದರೆ ಅದರಿಂದ ಒಂದು ಪಕ್ಷ ಒತ್ತೆ ತೆಗೆದುಕೊಂಡು ಹೋಗಿರತಕ್ಕ ಯಾರೊಬ್ಬರ ಜೀವಕ್ಕೆ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ, ಅದಕ್ಕೆ

ತಾವೇನು ಹೇಳುತ್ತಿದ್ದಿರಿ? ನೀವು ರಾಜೀನಾಮೆ ಕೊಡಿ ಅಥವಾ ರಾಜೀನಾಮೆ ಕೊಡದೇ ಇದ್ದರೆ ನೀವು ನಾಲಾಯಕ್ಕು ಎಂದು ಹೇಳುತ್ತಿದ್ದರು. ಸ್ವಲ್ಪ ಯೋಚನೆ ಮಾಡಬಾರದೇ, ಏನೋ ಹೇಳುವ ಮಾತನ್ನು ಹೇಳುತ್ತಾರೆ. ನಿನಗೆ ದೇವರು ಬುದ್ಧಿ ಕೊಟ್ಟಿರಲಿಲ್ಲವೇನಯ್ಯ, ನೀನು ಯೋಚನೆ ಮಾಡಬೇಕಾಗಿತ್ತು. ಇದರಿಂದ ಒಳ್ಳೆಯದಾಗುತ್ತದೋ ಅಥವಾ ಕೆಟ್ಟದ್ದಾಗುತ್ತದೋ ಎಂದು ಹೇಳುತ್ತಿದ್ದು. ಅವರವರು ಪಡೆದ ಆಧಾರದ ಮೇಲೆ ಈ ವಿಚಾರಗಳಲ್ಲೆಲ್ಲವೂ ಕೂಡ ಬರುತ್ತವೆ. ವೀರಪ್ಪನ್ ಅಲ್ಲಿಯೇ ಇದ್ದಾನೋ ಅಥವಾ ಎಲ್ಲಿ ಹೋಗಿದ್ದಾನೋ, ಅವನಿಗೆ ನೀವು ಫ್ರೀ ಪ್ಯಾಸೇಜ್ ಕೊಟ್ಟುಬಿಟ್ಟಿರಿ. ಶ್ರೀ ಲಂಕಾಕ್ಕೆ ಹೋಗಿದ್ದಾನೋ ಏನೋ ಈಗಾಗಲೇ 4 ದಿವಸ ಆಯಿತು ಎಂದು ಹೇಳಿದರು, ನನಗೆ ಕರ್ನಾಟಕದ ಬಾರ್ಡರ್ಸ್ ಗೊತ್ತು. ಒಂದು ಕಡೆ ಮಹಾರಾಷ್ಟ್ರದ ಬಾರ್ಡರ್ ಇದೆ, ಇನ್ನೊಂದು ಕಡೆ ಆಂಧ್ರ ಪ್ರದೇಶದ ಬಾರ್ಡರ್ ಇದೆ. ಮತ್ತು ಒಂದು ಕಡೆ ಗೋವಾ ಬಾರ್ಡರ್ ಇದೆ. ಇವಿಷ್ಟು ಬಿಟ್ಟರೆ ಸಮುದ್ರ ಇದೆ. ನಮ್ಮ ರಾಜ್ಯದ ಗಡಿಗಳಿಂದ, ಶ್ರೀ ಲಂಕಾಕ್ಕೆ ಕೂಡಿಸಲಿಕ್ಕೆ ನಾನು ಪಾಸ್‌ಪೋರ್ಟ್ ಅಥಾರಿಟಿಯೇ? ಏನಾದರೂ ಊಹೆ ಮಾಡಿದರೂ ಕೂಡ, ಈ ಟೇಬಲ್ ಮೇಲೆ ಇರಿಸಬಹುದಾದಂಥ ಊಹೆಗಳು ಇರಬೇಕು. ಆದರೆ, ಈ ಊಹೆಗಳನ್ನು ಸೀಲಿಂಗ್‌ನಲ್ಲೂ ಇಡುವುದಕ್ಕಾಗುವುದಿಲ್ಲ. ಅವನು ಶ್ರೀಲಂಕಾಕ್ಕೆ ಹೋಗಿದ್ದಾನೆಯೇ ಹೋಗಲಿ. ಶ್ರೀ ಲಂಕಾಕ್ಕೆ ಹೋದರೆ, ಅದು ಕೇಂದ್ರ ಸರ್ಕಾರದ ಜವಾಬ್ದಾರಿ. ಶ್ರೀ ಲಂಕಾಕ್ಕೆ ಹೋಗಬೇಕಾಗಿದ್ದರೆ, ಅವರಿಗೆ RAW ಇದೆ, ಐ.ಬಿ. ಇದೆ, ವೀರಪ್ಪನ್‌ನ್ನು ಹಿಡಿಯಬೇಕೆಂಬುದು ಈ ಸದನದ ಒಟ್ಟು ಇಚ್ಛೆ. ಆ ಒಂದು ಕಾರ್ಯವನ್ನು ನಾವು ನೆರವೇರಿಸಬೇಕಾಗಿದ್ದರೆ, ಹಿಂದೆ ಹೇಗೆ ತಾವು ಸರ್ಕಾರದ ಜೊತೆಯಲ್ಲಿ ಸಹಕರಿಸಿದಿರೋ ಹಾಗೆಯೇ ಇನ್ನು ಮುಂದಿನ ಕಾರ್ಯಾಚರಣೆಯಲ್ಲೂ ಕೂಡ ಸರ್ಕಾರದ ಜೊತೆ ಸಹಕರಿಸಬೇಕಾಗಿರುವುದು ಬಹಳ ಅಗತ್ಯವಾಗಿದೆ. ಏಕೆಂದರೆ, ಈ ವಿಚಾರದಲ್ಲಿ ಟೋಟಲಿ ಅಪೊಲಿಟಿಕಲ್ ಲೈನ್ ನಾವೆಲ್ಲರೂ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಮ್ಮೆಲ್ಲರ ಭವಿಷ್ಯ, ರಾಜ್ಯದ ಭವಿಷ್ಯ ಇವತ್ತು ಈ ಒಂದು ಇಷ್ಯೂ ಮೇಲೆ ಇದೆ. ಆದುದರಿಂದ ಆ ಸೀಮಿತವಾದ ಕಾನ್‌ಸೆನ್ಸಸ್‌ಗೆ ನಾವು, ನಮ್ಮನ್ನು ಸಿದ್ಧಮಾಡಿಕೊಳ್ಳಬೇಕು ಎಂಬ ಒಂದು ಅಪೀಲನ್ನು ನಾನು ಈ ಸಮಯದಲ್ಲಿ ಮಾಡುತ್ತೇನೆ. ದೊಣ್ಣೆ ಮತ್ತು ಸಂಧಾನ ಎರಡು ಸಂಧಾನದ ಮಾರ್ಗವನ್ನು ನಾನು ಮೊದಲಿನಿಂದಲೂ ನಂಬಿದವನು. ತಾವುಗಳು ಅಂತರಿಕವಾಗಿ ಸಂಧಾನದ ಮಾರ್ಗವನ್ನು ಒಪ್ಪಿದಿರಿ. ಆದುದರಿಂದಲೇ ಯಶಸ್ವಿಯಾದೆವು. ಯಾರಿಂದ ಯಶಸ್ಸು ಆಯಿತು, ರಾಜ್ಯ ಸರ್ಕಾರದಿಂದ ಆಯಿತೋ, ತಮಿಳುನಾಡು ಸರ್ಕಾರದಿಂದ ಆಯಿತೋ ಎಂಬುದು ಇವತ್ತು ಅಪ್ರಕೃತ. ಅಂತೂ ಸಂಧಾನ ಯಶಸ್ವಿಯಾಯಿತು ಎಂಬ ಸಮಾಧಾನ 15ನೇ ತಾರೀಖು ಅಥವಾ 14ನೇ ತಾರೀಖು ರಾತ್ರಿ ಸಿಕ್ಕಿತ್ತು. ಅವರನ್ನು 13ನೇ ತಾರೀಖೇ ಬಿಟ್ಟುಬಿಟ್ಟಿದ್ದ, ನಿಮಗೆ ಗೊತ್ತಾಗಲಿಲ್ಲವೇ ಎಂದು ಹೇಳಿದರು. 15ನೇ ತಾರೀಖು ಬೆಳಿಗ್ಗೆ ನನಗೂ ಆ ಪುಕಾರುಗಳು ಬಂದವು ಅಥವಾ 14ನೇ ತಾರೀಖು

ಅರ್ಧ ರಾತ್ರಿಯಲ್ಲಿ. ಆದರೆ ನನ್ನ ರೆಫರೆನ್ಸ್ ಪಾಯಿಂಟ್ was the Chief Minister of Tamilnadu. Until and unless he confirms it, I could not take up a stand. ಪ್ರಧಾನ ಮಂತ್ರಿಗಳು ಹೇಳಿದರೂ, ಸಂಸತ್ ಸದಸ್ಯರಾದ ಅಂಬರೀಶ್ ಹೇಳಿದರೂ ಸಹ ರಾಜ್ಯ ಸರ್ಕಾರದ ಪರವಾಗಿ ಅಧಿಕೃತವಾದ ಹೇಳಿಕೆಯನ್ನು ಕೊಡಬೇಕಾಗಿದ್ದರೆ ತಮಿಳುನಾಡು ಸರ್ಕಾರದಿಂದ ಅಧಿಕೃತ ಮಾಹಿತಿ ಬಾರದ ಹೊರತು ನಾವು ಮಾಹಿತಿ ಕೊಡಲು ಆತುರರಾಗಿರಲಿಲ್ಲ, ಕೊಡುತ್ತಲೂ ಇರಲಿಲ್ಲ. ಆ ದೃಷ್ಟಿಯಿಂದ ಡಾ: ರಾಜ್‌ಕುಮಾರ್‌ರವರ ಬಿಡುಗಡೆಯ ವಿಚಾರವನ್ನು ರಾಜ್ಯದ ಜನತೆಗೆ, ಈ ಸದನಕ್ಕೆ ತರುವುದರಲ್ಲಿ ಸ್ವಲ್ಪ ನಿಧಾನ ಮಾಡಿದೆವು. ಮಾನ್ಯ ರಾಚಯ್ಯನವರು ಗೃಹ ಸಚಿವರಾಗಿದ್ದಾಗ 1987ರಲ್ಲಿ ವೀರಪ್ಪನ್‌ನನ್ನು ಹಿಡಿದಿದ್ದರು, ಆನಂತರ ಅರಣ್ಯ ಇಲಾಖೆಯ ಗೆಸ್ಟ್‌ಹೌಸ್‌ನಲ್ಲಿ ಇಟ್ಟಿದ್ದರು, ಅಲ್ಲಿಂದ ವೀರಪ್ಪನ್ ತಪ್ಪಿಸಿಕೊಂಡುಬಿಟ್ಟ ಎಂದು ಮಾನ್ಯ ಸೋಮಶೇಖರ್‌ರವರು ಹೇಳಿದರು. ಹಿಡಿದಿದ್ದು ನಿಜ, ತಪ್ಪಿಸಿಕೊಂಡು ಹೋದದ್ದು ನಿಜ, ಆದರೆ ಅದಕ್ಕೆ ಹೊಣೆ ಯಾರು? ಈ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ, ಏಕೆಂದರೆ ಅದಕ್ಕೆ ಸಮರ್ಪಕವಾದ ಉತ್ತರ ಸಿಗುವುದಿಲ್ಲ. ಮತ್ತೆ ಅವನು ಏನು ಮಾಡಿದರೂ ಹೆದರಿಸಬೇಕಾಗಿತ್ತು ಎಂದು ಹೇಳಿದ್ದಾರೆ. ನೀನು ಹುಲಿಯಂತೆ ಅಬ್ಬರಿಸಿದ್ದರೆ ಅಲ್ಲಿ ಡಾ: ರಾಜ್‌ಕುಮಾರ್‌ಗೆ ಚಿತ್ರ ಹಿಂಸೆಯನ್ನು ವೀರಪ್ಪನ್ ಕೊಟ್ಟಿದ್ದರೆ ಅದರ ಜವಾಬ್ದಾರಿಯನ್ನು ಯಾರು ತೆಗೆದು ಕೊಳ್ಳುತ್ತಿದ್ದರು? ಕೆಲವರು ಸಿಂಧ್ಯರವರಂತೆ ಅದೃಷ್ಟಶಾಲಿಗಳು. ಏಕೆಂದರೆ ಅವರು ಗೃಹಸಚಿವರಾಗಿದ್ದಾಗ ಒಂದು ಥ್ರೆಟ್ ಕೊಟ್ಟ ತಕ್ಷಣ ವೀರಪ್ಪನ್ ಆಗ ಬಂಧಿಯಾಗಿಟ್ಟುಕೊಂಡವರನ್ನು ಬಿಟ್ಟುಬಿಟ್ಟಿದ್ದ. ಆದರೆ ನಾವು ನತದೃಷ್ಟರು 108 ದಿವಸ ಕಾಯಬೇಕಾಗಿ ಬಂತು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಕೆಲವು ಸಾರಿ ತಾವು ನಮಗೆ ಕಾಂಪ್ಲಿಮೆಂಟ್ ಕೊಡುತ್ತೀರೋ ವ್ಯಂಗ್ಯ ಮಾಡುತ್ತೀರೋ ಗೊತ್ತಾಗುವುದಿಲ್ಲ. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ತಾವು ಏನು ಹೇಳಿದ್ದೀರೆಂದು ನಾನು ಕೇಳಿದ್ದರೆ ಅದಕ್ಕೆ ತಾವು ಉತ್ತರವನ್ನೇ ಕೊಡುವುದಿಲ್ಲ. ಕಾಂಗ್ರೆಸ್ ಅಧ್ಯಕ್ಷರಾಗಿ ಪಾಂಚಜನ್ಯ ರಥದಲ್ಲಿ ತಾವು ಭರವಸೆಯನ್ನೇನು ಕೊಟ್ಟಿದ್ದಿರಿ ಎಂದು ಕೇಳಿದರೆ ಅದಕ್ಕೆ ಉತ್ತರ ಕೊಡುವುದಿಲ್ಲ. ಇದರ ಬಗ್ಗೆ ಸೋಮಶೇಖರ್‌ರವರನ್ನು, ಜಗದೀಶ್ ಶೆಟ್ಟರ್‌ರವರನ್ನು ಬೊಟ್ಟುಮಾಡಿ ಹೇಳುತ್ತಿರಿ.

ಶ್ರೀ ಎಸ್.ಎಂ.ಕೃಷ್ಣ :— ಮಾನ್ಯ ಅಧ್ಯಕ್ಷರೆ, ಪಾಂಚಜನ್ಯ ರಥ ಕೊಳ್ಳೇಗಾಲಕ್ಕೆ, ಚಾಮರಾಜನಗರಕ್ಕೆ ಹೋಗಲಿಲ್ಲ. ಕೇವಲ ಮೈಸೂರಿನಲ್ಲಿ ಮೂರು ಜಿಲ್ಲೆಗಳ ಸಹಸ್ರಾರು ಕಾಂಗ್ರೆಸ್ಸಿಗರು ಜಮಾಯಿಸಿದ್ದರು. ಕೆಲವರು ಕಾಡಿಗೆ ಹೋಗುತ್ತಾರೆ, ಬರುತ್ತಾರೆ, ಇದೇನು ಎಂದು ಕೇಳಿದ್ದಾರೆ. ಕಾಡಿನ ಒಳಕ್ಕೆ ಹೋಗಲು ಯಾರ ಅನುಮತಿ ಬೇಕು? ಅದೂ ತಮಿಳುನಾಡಿನಲ್ಲಿರುವ ಕಾಡಿಗೆ ಯಾರೋ ಹೋಗುತ್ತಿದ್ದಾರೆ, ಬರುತ್ತಿದ್ದಾರೆ ಎಂದು ಹೇಳಿದ್ದಾರೆ. ತಮಿಳುನಾಡಿನಲ್ಲಿರುವ ಕಾಡಿಗೆ ಸೋಲಿಗರು, ಸೌದೆ ತರುವವರು,

ಭೇಟಿಯಾಗುವುದಕ್ಕೆ ನೂರು ಜನ ಹೋಗುತ್ತಾರೆ ಬರುತ್ತಾರೆ, ಅವರನ್ನೆಲ್ಲ ನಾವು ತಡೆಯಲು ಆಗುತ್ತದೆಯೇ? ಅಥವಾ ಅವರ ಮೇಲೆ ನಿಗಾ ವಹಿಸಲು ಆಗುತ್ತದೆಯೇ? ಇದು ತಮಿಳುನಾಡಿನಲ್ಲಿ ನಡೆಯುತ್ತಿರತಕ್ಕದ್ದು. ಬೆಂಗಳೂರಿನಿಂದ ಎಷ್ಟು ಜನ ಹೋದರು, ಬಂದರು ನೀವು ಕಣ್ಣುಮುಚ್ಚಿ ಕುಳಿತಿದ್ದಿರಿ ಎಂದು ಹೇಳಿದ್ದಾರೆ. ಇದು ಸರಿಯಾದ ವಿಚಾರವಲ್ಲ.

ಶ್ರೀ ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಈ ರೀತಿ ಅಧಿಕಾರಿಗಳ ಸಂಬಂಧವನ್ನು ಇಟ್ಟುಕೊಂಡು ಹೋಗಿರುವುದು ನಮ್ಮ ಸರ್ಕಾರದಲ್ಲೂ ಎಲ್ಲಾ ಸರ್ಕಾರದಲ್ಲೂ ಆಗಿದೆ. ಅವನು ಏನೇನು ಮಾಡುತ್ತಾನೆ, ಅವನ ಹತ್ತಿರ ಯಾವ್ಯಾವ ಅಸ್ತ್ರಗಳು ಇದೆ ಎಂಬ ಬಗ್ಗೆ, ಅವನ ಚಲನ ವಲನಗಳ ಬಗ್ಗೆ 22.5.2000 ರಂದು ಅರ್ಕೇಶ್‌ರವರು ವರದಿಯನ್ನು ಕೊಟ್ಟರು. ಆ ವರದಿಯನ್ನು ನಮ್ಮ ಸರ್ಕಾರದ ಅವಧಿಯಲ್ಲಿ ಕೊಟ್ಟಿಲ್ಲ. ಇದರ ಬಗ್ಗೆ ವಿವರವಾಗಿ ಅಧ್ಯಯನ ಮಾಡಿರುವ ಅಧಿಕಾರಿಯೆಂದರೆ ಅರ್ಕೇಶ್‌ರವರೊಬ್ಬರೇ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಪರ್ಟಿಕ್ಯೂಲರ್ ಆಗಿ ಅದೇ ವಿಭಾಗದಲ್ಲಿ ತರಬೇತಿಯನ್ನು ಪಡೆದುಕೊಂಡು ಬಂದು ಎರಡು ವರ್ಷಗಳು ಕಾಲ ಕೆಲಸ ಮಾಡಿದ್ದಾರೆ. ಆ ವರದಿಯ ಆಧಾರದ ಮೇಲೆ ತಾವು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅರ್ಕೇಶ್‌ರವರನ್ನು ಯಾವ ಕಾರಣಕ್ಕಾಗಿ ವರ್ಗ ಮಾಡಿದರು ಎಂಬ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಶೇಖರ್‌ರವರು ನಮೂದಿಸಿರುವ ಮಾತುಗಳು ಪ್ರಕೃತವಾದದ್ದು. ಒಬ್ಬ ಭಾರತ ಸರ್ಕಾರದ ಅಧಿಕಾರಿಯನ್ನು ಇಷ್ಟು ದಿವಸಗಳು ಕಾಲ ಡೆಪ್ಯುಟೇಷನ್ ಮೇಲೆ ಹೋಗಿ ಕೆಲಸ ಮಾಡಿ ಎಂದು ನಮೂದಿಸಿರುತ್ತಾರೆ. ಅವರ ಡೆಪ್ಯುಟೇಷನ್ ಅವಧಿ ಮುಗಿದಮೇಲೆ ಸ್ವಾಭಾವಿಕವಾಗಿ ಅವರು ಮಾತೃ ಇಲಾಖೆಗೆ ವಾಪಸ್ ಹೋಗುತ್ತಾರೆ. They revert back to their parent department. This is the general practice in Government. Whenever we take somebody on deputation, after the period of deputation is over, he normally gets back to the parent department. ಮೊದಲು ಒಂದು ವರ್ಷದವರೆಗೆ ಅವಕಾಶ ಕೊಟ್ಟಿದ್ದರು. ಅನಂತರ ಆಗಿನ ಸರ್ಕಾರ ಇನ್ನೊಂದು ವರ್ಷ ಮುಂದುವರೆಸಿಕೊಡಿ ಎಂದು ಕೇಳಿಕೊಂಡ ಮೇಲೆ ಮತ್ತೊಂದು ವರ್ಷ ಅವಕಾಶ ಕೊಟ್ಟಿದ್ದರು. ಅಷ್ಟರಲ್ಲಿ ಇವರು ವರದಿಯನ್ನು ತಯಾರು ಮಾಡಿ ತಮ್ಮ ಕೆಲಸ ಕಾರ್ಯದ ಮೇಲೆ ಹೈದ್ರಾಬಾದಿಗೆ ಹೋದರು. ಈ ಮಧ್ಯೆ ನಾನು ಆಕಸ್ಮಿಕವಾಗಿ ಹೈದ್ರಾಬಾದಿಗೆ ಹೋಗಿದ್ದಾಗ ವರ ಜೊತೆ ಈ ವಿಚಾರದಲ್ಲಿ ಎರಡು ಗಂಟೆಕಾಲ ಚರ್ಚೆ ಮಾಡಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಅಪೊಲಿಟಿಕಲ್ ಆಗಿ ತೆಗೆದುಕೊಳ್ಳಬೇಕೆಂದು ನಾನು ಇದ್ದೇನೆ ಮತ್ತು ಮುಂದೆ ಸಹ ಇದರ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಎಷ್ಟು ಕ್ರೆಡಿಟ್ ಇದೆಯೋ ಅಷ್ಟೆ ಕ್ರೆಡಿಟ್ ಅನ್ನು ಬೇರೆ ಪಕ್ಷದವರಿಗೂ ಕೊಡಲು ತಯಾರಿದ್ದೇನೆ ಎಂಬ ಮಾತನ್ನು ಹೇಳಿದ್ದೀರಿ. ತಮ್ಮ ಜೊತೆ ನಾನು ಒಂದು ವಿಚಾರವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಅರ್ಕೇಶ್‌ರವರು ಮತ್ತು ಎಸ್.ಟಿ.ಎಫ್ ಮುಖ್ಯಸ್ಥರಾಗಿರುವ ಹರ್ಷವರ್ಧನರಾಜ್‌ರವರ ನಡುವೆ ಯಾವುದೇ ಕೋ-ಆರ್ಡಿನೇಷನ್ ಇರಲಿಲ್ಲ. ಆದ್ದರಿಂದಲೇ ಅರ್ಕೇಶ್ ವಾಪಸ್ ಹೋದದ್ದು Absolutely there was no co-ordination. I did my best to bring in co-ordination between those two officers, which was not possible. That is why he returned.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅಧ್ಯಕ್ಷರೆ, ಸಾವಿರಾರು ಕೋಟಿ ರೂಪಾಯಿಗಳು ಈ ಮೂರು ತಿಂಗಳ ಅವಧಿಯಲ್ಲಿ ಸರ್ಕಾರಕ್ಕೆ ನಷ್ಟವಾಯಿತು ಎಂಬ ಮಾತನ್ನು ಮಾನ್ಯ ಸೋಮಶೇಖರ್‌ರವರು ಹೇಳಿದರು. ಮೊನ್ನೆ ಪೂರಕ ಬೇಡಿಕೆಯನ್ನು ಮಂಡಿಸಿದ ಸಂದರ್ಭದಲ್ಲಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. Upto October, the revenue collections - sales tax, entertainment tax, agricultural income tax, entry tax, luxury tax, state excise, motor vehicles tax stamp and registrtation, electricity dues, land revenue, - percentage wise, it is 41% in the year 1998. ೧೯೯೮ರಲ್ಲಿ ೪೧ ಪರ್ಸೆಂಟ್ ಇದ್ದರೆ, ೧೯೯೯ರಲ್ಲಿ ೪೯ ಪರ್ಸೆಂಟ್ ಆಯಿತು. ಈಗ ಅಕ್ಟೋಬರ್‌ಗೆ ೫೨ ಪರ್ಸೆಂಟ್ ಆಗಿದೆ ಇದು ಎಲ್ಲಾ ಸೇರಿ ಒಟ್ಟು...

ಶ್ರೀ ಬಿ. ಸೋಮಶೇಖರ್ :— ತಾವುಗಳು ಸಂಪೂರ್ಣವಾಗಿ ಒಂದು ವರ್ಷದ್ದು ಹೇಳುತ್ತಾ ಇದ್ದೀರಿ.

Sri S.M. Krishna :— If there is steep fall in the month of September, Octoberm naturally it is reflected in this percentage. These figures do convey a special message and that message is - yes, perhaps if this were not to be there, we would have gone upto 54-55 percent. We perhaps could have gone up. That is again in the realm of affairs. The point that I am trying to make out is that inspite of the crisis, we have been able to generate the increased revenue. If it was reflecting decreased revenue, certainly you had a point and that point would have caused a considerable alarm. ಇನ್ನು ರಾಜ್‌ಕುಮಾರ್‌ರವರ ಬಿಡುಗಡೆಯಲ್ಲಿ

ಸಂಧಾನಕಾರರ ಪಾತ್ರ. ಈ ಸದನದ ಮೊದಲನೇ ದಿವಸದ ಡಿಬೇಟ್‌ನಲ್ಲಿ ನಾನು ಹೇಳಿದ್ದೆ. ಯಾರ್‍ಯಾರು ಈ ವಿಚಾರದಲ್ಲಿ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಸಹಾಯ ಮಾಡಿದ್ದಾರೋ, ಅವರೆಲ್ಲರನ್ನೂ ನಾನು ಸ್ಮರಿಸುತ್ತೇನೆ, ಅವರೆಲ್ಲರಿಗೂ ನಾನು, ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದ್ದೇನೆ. ಕೇಂದ್ರ ಸರಕಾರ, ತಮಿಳುನಾಡಿ ಸರಕಾರ, ಅಧಿಕೃತವಾಗಿ ನಮ್ಮ ಕಾಗದವನ್ನು ತೆಗೆದುಕೊಂಡು ಹೋಗಿದ್ದಂಥ ಸಂಧಾನಕಾರರು, ಮುಂತಾಗಿ ಇವರೆಲ್ಲರಿಗೂ ಕೂಡ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸಿದ್ದೇನೆ. ಆದರೆ ಇವರು ಏಕೆ ಹೋದರು? ಅವರು ಏಕೆ ಹೋದರು? ಎಂದು ಕೆಲವು ಮಾನ್ಯರುಗಳು ಕೇಳಿದ್ದಾರೆ. ಅವರು ಯಾರೂ ನನ್ನ ಪರ್ಮಿಶನ್‌ನ್ನು ಕೇಳಿ ಹೋಗಬೇಕಾಗಿಲ್ಲ. ಮಾನವೀಯತೆಯ ದೃಷ್ಟಿಯಿಂದ ನಾನು ಕೆಲಸ ಮಾಡುತ್ತೇನೆ, ಮುಂದಕ್ಕೆ ಹೋಗುತ್ತೇನೆ ಎಂದರೆ, ನೀವೇ ನನ್ನ ಸ್ಥಾನದಲ್ಲಿದ್ದರೆ, ನೀವು ಹೋಗಬೇಡಿ, ಮಾನವೀಯತೆಯ ದೃಷ್ಟಿ ಬೇಡ, ನೀವು ನಿಮ್ಮ ಮನೆಯಲ್ಲಿರಿ ಎಂದು ಹೇಳುತ್ತಿದ್ದೀರಾ? ಹೀಗೆ ಈ ಬಿಡುಗಡೆಯಲ್ಲಿ ಬಹಳ ಜನರು ನಮಗೆ ಸಹಾಯವನ್ನು ಮಾಡಿದ್ದಾರೆ. ರಾಜ್‌ಕುಮಾರ್ ಪರಿವಾರದವರು, ರಾಜ್‌ಕುಮಾರ್ ಅಭಿಮಾನ ಸಂಘದವರು ಚಲನಚಿತ್ರ ಫೆಡರೇಷನ್‌ನವರು - ಮುಂತಾಗಿ ಇವರೆಲ್ಲರೂ ಕೂಡ ತಮ್ಮದೇ ಆದಂಥ ಕೊಡುಗೆಯನ್ನು ರಾಜ್‌ಕುಮಾರ್ ಬಿಡುಗಡೆಯ ವಿಚಾರದಲ್ಲಿ ಕೊಟ್ಟಿದ್ದಾರೆ ಎಂಬುದನ್ನು ಇವೊತ್ತು ನಾವು ಹೇಳುತ್ತಾ ಇದ್ದೇವೆ. ನಿವೃತ್ತ ಪೊಲೀಸ್ ಅಧಿಕಾರಿಗಳ ವಿಚಾರವನ್ನು ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. 1991-92ರಲ್ಲಿ ರಾಮಲಿಂಗಂರವರು ಬೆಂಗಳೂರಿನ ಪೊಲೀಸ್ ಕಮಿಶನರ್ ಆಗಿದ್ದರು. ಅವರು ಪೊಲೀಸ್ ಕಮಿಶನರ್ ಆಗಿದ್ದ ಕಾಲದಲ್ಲಿಯೇ ಕೋಣನಕುಂಟೆಯಲ್ಲಿ ಶಿವರಸನ್ ಅನ್ನು ಹಿಡಿದರು. ಯಾರು ರಾಜೀವ್ ಗಾಂಧಿಯವರನ್ನು ಕೊಲೆ ಮಾಡಿದಂಥವರನ್ನು ಹಿಡಿದರೋ ಅಂಥವರು ಮಾನವೀಯತೆಯ ದೃಷ್ಟಿಯಿಂದ ನಾವು ನಮ್ಮ ಕೈಲಾದುದನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದರೆ ಅವರನ್ನು ದೇಶದ್ರೋಹಿಗಳು ಎಂದು ನಾವು ಕರೆದರೆ, ಅಷ್ಟು ಸುಲಭವಾಗಿ ಹೇಳುವುದಾದರೆ ಇದಕ್ಕೆ ಏನಾದರೂ ತಾಳಮೇಳ ಇದೆಯೇನು? ಇದು ಸರಿಯೇ? ಅವೊತ್ತು ರಾಮಲಿಂಗಂರವರು ಏನು ಬೇಕಾದರೂ ಆಗಬಹುದಾಗಿತ್ತು. ದೆಹಲಿಯಿಂದ ಕಿರಣ್‌ಶಂಕರ್ ಮುಂತಾದವರು ಐಬಿ ಇಲಾಖೆಯಿಂದ ಉನ್ನತ ಅಧಿಕಾರಿಗಳು ಬಂದಿದ್ದರು. ಕಾರ್ತಿಕೇಯನ್‌ರವರು ಮತ್ತು ಅವರಿಗಿಂತ ಉನ್ನತ ಅಧಿಕಾರಿಯವರು ಕೂಡ ದೆಹಲಿಯಿಂದ ಬಂದಿದ್ದರು. ಕಾರ್ತಿಕೇಯನ್‌ರವರು ಟಾಸ್ಕ್ ಫೋರ್ಸ್‌ನ ಮುಖ್ಯಸ್ಥರಾಗಿದ್ದರು. ಹೀಗೆ ಅವರೆಲ್ಲರ ಒಟ್ಟು ಪ್ರಯತ್ನದಿಂದ ಆವೊತ್ತು ಅವರನ್ನು ಹಿಡಿಯುವುದಕ್ಕೆ ಸಾಧ್ಯವಾಯಿತು. ಹಾಗೆಯೇ ಶ್ರೀನಿವಾಸಲು ಅವರು ಇತ್ತೀಚಿನ ದಿವಸಗಳಲ್ಲಿ ನಿವೃತ್ತರಾಗಿದ್ದಂಥವರು. ಅವರುಗಳು ನಾವು ಚೆನ್ನೈಗೆ ಹೋಗುತ್ತೇವೆ, ಮತ್ತೊಂದು ಕಡೆಗೆ ಹೋಗುತ್ತೇವೆ, ನಾವು ಕರ್ನಾಟಕದ ಉಪ್ಪು ತಿಂದಿದ್ದೇವೆ, ನಮ್ಮ ಕೈಲಾದ ಋಣವನ್ನು ತೀರಿಸುತ್ತೇವೆ ಎಂದು ಹೇಳಿ, ಅವರು ಹೋದ ಮಾತ್ರಕ್ಕೆ ಅವರು ವಿಚಿದ್ರಕಾರಕ ಶಕ್ತಿಗಳೊಂದಿಗೆ ಶಾಮೀಲಾಗಿ ಈ ರಾಜ್ಯವನ್ನು ಅಪರಾಧಿಗಳ, ಕ್ರಿಮಿನಲ್‌ಗಳ

ತಾಣವನ್ನಾಗಿ ಮಾಡುತ್ತಿದ್ದಾರೆ ಎಂದಿತ್ಯಾದಿಯಾಗಿ ವಿಶ್ಲೇಷಣೆ ಮಾಡತಕ್ಕಂಥಾದ್ದು ಸರಿಯೇ ಎಂದು ಕೇಳಬಯಸುತ್ತೇನೆ. ನಿಜ, ನಾನು ಮತ್ತು ಗೃಹ ಸಚಿವರು ಅವರ ಫೇರ್‌ವೆಲ್ ಫಂಕ್ಷನ್ ದಿವಸ ಹೋಗಿದ್ದಾಗ ಅವರು ಒಂದು ಮಾತನ್ನು ಹೇಳಿದ್ದರು. ವೀರಪ್ಪನ್‌ನ್ನು ಹಿಡಿಯಲು ಸಾಧ್ಯವಾಗಲಿಲ್ಲವಲ್ಲ ಎಂಬ ಒಂದು ಚಿಂತೆಯಿಂದ ಕೊರಗಿನಿಂದ ನಾನು ಇವೊತ್ತು ನಿವೃತ್ತನಾಗುತ್ತಿದ್ದೇನೆ ಎಂದು ಹೇಳಿದ್ದರು. ಹಾಗೆ ನೊಂದಿರತಕ್ಕಂಥ ಮನುಷ್ಯ ಆ ಮಾತುಗಳನ್ನು ಹೇಳುತ್ತಿರಬೇಕಾದರೆ ನಾವು ಅಂಥವರ ಮೇಲೆ ಗೂಬೆ ಕೂರಿಸುವುದು ಸರಿಯೇ ಎಂಬ ವಿಚಾರವನ್ನು ಸದನದ ತೀರ್ಮಾನಕ್ಕೆ ಬಿಡುತ್ತೇನೆ. ವೀರಪ್ಪನ್ ವಿಚಾರದಲ್ಲಿ, ವ್ಯವಹಾರದಲ್ಲಿ ಹಿಂದಿನ ಸರಕಾರದ ನಿಲುವು ಏನಿತ್ತು ಎಂಬ ವಿಚಾರ ಆಗಿಂದಾಗ್ಗೆ ಚರ್ಚೆಗೆ ಬರುತ್ತಾ ಇತ್ತು. ತಮಿಳುನಾಡು ಸರಕಾರದವರು ಈ ವಿಚಾರದಲ್ಲಿ ಏನು ಹೇಳಿದ್ದಾರೆ ಎಂಬುದಕ್ಕೆ ಈ ಸರಕಾರದವರು ಯಾವುದೇ ರೀತಿಯಲ್ಲಿ ಜವಾಬ್ದಾರರಲ್ಲ. I do not share his perspective, let me go on record. Whatever he has said on the floor of the House there. I would like to say, we do not agree, we do not share his perspective. Then, under particular circumstances, you will have to take some position. ಏಕೆಂದರೆ ಇವೊತ್ತು ದೊಡ್ಡವರನ್ನು ಹಿಡಿದುಕೊಂಡು ಹೊರಟು ಹೋಗಿದ್ದರು. ಆದ್ದರಿಂದ ದೊಡ್ಡ ಪ್ರಮಾಣದ ಸಮಸ್ಯೆಗಳು ಶುರುವಾಯಿತು. ಆದರೆ ಅವೊತ್ತು ಹತ್ತು ಜನ ಫಾರೆಸ್ಟ್ ಆಫೀಸರ್‌ಗಳು ಹೋದರು. ಅವರೆಲ್ಲರೂ ಸಣ್ಣ ಸಣ್ಣ ಆಫೀಸರ್‌ಗಳು ಆದುದರಿಂದ ನಿಮಗೆ ಸಣ್ಣ ಪ್ರಮಾಣದ ಸಮಸ್ಯೆಗಳು ಉದ್ಭವವಾಗಿದ್ದವು. ಆ ಸಮಯದಲ್ಲಿ ನೀವು ಎಂದು ಸೂತ್ರಗಳನ್ನು ಮಾಡಿಕೊಂಡು ಬಂದಿದ್ದೀರಿ. ಆ ಎಂಟು ಸೂತ್ರಗಳ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿಗಳು ಇವೆ. ಈ ಎಲ್ಲಾ ಸೂತ್ರಗಳು ಈ ರಾಜ್ಯದ ಹಿತದೃಷ್ಟಿಯಿಂದ ನೀವು ಮಾಡಿಕೊಂಡು ಬಂದ ಸೂತ್ರಗಳು ಎನ್ನತಕ್ಕಂಥಾದ್ದನ್ನು ದೃಢಪಡಿಸಲಿಕ್ಕೆ ನಾನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ. ಹೀಗೆ ನೀವು ಮಾಡಿಕೊಂಡಂಥ ಒಪ್ಪಂದದಲ್ಲಿ ನಾನು ಯಾವ ತಪ್ಪನ್ನು ಕೂಡ ಕಾಣುತ್ತಿಲ್ಲ. ಬಹುಶ: ನಾನೇ ಆಗ ಮುಖ್ಯಮಂತ್ರಿಯಾಗಿದ್ದರೂ ಕೂಡ ಇದಕ್ಕೆ ನನ್ನ ಹಸ್ತಾಕ್ಷರವನ್ನು ಹಾಕುತ್ತಿದ್ದೆ. ಕೆಲವರು ಈಗಲೂ ಕೂಡ ಹೇಳಬಹುದು. A rehabilitation package for Veerappan and his relatives should be considered sympathetically. It is as vague as we ನಾವು ಇಲ್ಲಿ ಉತ್ತರಗಳನ್ನು ಕೊಡುತ್ತೇವಲ್ಲ ಸಿಂಪಥೆಟಿಕ್ ಆಗಿ ಪರಿಶೀಲಿಸುತ್ತೇವೆ ಎಂದು ಹೇಳುತ್ತೇವಲ್ಲ Government of Karnataka will not demand the presence of Veerappan in Karnataka in any reasons.

Sri PGR Scindia :— I have already read out those conditions.

Sri. S.M. Krishna :— Therefore, no two situations are similar or can be similar. There can be some similarities, but they are not identical. In that view, to find holes in that would not be statesman like. I would like to endorse whatever decisions you and your Government took at that point of time. What was the objective? To get the release of those 10 forest officers. If I have conceded some points here, what was my objectives? To get Dr. Rajkumar and three others back in Karnataka. Those are convergence of objectives. What was your objective was our objective till the 15th. But let us look into the future. ಇವೊತ್ತೂ ಅದನ್ನೇ ಹೇಳಿದ್ದೇನೆ. ಯಾರು ಬಂದರು, ಯಾರು ಹೋದರು,

*5.30 ಪಿ.ಎಂ.*

ಹೇಗೆ ಹೋದರು, ಹೇಗೆ ಬಿಡಿಸಿಕೊಂಡು ಬಂದರು ಎಂದು ಜನಗಳು ನಮ್ಮನ್ನು ಕೇಳುತ್ತಿದ್ದಾರೆ ಹಾಗೆ ಹೀಗೆ ಎಂದು ಹೇಳಿದರು. ಆದಕ್ಕೆ ಮೊದಲೇ ಹೇಳಿದೆ, ಜನಗಳು ನಮ್ಮನ್ನು ಕೇಳುತ್ತಿದ್ದಂಥ ಪ್ರಶ್ನೆ ಒಂದೇ ಒಂದು. ಏನು ಎಂದರೆ ಡಾ: ರಾಜ್‌ಕುಮಾರ್‌ರವರನ್ನು ಮೊದಲು ತಂದು ನಮ್ಮ ವಶಕ್ಕೆ ಕೊಟ್ಟುಬಿಡಿ ಎಂದು. ಆ ಕೆಲಸವನ್ನು ನಿಮ್ಮ ಆಶೀರ್ವಾದದಿಂದ, ಈ ಕರ್ನಾಟಕ ಜನತೆಯ ಆಶೀರ್ವಾದದಿಂದ, ಕೇಂದ್ರ ಸರ್ಕಾರದ ಸಹಾಯದಿಂದ, ತಮಿಳುನಾಡಿನ ಸರ್ಕಾರದ ಸಹಾಯದಿಂದ ಈ ಕೆಲಸವನ್ನು ಮಾಡಿದೆವು. ಯಾರೋ ಒಬ್ಬ ಮಾನ್ಯ ಸದಸ್ಯರು ಹೇಳಿದರು, ಉರುಳು ಸೇವೆ ಮಾಡಿದರು, ದೇವಸ್ಥಾನಗಳಿಗೆ ಹೋದರು ಎಂದು.

ಶ್ರೀ ಬಿ. ಸೋಮಶೇಖರ್ :— ಆದಕ್ಕಾಗಿಯೇ ಮಹದೇಶ್ವರ ಬೆಟ್ಟದಲ್ಲಿ ಪೂಜೆ ನಡೆಯಿತು.

ಶ್ರೀ ಎಸ್.ಎಂ. ಕೃಷ್ಣ :— ಉರುಳು ಸೇವೆ ಏತಕ್ಕೆ ಮಾಡಿಸಿದಿರಿ, ಜನಗಳನ್ನು ದೇವಸ್ಥಾನಗಳಿಗೆ ಕಳುಹಿಸಿದಿರಿ ಎಂದರೆ ದೇವಸ್ಥಾನಕ್ಕೆ ಹೋಗಬೇಡಿ ಎಂದು ನಾನು ಪೋಲೀಸರನ್ನು ಕಳುಹಿಸಲೇನು? ಜನರು ತಾವು ದೇವಸ್ಥಾನಕ್ಕೆ ಹೋಗುತ್ತೇವೆ ಎಂದು ಹೇಳಿದರೆ, ಜನರು ನಾವು ಯಜ್ಞ ಮಾಡುತ್ತೇವೆ, ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಬೆಂಕಿ ಹಾಕುವ ಬದಲು ನಾವು ಯಜ್ಞ ಮಾಡುತ್ತೇವೆ ಎನ್ನುವ ಜನರನ್ನು ನಾವು ಬಿಟ್ಟರೆ ನೀವು ಅದನ್ಯಾಕೆ ಮಾಡಿದಿರಿ ಎಂದು ಕೇಳಿದರೆ ನಾನೇನು ಹೇಳಲಿ. ಆದ್ದರಿಂದ ಮಹಾ ಜನತೆಯು ದೇವಸ್ಥಾನಗಳಿಗೆ ಮಸೀದಿಗಳಿಗೆಲ್ಲಾ ಹೋದರು, ಚರ್ಚ್‌ಗಳಿಗೆ ಹೋದರು. ಕೆಲವರು ನಾಸ್ತಿಕರು ಇರಬಹುದು, ಅವರುಗಳು ದೇವಸ್ಥಾನಕ್ಕೆ, ಮಸೀದಿಗಳಿಗೆ, ಚರ್ಚ್‌ಗೆ ಗುರುದ್ವಾರಕ್ಕೆ ಎಲ್ಲಿಗೂ ಹೋಗುವುದಿಲ್ಲ. ಅಂಥವರನ್ನು ನಾನು ಬದಲಾವಣೆ ಮಾಡುವುದಿಲ್ಲ.

ಯಾರು ಗುರುದ್ವಾರಕ್ಕೆ, ಚರ್ಚ್‌ಗೆ, ಮಸೀದಿಗಳಿಗೆ ಹೋಗುತ್ತೇವೆ ಎಂದು ಹೇಳುತ್ತಾರೆ, ಅವರಿಗೆ ನಾನು ಕೇಳತಕ್ಕಂಥದ್ದು ನನಗೂ ಸ್ವಲ್ಪ ಪ್ರಾರ್ಥನೆ ಮಾಡು, ಕರ್ನಾಟಕ ರಾಜ್ಯಕ್ಕೂ ಕೂಡ ಸ್ವಲ್ಪ ಪ್ರಾರ್ಥನೆ ಮಾಡಪ್ಪ ಎಂದು ಹೇಳಿದೆ ಅಷ್ಟೆ.

ಶ್ರೀ ಬಿ. ಸೋಮಶೇಖರ್ :— ತಾವು ಈ ಸದನದ ನಾಯಕರಾದ ರಾಜ್ಯದ ನಾಯಕರು. ಒಬ್ಬ ನಾಯಕರೇ ಈ ವಿಚಾರದಲ್ಲಿ ಬೆಟ್ಟಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಪ್ರಸಾದವನ್ನು ಪಾರ್ವತಮ್ಮನವರ ಹತ್ತಿರ ಕೊಟ್ಟರೆ ಇನ್ನು ಎಲ್ಲರೂ ಮಾಡುವುದರಲ್ಲಿ ಏನಿದೆ? ಅವರೆಲ್ಲರೂ ತಮ್ಮನ್ನು ಫಾಲೋ ಮಾಡಿದರು ಅಷ್ಟೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಾವು ಇಷ್ಟು ಹೊತ್ತು Massachussets ಇನ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಬಗ್ಗೆ ಮಾತನಾಡಿದಿರಿ. ಮತ್ತೆ ಇದೆಲ್ಲಾ ಕೂಡ ವೈಜ್ಞಾನಿಕವಾಗಿ ಮುಂದುವರಿಯಬೇಕು ಎಂದು ತಾವು ಬಹಳ ಆಸಕ್ತಿಯನ್ನು ತೋರಿಸುತ್ತಿದ್ದೀರಿ, ಅದೆಲ್ಲಾ ಸಂತೋಷ. ನಮ್ಮ ಚರಿತ್ರೆಯಲ್ಲಿ ನಮೂದಾಗಿರತಕ್ಕ ಒಂದು ಘಟನೆ ಜ್ಞಾಪಕಕ್ಕೆ ಬರುತ್ತದೆ. ಸೋಮನಾಥ ದೇವಸ್ಥಾನಕ್ಕೆ ಘಜನಿ ಮೊಹಮದ್, ಘೋರಿ ಮಹಮದ್ ಅಲ್ಲಿ ಟನ್ ಗಟ್ಟಲೆ ಬಂಗಾರ ಇದೆ ಎಂದು ತಿಳಿದುಕೊಂಡು ಅಲ್ಲಿಂದ ದಂಡೆತ್ತಿ ದೇವಸ್ಥಾನವನ್ನು ಲೂಟಿ ಮಾಡುತ್ತೇನೆ ಎಂದು ಹೇಳಿಕೊಂಡು ಬರುತ್ತಾನೆ. ಆ ರೀತ ಬರುತ್ತಿದ್ದಂಥ ಕಾಲದಲ್ಲಿ ನಮ್ಮ ದೇಶದ ಪಂಡಿತರು, ಕೆಲವರು ದೇವಸ್ಥಾನಕ್ಕೆ ಮಡಿಪಂಚೆಯನ್ನು ಕಟ್ಟಿದ್ದರಂತೆ, ಅವರು ಹೇಗೆ ಮಡಿ ಪಂಚೆಯನ್ನು ಮುಟ್ಟುತ್ತಾರೋ ನೋಡೋಣ ಎಂದು. ಮಡಿಪಂಚೆಯಿಂದ ದೇವಸ್ಥಾನವನ್ನು ಮುಚ್ಚಿರುವಾಗ ಅವರು ಹೇಗೆ ಮುಟ್ಟುತ್ತಾರೆ? ಆ ರೀತಿ ಮುಟ್ಟಿದರೆ ಅವರು ನೆಗೆದುಬಿದ್ದು ಸಾಯುತ್ತಾರೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡು ದೇವಸ್ಥಾನಕ್ಕೆ ಮಡಿ ಪಂಚೆಯನ್ನು ಕಟ್ಟಿದರು. ಅವರು ಟನ್ ಗಟ್ಟಲೆ ಇದ್ದ ಬಂಗಾರವನ್ನು ದೋಚಿಕೊಂಡು ಹೋದರು. ನೀವು ಕೂಡ ಅದೇ ರೀತಿಯಲ್ಲಿ ನೀವು ತಮಿಳುನಾಡಿಗೆ ಹೋದಿರಿ, ಸಂತೋಷ. ಅದನ್ನು ಮಾಡಬೇಕಾಗಿರುವ ಕೆಲಸ. ತಮಿಳು ನಾಡಿಗೆ ಹೋಗಿದ್ದು ತಪ್ಪು, ಅಲ್ಲಿನ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದು ತಪ್ಪು ಎಂದು ಯಾರಾದರೂ ಹೇಳಿದರೆ ಅಂಥ ಮೂರ್ಖರು ಇಲ್ಲ ಎಂದು ನನ್ನ ಅಭಿಪ್ರಾಯ. ನನ್ನ ವೈಯಕ್ತಿಕವಾದ ಅಭಿಪ್ರಾಯ ಕೂಡ. ನೀವೇನು ಕಾರ್ಯಚಟುವಟಿಕೆಯನ್ನು ಮಾಡಬೇಕೋ ಅದನ್ನು ಮಾಡಿದ್ದೀರಿ. ಅದರ ಬಗ್ಗೆ ನಮಗೆ ತೃಪ್ತಿ ಇದೆ. ಆದರೆ ನೀವು ದೇವಸ್ಥಾನಕ್ಕೆ ಇಲ್ಲಿಂದ ಮಹದೇಶ್ವರ ಬೆಟ್ಟಕ್ಕೆ ಹೋಗಿ ಅಲ್ಲಿ ಪೂಜೆ ಮಾಡಿಸಿ ಪ್ರಸಾದವನ್ನು ಹೊತ್ತುಕೊಂಡು ತಾವೇ ಅವರ ಮನೆಗೆ ಹೋಗಿ ಕೊಟ್ಟುಬರುತ್ತೀರಿ ಎಂದರೆ ಹೇಗೆ? ಏಕೆ ಸ್ವಾಮಿ, ಮಹದೇಶ್ವರ ಬೆಟ್ಟಕ್ಕೆ ಹೋದಿರಿ? ಬೇರೆ ದೇವಸ್ಥಾನಗಳು ಇರಲಿಲ್ಲವೋ? ರಾಜ್ಯದಲ್ಲಿ ಎಲ್ಲೂ ಇಲ್ಲವೋ? ಬೆಂಗಳೂರಿನಲ್ಲಿ ಇಲ್ಲವೋ? ಕಾಶಿ ವಿಶ್ವನಾಥನ ದೇವಸ್ಥಾನ ಇರಲಿಲ್ಲವೋ? ಈ ರೀತಿಯಾಗಿ ಅವೈಜ್ಞಾನಿಕವಾಗಿರುವಂಥದ್ದಕ್ಕೆ

*(ಗೊಂದಲ)*

ನೀವೇ ಮುಂದಾಗಿದ್ದೀರಿ. ಹಿಂದಿನ ಕಾಲದಲ್ಲಿ ಸೋಮನಾಥ ದೇವಸ್ಥಾನಕ್ಕೆ ಏನು ಗತಿ ಬಂತು ಎಂಬುದು ಗೊತ್ತು. ನೀವು ಅದಕ್ಕೆ ಒಬ್ಬ ಮುಖ್ಯಮಂತ್ರಿಗಳಾಗಿ ಸರ್ಕಾರ ಎನ್ನತಕ್ಕದ್ದಕೆ ವರ್ಣ ಇಲ್ಲ, ಜಾತಿ ಇಲ್ಲ, ಆದರೆ ನೀವು ಸರ್ಕಾರದ ಮುಖ್ಯ ಮಂತ್ರಿಗಳಾಗಿದ್ದುಕೊಂಡು ನೀವೇ ದೇವಸ್ಥಾನಕ್ಕೆ ಹೋಗಿ ಬರುತ್ತೀರಿ ಎಂದರೆ ಇದರ ಬಗ್ಗೆ ಜನಗಳು ಏನು ತಿಳಿದುಕೊಳ್ಳುತ್ತಾರೆ? ಬೇರೆಯವರು ಉರುಳು ಸೇವೆ ಮಾಡುತ್ತಾರೋ? ದೇವಸ್ಥಾನಕ್ಕೆ ಹೋಗುತ್ತಾರೋ ಅದು ವೈಯಕ್ತಿಕವಾದಂಥ ವಿಚಾರ. ಅವರವರ ವೈಯಕ್ತಿಕವಾದಂಥ ವಿಚಾರ. ನೀವು ದೇವಸ್ಥಾನಕ್ಕೆ ಹೋದರೆ ಅದು ನಿಮ್ಮ ವೈಯಕ್ತಿಕವಾದಂಥ ವಿಚಾರ. ನೀವು ಹೋಗತಕ್ಕದ್ದು, ನಂಬಿಕೆ ಇಡತಕ್ಕದ್ದು, ಬಿಡತಕ್ಕದ್ದು, ಅದು ನಿಮ್ಮದೂ ಸಹ ವೈಯಕ್ತಿಕವಾದ ವಿಚಾರ. ಆದರೆ ಒಬ್ಬ ಮುಖ್ಯಮಂತ್ರಿಯಾಗಿ ನೀವು ಈ ರೀತಿ ಕೆಲಸವನ್ನು ಮಾಡುತ್ತೀರಿ ಎಂದರೆ ಏನು ಇದಕ್ಕೆ ಅರ್ಥ? ಇದು ಯಾವ ವೈಜ್ಞಾನಿಕವಾಗಿರುವ ಹೆಜ್ಜೆ? ತಾವೇ ಆ ರೀತಿಯಾದಂಥ ಹೆಗ್ಗುರುತನ್ನು ಹಾಕಿದರೆ ಸಾಮಾನ್ಯ ಜನರು ಏನಾಗುತ್ತಾರೆ? ಅವರು ಇನ್ನು ಕೂಡ ಮೂಢನಂಬಿಕೆಗಳಲ್ಲಿ ಅವರ ಬಲ ಹೆಚ್ಚಿಗೆ ಆಗುತ್ತದೆಯೇ ವಿನಹಾ ಮೂಢ ನಂಬಿಕೆಗಳಿಗೆ ತಾವು ಪಂಕ್ತಿಯನ್ನು ಹಾಕಿಕೊಟ್ಟಿದ್ದೀರಿ ಎನ್ನುವುದನ್ನು ನಾವು ಮರೆಯುವ ಹಾಗಿಲ್ಲ.

ಶ್ರೀಮತಿ ಮೋಟಮ್ಮ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ. ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ತಿರುಪತಿಗೆ ತುಂಬಾ ಹೋಗುತ್ತಾರಂತೆ. ಅಲ್ಲೇ ಮಾರಮ್ಮನ ಗುಡಿಗೆ ಏಕೆ ಹೋಗಬಾರದು ಎಂದು ಅವರಿಗೆ ಕೇಳಬಹುದಲ್ಲಾ?

ಶ್ರೀಮತಿ ನಫೀಸಾ ಫಜಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಎಲ್ಲರಿಗೂ ದೇವರ ಮೇಲೆ ಹೆಚ್ಚು ವಿಶ್ವಾಸವಿರುತ್ತದೆ.

ಶ್ರೀ ಭಕ್ತವತ್ಸಲಂ :— ಮಾನ್ಯ ಅಧ್ಯಕ್ಷರೇ, ಮಹದೇಶ್ವರ ಟೆಂಪಲ್ ಇರುವುದು ಸತ್ಯಮಂಗಲ ಕಾಡಿನಲ್ಲಿರುವುದು. ವೀರಪ್ಪನ್ ಕೂಡ ಸತ್ಯಮಂಗಲ ಕಾಡಿನಲ್ಲಿರುವುದು. ಮಹದೇಶ್ವರ ದೇವಸ್ಥಾನಕ್ಕೆ ಹೋಗಿ ನಮ್ಮ ಮುಖ್ಯಮಂತ್ರಿಗಳು ಏಕೆ ಪೂಜೆ ಮಾಡುತ್ತಾರೆಂದರೆ ಅಲ್ಲಿ ಮಹದೇಶ್ವರ ಸ್ವಾಮಿಯು ವೀರಪ್ಪನ್‌ನ ಮನಸ್ಸಿಗೆ ಬಂದು ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಬಹುದು. ಆದಕ್ಕಾಗಿ ನಮ್ಮ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿ ಪೂಜೆ ಮಾಡಿಸಿರಬಹುದು ಅಷ್ಟೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೇ, ನನ್ನ ಅವೈಜ್ಞಾನಿಕ ವರ್ತನೆಗೆ ಮಾನ್ಯ ಭಕ್ತವತ್ಸಲಂರವರು ವೈಜ್ಞಾನಿಕವಾದಂಥ ವಿಶ್ಲೇಷಣೆಯನ್ನು ಕೊಟ್ಟಿದ್ದಾರೆ. ನಾನು ಮಹದೇಶ್ವರನ ಗುಡಿ ಒಂದೇ ಅಲ್ಲ. ಬಹಳ ಗುಡಿಗಳಿಗೆ ರಾತ್ರಿ ಹೊತ್ತು ಹೋಗಿದ್ದೇನೆ. ಕಂಡ ಹಾಗೆ, ಕಾಣದೆ ಇದ್ದ ಹಾಗೆ ಚರ್ಚ್‌ಗಳಿಗೆ ಹೋಗಿದ್ದೇನೆ, ಮಸೀದಿಗಳಿಗೂ ಹೋಗಿದ್ದೇನೆ. ಪ್ರಶ್ನೆ ಉದ್ಭವವಾದುದು ಮಾನ್ಯ ಸೋಮಶೇಖರ್‌ರವರು ಈ ವಿಚಾರವನ್ನು

ಪ್ರಸ್ತಾಪಿಸಿದುದರಿಂದ ನಾನು ಅದಕ್ಕೆ ಸ್ಪಂದಿಸಬೇಕಾಯಿತೇ ಹೊರತು ಸ್ವಂತ ನಂಬಿಕೆಗಳು ಅವರ ವ್ಯಕ್ತಿತ್ವಕ್ಕೆ ಸೇರಿರತಕ್ಕಂಥದ್ದು. ಆದರೆ ನೀವು ಮುಖ್ಯಮಂತ್ರಿಯಾಗಿ ಏಕೆ ದೇವಸ್ಥಾನಕ್ಕೆ ಹೋದಿರಿ ಎಂದು ಕೇಳಿದಿರಿ. ಈಗ ಮುಖ್ಯಮಂತ್ರಿ ಅಥವಾ ಮಂತ್ರಿ ಪದವಿ ಆ ಮನುಷ್ಯನ ವ್ಯಕ್ತಿತ್ವದ ಅವಿಭಾಜ್ಯವಾದ ಒಂದು ಅಂಗ. ಅವನು ಇರುವವರೆಗೂ, ಅಥವಾ ಮುಖ್ಯಮಂತ್ರಿಯಾಗಿರುವವರೆಗೂ ಅಥವಾ ಮಂತ್ರಿಯಾಗಿರುವವರೆಗೂ ಕೂಡ ಆ ಸೆಪರೇಷನ್ ಸಾಧ್ಯವಾಗುತ್ತಿಲ್ಲ. I have tried my best at some point of time. ಇದು ನನ್ನ ಪರ್ಸನಲ್ ಹಾಗೆ ಎಂದು ಹೇಳಿದರೆ ಇದು there is nothing personal about it. No longer personal because you are covered under the security regulations. So we have to come with that. ಒಟ್ಟಿನಲ್ಲಿ ನನ್ನ ಸಮಾಧಾನವೇನು ಎಂದು ಹೇಳಿದರೆ ನಮ್ಮ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ರವರ ಸಮಾಧಾನವೇನು ಎಂದರೆ.....

ಶ್ರೀ ಎಸ್.ಎಸ್.ಪಾಟೀಲ್ :— ನಮ್ಮ ಮುಖ್ಯಮಂತ್ರಿಗಳು ಮಾನ್ಯ ಭಕ್ತವತ್ಸಲಂ ಹೇಳಿದರು ಎಂದು ಹೇಳಿದರಲ್ಲ, ನಮ್ಮ ಸೋಮಶೇಖರ್‌ರವರು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ದೇವರಿಗೆ ಕೈ ಮುಗಿಯದಿದ್ದರೂ ಸಹಿತ ಎಲೆಕ್ಷನ್ ಟೈಮ್‌ನಲ್ಲಿ ದೇವರ ಗುಡಿಗೆ ಕರೆದುಕೊಂಡು ಹೋದಾಗ ಆಗ ಕೈಮುಗಿಯುತ್ತೇವೆ, ಮನಸ್ಸು ಇಲ್ಲದಿದ್ದರೂ ಅದನ್ನು ಮಾಡುತ್ತೇವೆ. ಏನಾದರೂ ಆಗಲಿ ಡಾ: ರಾಜ್‌ಕುಮಾರ್‌ರವನ್ನು ಬಿಟ್ಟರೆ ಸಾಕು ಎಂದು ಹೇಳಿ ನಮ್ಮ ಮುಖ್ಯಮಂತ್ರಿಗಳು ಎಲ್ಲಾ ದೇವರಿಗೂ ಹೋಗಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ :— ಮಾನ್ಯ ಅಧ್ಯಕ್ಷರೇ, ನಮ್ಮ ಸಾರಿಗೆ ಮಂತ್ರಿಗಳ ಸಮಾಧಾನವೇನೆಂದರೆ ನೂರಾರು ಬಸ್‌ಗಳು ಜಖಂ ಆಗದೆ ಇದರಿಂದ ಉಳಿದವು ಹಾಗೆ ಎಂದು. ಆದ್ದರಿಂದ ಮುಂದೆ ಏನು ಮಾಡಬೇಕು? ಇವತ್ತು ನಮ್ಮ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಚೆನ್ನೈಗೆ ಹೋಗಿದ್ದಾರೆ. ತಮಿಳುನಾಡು ಸರ್ಕಾರದ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡುತ್ತಿದ್ದಾರೆ. ನಾನು ಮತ್ತು ಗೃಹ ಸಚಿವರು ಈ ಸದನ ಮುಗಿದ ತಕ್ಷಣ ದೆಹಲಿಗೆ ಹೋಗುತ್ತಿದ್ದೇವೆ. ದೆಹಲಿಯಲ್ಲಿ ಪ್ರಧಾನ ಮಂತ್ರಿಗಳನ್ನು ಮತ್ತು ಗೃಹ ಸಚಿವರನ್ನೂ ಕೂಡ ಭೇಟಿ ಮಾಡಿ ನಾವು ಮೂರು ಸರ್ಕಾರಗಳು ಏಕೀಭವಿಸಿ ಈ ಕರ್ನಾಟಕದ ಕಪ್ಪುಚುಕ್ಕೆಯಾಗಿ ಹೊರಬಂದಿರತಕ್ಕ ಈ ವೀರಪ್ಪನ್ ಪ್ರಕರಣದಿಂದ ನಮ್ಮ ಜನರನ್ನು ಮುಕ್ತರನ್ನಾಗಿ ಮಾಡುವುದಕ್ಕೆ, ಈ ರಾಜ್ಯವನ್ನು ಮುಕ್ತವನ್ನಾಗಿ ಮಾಡಲಿಕ್ಕೆ ಏನೆಲ್ಲ ಬೇಕೋ, ಎಲ್ಲವನ್ನೂ ಇಲ್ಲಿ ಸ್ಪೆಲ್‌ಔಟ್ ಮಾಡಲಿಕ್ಕಾಗುವುದಿಲ್ಲ. ಈ ಸದನವನ್ನು ನಾನ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂಬ ಎಷ್ಟೇ ಇರಾದೆಯಿದ್ದರೂ ಕೂಡ ಬ್ರಾಡ್ ಔಟ್‌ಲೈನ್ಸ್ ಮಾತ್ರ ನಾವು ಹೇಳಬಹುದೇ ಹೊರತು ಆ ಸೂಕ್ಷ್ಮತೆ, ಕ್ಲಿಷ್ಟತೆಗಳನ್ನು ಗಮನಿಸಿ ಸದನಕ್ಕೆ ನಾನು ಭರವಸೆ ಕೊಡುವುದೇನೆಂದರೆ, ನಾವು ಯಾವ ರೀತಿ ನಿಮ್ಮೆಲ್ಲರ ಸಹಕಾರ, ಈ ರಾಜ್ಯದ ಜನರ ಸಹಕಾರ ಹಾಗೂ ಇತರರ ಸಹಕಾರ ಪಡೆದುಕೊಂಡು ಡಾ: ರಾಜ್‌ಕುಮಾರ್

ಮತ್ತು ಇತರರನ್ನು ಬಿಡಿಸಿಕೊಂಡು ಬಂದೆವೋ ಹಾಗೆಯೇ ನಿಮ್ಮೆಲ್ಲರ ಸಹಕಾರದಿಂದ.... I am sorry. I have a correction to make. I was under the impression that the Director General of Police had already gone to Chennai. They are going on Saturday the 25th. ಈ ಅಧಿವೇಶನವಿರುವುದರಿಂದ ಅವರು ಇಲ್ಲಿರಬೇಕಾಗುತ್ತದೆ. ಈಗಾಗಲೇ ಎಸ್.ಟಿ. ಸಾಂಗ್ಲಿಯಾನ, ಶಂಕರ ಬಿದರಿ ಮತ್ತು ಕೆಂಪಯ್ಯನವರು ಹೋಗಿದ್ದಾರೆ ಮತ್ತು ತಮಿಳುನಾಡು ಗಡಿಭಾಗದ ಕ್ಷೇತ್ರದಲ್ಲಿ ಮೊನ್ನೆ ರಾತ್ರಿ ಒಂದು ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ನಮ್ಮ ರಾಜ್ಯದ ಎಸ್.ಟಿ.ಎಫ್. ಮುಖ್ಯಸ್ಥರಾದ ಹರ್ಷವರ್ಧನರಾಜು ಅವರು ಭಾಗವಹಿಸಿದ್ದರು. ಆದುದರಿಂದ, ನರಹಂತಕ, ಕಾಡುಗಳ್ಳ ವೀರಪ್ಪನ್‌ನ ಉಪಟಳದಿಂದ ಇನ್ನು ಮುಂದೆ ನಾವು ಮುಕ್ತರಾಗುವುದಕ್ಕೆ ಎಲ್ಲರೂ ಒಟ್ಟಾಗಿ ಸೇರಿ ಪ್ರಯತ್ನಿಸೋಣ. ಇದಕ್ಕೆ ಯಾವುದೇ ವಿಚಾರಣೆ ಬೇಕಾಗಿಲ್ಲ ಮತ್ತು ಹೈಕೋರ್ಟ್ ನ್ಯಾಯಾಧೀಶರಿಂದಲೂ ನ್ಯಾಯಾಂಗ ವಿಚಾರಣೆ ಬೇಕಾಗಿರುವುದಿಲ್ಲ. ಕಳ್ಳನನ್ನು ಹಿಡಿಯುವುದಕ್ಕೆ ಧೈರ್ಯವಿರುವ ವಿಧಿ-ವಿಧಾನಗಳನ್ನು ಹೈಕೋರ್ಟ್ ನ್ಯಾಯಾಧೀಶರು ನಮಗೆ ತೋರಿಸಿಕೊಟ್ಟಿದ್ದರೆ ನಾವು ಹಿಡಿಯಬಹುದಿತ್ತು. ಈಗ ನಮ್ಮ ದೃಷ್ಟಿ ಎಲ್ಲವೂ ವೀರಪ್ಪನ್ ವಿಚಾರದ ಕಡೆಗೇ ಕೇಂದ್ರಿಕೃತವಾಗಿದ್ದು, ಅಪಹರಣ ಪ್ರಕರಣ ವಿಚಾರಣೆ ನಡೆಸಬೇಕೆಂದು ತಾವೇನು ಕೇಳಿದ್ದೀರಿ, ಇದರಲ್ಲಿ ವಿಚಾರಣೆ ಮಾಡುವ ಯಾವುದೇ ಅಗತ್ಯತೆ ಕೂಡ ಸರ್ಕಾರಕ್ಕೆ ಕಂಡುಬರುವುದಿಲ್ಲವೆಂದು ಹೇಳುತ್ತಾ, ತಾವು ನೀಡಿರುವ ರಚನಾತ್ಮಕ ಸಲಹೆಗಳಿಗೆ ನಾನು ಅಭಾರಿಯಾಗಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾಗಿ ಉತ್ತರ ಕೊಟ್ಟರೂ ಸಹ ಕೆಲವೊಂದು ಸಂಶಯಗಳು ಹಾಗೆಯೇ ಉಳಿದುಕೊಂಡಿವೆ. ನಾನು ಕೇಳುತ್ತಿರುವ ಮೂಲಭೂತ ಉದ್ದೇಶವೇನೆಂದರೆ, ಅಪಹರಣವಾಗಿದ್ದ ಡಾ: ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ವಾಪಸ್ ಬಂದರು. ಇಲ್ಲಿಗೆ ಒಂದು ಘಟ್ಟ ಮುಗಿಯಿತೆಂದು ನಾನು ಹೇಳಿದೆ. ಇನ್ನು ಮುಂದಿನ ಘಟ್ಟ ಬಹಳ ಪ್ರಾಮುಖ್ಯವಾದುದಾಗಿದೆ. ಬೆಂಗಳೂರು ಸಿಟಿ ಕ್ರೈಮ್ ಸಿಟಿ ಆಗಬಾರದು. ಇಡೀ ರಾಜ್ಯದಲ್ಲಿ ಕ್ರೈಮ್ ಜಾಸ್ತಿಯಾಗಬಾರದೆಂಬ ಒಂದು ಆಲೋಚನೆಯಿಟ್ಟುಕೊಂಡು ಹೇಳಿದೆ. ಅದಕ್ಕೋಸ್ಕರವೇ ಇವತ್ತು ಡಾ: ಭಾನು ಮತ್ತು ಕೊಳತ್ತೂರ್ ಮಣಿಯವರ ವಿಚಾರ ಪ್ರಸ್ತಾಪಿಸಿದೆ. ಕೊಳತ್ತೂರು ಮಣಿ ಎಂಬುವವರು ದಿವಂಗತ ರಾಜೀವ್ ಗಾಂಧಿಯವರ ಹತ್ಯೆಯಲ್ಲಿ ಭಾಗಿಯಾಗಿದ್ದವರು. ಅಷ್ಟೇ ಅಲ್ಲದೆ, ಎಲ್‌ಟಿಟಿಇ ಸಂಘಟನೆಯಲ್ಲಿದ್ದ ಶಿವರಾಸನ್ ಮತ್ತು ಶುಭಾ ಅವರೊಂದಿಗೆ ಸಂಪರ್ಕವಿತ್ತು. ಈ ಹಿನ್ನಲೆಯಲ್ಲಿಯೇ ನಾನು ಇವರಿಬ್ಬರ ಹೆಸರುಗಳನ್ನು ಪ್ರಸ್ತಾಪಿಸಿದ್ದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನನ್ನೂ ಹೇಳಲಿಲ್ಲ. ಆದುದರಿಂದ, ಇವೊತ್ತು ಗ್ರಾನೈಟ್ ಲಾಬಿ ಏನು ಕೆಲಸ ಮಾಡುತ್ತಿದೆ, ಅಪಹರಣವಾಗಿದ್ದ ಡಾ: ರಾಜ್‌ಕುಮಾರ್ ಮತ್ತಿತರರನ್ನು

ಬಿಡಿಸಿಕೊಂಡು ಬರಲು ಸಂಧಾನಕಾರರಾಗಿ ಯಾರ್ಯಾರು ಹೋಗಿದ್ದರು, ಮುಂತಾದ ಎಲ್ಲಾ ವಿಷಯಗಳ ಹಿನ್ನಲೆಯಲ್ಲಿ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ನಾನು ಡಿಮ್ಯಾಂಡ್ ಮಾಡಿದೆ. ಬಹಳಷ್ಟು ಮಾನ್ಯ ಸದಸ್ಯರು ಕೂಡ ಸಿ.ಬಿ.ಐ. ತನಿಖೆಯಾಗಬೇಕೆಂದು ಡಿಮ್ಯಾಂಡ್ ಮಾಡಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಏನಾಗಿದೆಯೆಂದರೆ, ಯಾವುದೇ ಒಂದು ಘಟ್ಟ ಮುಗಿದ ನಂತರ ನಾವು ಮೈಮರೆತು ಬಿಡುತ್ತೇವೆ. 'ಹೇಗಾದರೂ ಮಾಡಲಿ, ಯಾರಾದರೂ ಹೋಗಿ ಕರೆದುಕೊಂಡು ಬರಲಿ, ಒಟ್ಟಿನಲ್ಲಿ ಡಾ: ರಾಜ್‌ಕುಮಾರ್ ಅವರು ಬಿಡುಗಡೆಯಾದರೆ ಸಾಕು' ಎಂದು ರಾಜ್ಯದ ಜನರು ಹೇಳುತ್ತಿದ್ದರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈಗ ಡಾ: ರಾಜ್‌ಕುಮಾರ್ ಅವರು ಬಿಡುಗಡೆಯಾಗಿ ಬಂದರು. ಅವರು ಬಂದ ನಂತರ ಇರುವ ಜವಾಬ್ದಾರಿ ಬಹಳ ದೊಡ್ಡದಾಗಿದೆ. ರಾಜ್‌ಕುಮಾರ್ ಮತ್ತಿತರರ ಬಿಡುಗಡೆ ಸಂಧಾನಕಾರರಾಗಿ ಯಾರು ಹೋದರು? ಅವರುಗಳ ಹಿನ್ನಲೆ ಏನು? ಮುಂತಾದ ಅಂಶಗಳ ಬಗ್ಗೆ ವಿಚಾರ ಮಾಡುತ್ತಿದ್ದೇವೆ, ಅದರ ಬಗ್ಗೆ ನಾವು ಗಮನಿಸುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬಹುದಾಗಿತ್ತು. ಆದರೆ, ಈ ಕಾನ್‌ಸಿಕ್ವೆನ್ಸ್ ನಾಳೆ ಬೇರೆ ರೀತಿಯ ಆತಂಕಗಳಿಗೆ ಕಾರಣೀಭೂತ-ವಾಗಬಾರದೆಂಬುದೇ ನನ್ನ ಕಳಕಳಿಯಾಗಿದೆ. ಇವೊತ್ತು ಬೆಂಗಳೂರು ನಗರದಲ್ಲಿ ಕ್ರೈಮ್ ರೇಷಿಯೊ ಎಷ್ಟಿದೆ ಎಂಬುದರ ಬಗ್ಗೆ ಮಾನ್ಯ ಗೃಹ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಪಟ್ಟಿ ಕೊಟ್ಟಿದ್ದಾರೆ. ಆ ಪಟ್ಟಿ ಪ್ರಕಾರ ಬೆಂಗಳೂರು ನಗರದಲ್ಲಿ 1998-99ರಲ್ಲಿ 179 ಕೊಲೆ ಪ್ರಕರಣಗಳು ಜರುಗಿದ್ದರೆ, 31.10.2000ವರೆಗೆ 185 ಕೊಲೆಗಳಾಗಿವೆ. ಇಡೀ ರಾಜ್ಯಾದ್ಯಂತ ತೆಗೆದುಕೊಂಡರೆ ಕಳೆದ ವರ್ಷ 1,564 ಕೊಲೆಗಳಾಗಿದ್ದರೆ, ಪ್ರಸಕ್ತ ವರ್ಷದಲ್ಲಿ 1,627 ಕೊಲೆ ಪ್ರಕರಣಗಳಾಗಿವೆ. ಬೆಂಗಳೂರಿನಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿಯೇ ಒಟ್ಟು 32 ಕೊಲೆಗಳಾಗಿವೆಯೆಂಬುದನ್ನು ನಾನು ರೆಫರ್ ಮಾಡಿದೆ. ಅಂದರೆ, ಪರಿಸ್ಥಿತಿ ಎಲ್ಲಿಗೆ ಹೋಗುತ್ತಿದೆಯೆಂಬುದನ್ನು ವಿಚಾರ ಮಾಡಬೇಕು. ಅಷ್ಟೇನೂ ಒಳ್ಳೆಯ ಹಿನ್ನಲೆ ಇಲ್ಲದಿರುವ ಡಾ: ಭಾನು ಹಾಗೂ ಅಪರಾದ ಪ್ರಕರಣದಲ್ಲಿ ಭಾಗಿಯಾಗಿರುವ ಕೊಳತ್ತೂರ್ ಮಣಿ, ಇವರಿಬ್ಬರೂ ವೀರಪ್ಪನ್ ಬಳಿ ಹೋಗಿ ಡಾ: ರಾಜ್‌ಕುಮಾರ್ ಮತ್ತಿತರರನ್ನು ಬಿಡಿಸಿಕೊಂಡು ಬಂದಿರುವುದಕ್ಕೆ ತಾವು ಶಹಬಾಷ್‌ಗಿರಿ ಕೊಡುವ ಮೂಲಕ ನಾಳೆ ಇದೇ ರೀತಿಯ ಪರಿಸ್ಥಿತಿ ಮುಂದುವರಿದರೆ ನಾವು ಬಹಳ ಗಂಡಾಂತರಕಾರಿಯಾದ ಕ್ಷಣಗಳನ್ನು, ದಿನಗಳನ್ನು ಕಳೆಯಬೇಕಾಗುತ್ತದೆ. ಇಂತಹವರಿಗೆ ಪ್ರೋತ್ಸಾಹ ಮತ್ತು ಮಹತ್ವ ಕೊಟ್ಟು ಇವರುಗಳ ಬಗ್ಗೆ ನಾವೇನೂ ಮಾತನಾಡಬಾರದೆಂದರೆ ಹಾಗೂ ಪ್ರಕರಣ ಕುರಿತು ತನಿಖೆಯಾಗಬಾರದೆಂದರೆ ಮುಂದಿನ ದಿನಗಳಲ್ಲಿ ಬಹಳ ಆತಂಕಕಾರಿಯಾದ ಕ್ಷಣಗಳನ್ನು ಕಳೆಯಬೇಕಾಗುತ್ತದೆ. ಒಂದು ಸಾರಿ ವೀರಪ್ಪನ್ ಬಂಧನದಿಂದ ಒತ್ತೆಯಾಳುಗಳನ್ನು ವಾಪಸ್ ಕರೆದುಕೊಂಡು ಬಂದರೆ ಪ್ರಕರಣ ಅಲ್ಲಿಗೇ ಮುಗಿಯಿತೆನ್ನುವ ಮನೋಭಾವವೇನಿದೆ, ಕಳೆದ ಹತ್ತು ವರ್ಷಗಳಿಂದಲೂ ಇದೇ ರೀತಿ ಆಗುತ್ತಿದೆ. ಡಾ: ರಾಜ್‌ಕುಮಾರ್ ಅವರ

ಅಪಹರಣವಾಗುವುದಕ್ಕಿಂತ ಹಿಂದೆಯೇ ಛಾಯಾಗ್ರಾಹಕರಾದ ಇಬ್ಬರನ್ನು ವೀರಪ್ಪನ್ ಅಪಹರಣ ಮಾಡಿ ಅವರನ್ನು ಒಂಭತ್ತು ದಿವಸಗಳ ಕಾಲ ತಮ್ಮ ಬಂಧನದಲ್ಲಿಟ್ಟುಕೊಂಡು ಬಿಡುಗಡೆ ಮಾಡಿದ ಬೆನ್ನ ಹಿಂದೆಯೇ ಆತನ ವಿರುದ್ಧ ಕಾರ್ಯಾಚರಣೆ ಕೈಗೊಂಡು ಬಂಧಿಸಿದ್ದರೆ ಪರಿಸ್ಥಿತಿ ಇವೊತ್ತು ಇಷ್ಟೊಂದು ಬಿಗಡಾಯಿಸುತ್ತಿರಲಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಎರಡೂ ರಾಜ್ಯಗಳಲ್ಲಿ ಆಡಳಿತ ನಡೆಸಿರುವ ಸರ್ಕಾರಗಳ ವಿರುದ್ಧ ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಏಕೆ ಛೀಮಾರಿ ಹಾಕಿತು? ನಾವು ಈ ರೀತಿ ಮೈಮರೆತು ಕುಳಿತಿದ್ದರಿಂದಲೇ ಛೀಮಾರಿ ಹಾಕಿದ್ದು. ಇವೊತ್ತು ಎಲ್‌ಟಿಟಿಇ ಬಗ್ಗೆ, ಅದನ್ನು ಬೆಂಬಲಿಸುವವರ ಬಗ್ಗೆ, ಸಂಧಾನಕಾರರಾಗಿ ಹೋಗಿರುವವರ ಬಗ್ಗೆ, ಇವರೆಲ್ಲರ ಬಗ್ಗೆ ನಾವು ಏನೂ ಮಾತನಾಡಬಾರದು, ಟೀಕಿಸಬಾರದೆಂದರೆ ಏನರ್ಥ? ನಮ್ಮ ದೇಶದಲ್ಲಿ ಇವೊತ್ತು ಎಲ್‌ಟಿಟಿಇ ಎಂಬುದು ನಿಷೇಧಿತ ಸಂಘಟನೆಯಾಗಿದೆ. ಎಲ್‌ಟಿಟಿಇ ಮತ್ತು ಅದರ ಬೆಂಬಲಿಗರ ಬಗ್ಗೆ ಮತ್ತು ಅವರ ಬಗ್ಗೆ ಮಾತನಾಡುವವರ ಬಗ್ಗೆ ಅಭಿಮಾನವಿಟ್ಟುಕೊಳ್ಳುವುದಾದರೆ ಬಹುಶ: ಇದಕ್ಕಿಂತಲೂ ಆತಂಕದ ಸ್ಥಿತಿ ಮತ್ಯಾವುದೂ ಇಲ್ಲ. ಎಲ್‌ಟಿಟಿಇ ಜೊತೆಗೆ ಸಂಪರ್ಕವಿರುವ ವ್ಯಕ್ತಿಗಳ ಬಗ್ಗೆ ಇವೊತ್ತು ಪತ್ರಿಕೆಗಳಲ್ಲಿ ಪ್ರತಿನಿತ್ಯವೂ ದಾಖಲೆ ಸಮೇತ ವರದಿ ಬರುತ್ತಿದೆ. ಅಂತಹ ವ್ಯಕ್ತಿಗಳು ಇವೊತ್ತು ಬೆಂಗಳೂರು ನಗರದಲ್ಲಿ ನೆಲೆಗೊಂಡು ವಾಸವಾಗಿದ್ದಾರೆ. ಇಂತಹವರ ಬಗ್ಗೆ ತನಿಖೆ ನಡೆಸುವುದಿಲ್ಲವೆಂದರೆ, ಅಪಹರಣವಾಗಿದ್ದ ಡಾ: ರಾಜ್‌ಕುಮಾರ್ ಮತ್ತಿತರರು ವಾಪಸ್ ಸುರಕ್ಷಿತವಾಗಿ ಬಂದಿದ್ದಾರೆ, ಆತಂಕದ ದಿನಗಳೆಲ್ಲವೂ ಕಳೆದುಹೋಗಿವೆಯೆಂದು ತಿಳಿದುಕೊಂಡರೆ ಪರಿಸ್ಥಿತಿ ಮತ್ತಷ್ಟು ಅಪಾಯಕಾರಿಯಾಗುತ್ತದೆ. ಅದಕ್ಕೋಸ್ಕರವೇ ತನಿಖೆ ಮಾಡಬೇಕೆಂದು ಅಥವಾ ನಿಮ್ಮ ಮಟ್ಟದಲ್ಲಾದರೂ ತನಿಖೆ ನಡೆಸಬೇಕೆಂದು ನಾನು ನಿನ್ನೆ ಡಿಮ್ಯಾಂಡ್ ಮಾಡಿದೆ. ಈ ರೀತಿ ಮಾಡಿದರೆ ಬಹಳಷ್ಟು ವಿಷಯಗಳು ಹೊರಬರುವುದಕ್ಕೆ ಸಾಧ್ಯವಿದೆ. ನಾವು ಇವೊತ್ತು ಈ ರೀತಿ ಮೈಮರೆತು ಕುಳುತರೆ ವೀರಪ್ಪನ್‌ನನ್ನು ಇನ್ನು ಆರು ತಿಂಗಳಾದರೂ ಹಿಡಿಯುವುದಕ್ಕಾಗುವುದಿಲ್ಲ, ಮತ್ತೆ ಇದೇ ಕಥೆ ಪುನರಾವರ್ತನೆಯಾಗುತ್ತದೆ. ಇನ್ನು ಆರು ತಿಂಗಳು, ಒಂದು ವರ್ಷ ಕಳೆದ ಬಳಿಕ ಮತ್ಯಾರೋ ಒಬ್ಬ ಗಣ್ಯರನ್ನು ಆತ ಅಪಹರಿಸಿದರೆ ಆಗ ಮತ್ತೆ ಈ ಕುರಿತು ನಾವೆಲ್ಲರೂ ಚಿಂತನೆ ಮಾಡುವ ಸಾಧ್ಯವಿದೆ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಗಮನಿಸಬೇಕಿರುವುದೇನೆಂದರೆ, ಕರ್ನಾಟಕ ಇಂದು ಸುಸ್ಥಿತಿಗೆ ಬರುತ್ತಿದ್ದು, ಬೆಂಗಳೂರು ಇವೊತ್ತು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕಾಣಿಸುತ್ತಿರುವುದರಿಂದ ನಾಳೆ ಇದೇ ಪರಿಸ್ಥಿತಿಯಲ್ಲಿ ಉಳಿದುಕೊಂಡು ಹೋಗಬೇಕಿರುವುದು ನಮ್ಮೆಲ್ಲರ ನೈಜ ಕಳಕಳಿಯಾಗಿದೆ. ಉಗ್ರಗಾಮಿಗಳ ಸಂಘಟನೆಯಾದ ಎಲ್‌ಟಿಟಿಇ ಜೊತೆ ಯಾರು ಸಂಪರ್ಕವಿರಿಸಿಕೊಂಡಿದ್ದಾರೋ ಅಂತಹವರ ಬಗ್ಗೆ ತನಿಖೆಯಾಗಬೇಕೆನ್ನುವುದು ನನ್ನ ಅನಿಸಿಕೆಯಾಗಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ವೀರಪ್ಪನ್‌ನನ್ನು ಬಂಧಿಸುವುದಕ್ಕೆ ಆತನ ವಿರುದ್ಧ ಒಂದೆಡೆ ಕಾರ್ಯಾಚರಣೆ ನಡೆಯಲಿ, ಮತ್ತೊಂದೆಡೆ ಸಿ.ಬಿ.ಐ.ಯಿಂದ ಒಂದು ಎನ್‌ಕ್ವೈರಿ ಕಮೀಷನ್‌ಅನ್ನು ನೇಮಿಸಿ, ಇದರ ಜೊತೆಜೊತೆಗೆ ಈ ಕುರಿತು ಚಿಂತನೆ ನಡೆದರೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋದ ಪಕ್ಷದ ನಾಯಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ನನ್ನ ಸಹಮತವಿದೆ. ಎಲ್‌ಟಿಟೀ ಬಗ್ಗೆ ಅಂತರಂಗಿಕವಾಗಿಯಾಗಲಿ, ಬಹಿರಂಗವಾಗಿಯಾಗಲಿ ಯಾರು ಅದರ ಧ್ಯೇಯೋದ್ದೇಶಗಳೊಂದಿಗೆ ಸಾಮೀಲಾಗಿದ್ದಾರೆ, ಅವರ ವಿರುದ್ಧ ತೀವ್ರವಾದ ಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಳ್ಳುತ್ತದೆನ್ನುವ ಆಶ್ವಾಸನೆಯನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೊಡುತ್ತೇನೆ. ಇದರ ಬಗ್ಗೆ ಈಗಾಗಲೇ ಪೊಲೀಸ್ ಮಟ್ಟದಲ್ಲಿ ನಾವು ಸೂಚನೆಗಳನ್ನು ನೀಡಿದ್ದೇವೆ. To comb all such anti-national forces. It is our responsibility to prevent this even if one is remotely connected with LTTE, he should be brought to book. ಈ ವಿಚಾರದಲ್ಲಿ ಎರಡು ವಿಚಾರಗಳು ಇರಲು ಸಾಧ್ಯವಾಗುವುದಿಲ್ಲ. ಈ ವಿಚಾರದಲ್ಲಿ ಸುಪ್ರೀಮ್ ಕೋರ್ಟ್‌ನವರು ಏನೆಲ್ಲಾ ನಮಗೆ ಹೇಳಿದ್ದಾರೆ ಅದರ ಚೌಕಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಯಾರು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಾರೆ, ಉಗ್ರಗಾಮಿಗಳು ಎಂಬ ಹೆಸರಿನಿಂದ ಕೆಲವರೇನು ಕರ್ತವ್ಯದಲ್ಲಿ ನಿರತರಾಗಿದ್ದಾರೆ ಅವರ ಮೇಲೆ ಸೂಕ್ತವಾದ ವಿಚಾರಣೆ ಮಾಡುತ್ತೇವೆ ಮತ್ತು ಅವರ ಚಲನವಲನಗಳ ಬಗ್ಗೆ ಗಂಭೀರವಾಗಿ ಮಾನೀಟರ್ ಮಾಡುತ್ತೇವೆ ಹಾಗೂ ಎಲ್ಲಿ ಅವರು ಕಾನೂನಿಗೆ ವಿರುದ್ಧವಾಗಿ ಹೋಗುತ್ತಿದ್ದಾರೆ ಎಂದಾಗ ಅವರನ್ನು ಹಿಡಿದು ಒಳಗೆ ಹಾಕುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:— ಮಾನ್ಯ ಅಧ್ಯಕ್ಷರೆ, ನಾಗಪ್ಪ ಎಂಬುವವರು ವೀರಪ್ಪನ್‌ನಿಂದ ತಪ್ಪಿಸಿಕೊಂಡು ಬಂದಿದ್ದರು. ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯ ಅನುಸಾರ ನಿನ್ನೆ ಅವರು ಕೋರ್ಟಿಗೆ ಹಾಜರಾಗಲು ಕೋರ್ಟ್‌ನಿಂದ ನೋಟೀಸ್ ಇಶ್ಯೂ ಆಗಿತ್ತು. ನಾಗಪ್ಪ ಎಂಬುವವರು ಧಾರವಾಡ ಜಿಲ್ಲೆಯವರು. ಅವನ ಸಂಬಂಧಿಕರು ಅವನನ್ನು ನೋಡಲು ಬಂದರೂ ಅವನು ಮನೆಯಲ್ಲಿ ಸಿಗುತ್ತಿಲ್ಲ. ಆದ್ದರಿಂದ ನಾಗಪ್ಪನವರು ಸುರಕ್ಷಿತವಾಗಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಸರ್ಕಾರ ತಿಳಿಸಬೇಕು. ಅವನ ಜೀವಕ್ಕೆ ಅಪಾಯವಿರುವ ಸುದ್ಧಿಗಳನ್ನು ನಾವು ಕೇಳುತ್ತಿದ್ದೇವೆ. ಅಂಥ ಆತಂಕಕರವಾದ ಸ್ಥಿತಿಯಲ್ಲಿ ತಪ್ಪಿಸಿಕೊಂಡು ಬಂದಿರುವ ನಾಗಪ್ಪನಿಗೆ ನಾವು ನಿಜವಾಗಿಯೂ ಶೌರ್ಯ ಪ್ರಶಸ್ತಿಯನ್ನು ಕೊಡಬೇಕಾಗುತ್ತದೆ. ಅವನು ಬಂದನಂತರ ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿಲ್ಲ. ಹೈಕೋರ್ಟ್ ನೋಟೀಸ್ ಕೊಟ್ಟರು ಅವರು ಹಾಜರಾಗಿಲ್ಲ, ಅವರ ವಕೀಲರು ಮಾತ್ರ ಹಾಜರಾಗಿರುತ್ತಾರೆ. ಅವರು ಎಲ್ಲಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಕ್ಲಾರಿಫೈ ಮಾಡಿದರೆ ಒಳ್ಳೆಯದು. ನಾಗಪ್ಪನವರಿಗೆ ರಕ್ಷಣೆಯನ್ನು ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಾಗಪ್ಪನವರ ತಂದೆ ನನ್ನ ಹತ್ತಿರ ಬಂದಿದ್ದರು, ಅವರನ್ನು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿಸಿದ ಮೇಲೆ

ಮುಖ್ಯಮಂತ್ರಿಯವರು ತಕ್ಷಣವೇ ಪೊಲೀಸ್ ಕಮೀಷನ್‌ರವರಿಗೆ ಹೇಳಿ ಅವರನ್ನು ಭೇಟಿ ಮಾಡಲು ಕಳಿಸಿದ್ದಾರೆ. ಮುಂದೆ ಏನಾಯಿತೋ ಗೊತ್ತಿಲ್ಲ ಅವರು ಭೇಟಿ ಮಾಡಲು ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಸುಪ್ರೀಮ್ ಕೋರ್ಟ್ ನೀಡಿರುವ ತೀರ್ಪಿನಲ್ಲಿ ಕೆಲವೊಂದನ್ನು ಒಪ್ಪಿಕೊಂಡು ರಾಜ್ಯ ಸರ್ಕಾರದವರು ಅಫೀಡವಿಟ್ ಅನ್ನು ಹಾಕಿದ್ದೀರಿ. ವಿಶೇಷ ನ್ಯಾಯಾಲಯಕ್ಕೆ ನ್ಯಾಯಾಧೀಶರನ್ನು ನೇಮಿಸುವಂಥದ್ದು, ಸರ್ವಜ್ಞರ ಪ್ರತಿಮೆಯನ್ನು ತಮಿಳುನಾಡಿನಲ್ಲಿ, ತಿರುವಳ್ಳುವರ್‌ರವರ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಅನಾವರಣ ಮಾಡತಕ್ಕದ್ದು. ಟಾಡಾ ಬಂಧಿಗಳೇನಿದ್ದಾರೆ ಅವರಲ್ಲಿ ಕೆಲವರು ನಿರ್ದೋಷಿಗಳು ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಅದಕ್ಕೆ ಸಂಬಂಧಪಟ್ಟಂತೆ ಪ್ರಮಾಣಪತ್ರವನ್ನು ಸಲ್ಲಿಸಿದ್ದೀರಿ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ :— ಈ ಕೆಲವು ವಿಚಾರಗಳಲ್ಲಿ ನಾವು ಮತ್ತು ತಮಿಳುನಾಡು ಸರ್ಕಾರದ ಜೊತೆಯಲ್ಲಿ ಏನು ಒಪ್ಪಂದಗಳನ್ನು ಮಾಡಿಕೊಂಡಿದ್ದೇವೆ ಅದೆಲ್ಲವನ್ನು ನಾವು ಕಾರ್ಯ ರೂಪಕ್ಕೆ ತರಲು ಸಿದ್ಧರಾಗಿದ್ದೇವೆ ಎಂಬುದನ್ನು ತಾವು ಒಪ್ಪುತ್ತೀರೆಂದು ಭಾವಿಸುತ್ತೇನೆ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ವಿಚಾರದ ಬಗ್ಗೆ ವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಅವರು ತಮ್ಮ ಕಳಕಳಿಯನ್ನು ರಾಜ್ಯದ ಜನರ ಮುಂದಿಟ್ಟಿದ್ದಾರೆ. ಇದರ ಜೊತೆಗೆ ಎಲ್.ಟಿ.ಟಿ. ಟಿ.ಎನ್.ಎಲ್. ಇಂಥ ಶಕ್ತಿಗಳು ರಾಜ್ಯದಲ್ಲಿ ಬರಬಾರದು ಎಂಬುದನ್ನು ಸಹ ಸ್ಪಷ್ಟಮಾಡಿದ್ದಾರೆ. ಆದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ನಾನು ಮಾತನಾಡುವಾಗ ನಾಲ್ಕು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಅದರ ಬಗ್ಗೆ ಉತ್ತರ ಕೊಡದಿದ್ದ ಕಾರಣ ನಾನು ಈಗ ಮಾತನಾಡುತ್ತಿದ್ದೇನೆ. ಆಗಸ್ಟ್ 28ರಂದು ಮೈಸೂರಿನಲ್ಲಿ ಟಾಡಾ ಕೋರ್ಟ್ ಹಾಲ್‌ನಲ್ಲಿ ಅವರಿಗೆ ಜಾಮೀನನ್ನು ಕೊಡಲು ಹದಿನೈದು ಜನರನ್ನು ಡಿ.ವೈ.ಎಸ್.ಪಿ. ಮಂದಪ್ಪನವರು ಕರೆದುಕೊಂಡು ಬಂದಿದ್ದರೂ ಸಹ ಜಾಮೀನು ಕೊಡದೆ ಕಳಿಸುವ ವ್ಯವಸ್ಥೆ ಏಕೆ ಆಯಿತು? ಕಟ್ಟಬೇಕಾಗಿದ್ದ 24 ಲಕ್ಷ ರೂಪಾಯಿಗಳನ್ನು ಕಟ್ಟದೆಯೇ ಈ ಸಮಸ್ಯೆಗಳು ನಿರ್ಮಾಣವಾಗಲು ಕಾರಣವೇನು? ಮಹದೇಶ್ವರ ಬೆಟ್ಟದ ಸುತ್ತಮುತ್ತ ಇರುವ ಏಳೆಂಟು ಗ್ರಾಮಗಳಲ್ಲಿ ಇರುವ 16-18 ವಯೋಮಿತಿಯ 75-80 ಪರ್‌ಸೆಂಟ್ ಯುವಕರನ್ನು ಕೆಳೆದು ಎರಡು ತಿಂಗಳ ಕಾಲದಿಂದ ಅವರ ಮನೆಯಿಂದ ಕರೆದುಕೊಂಡು ಹೋಗಿದ್ದವರು ಇವತ್ತಿಗೂ ಕಳುಹಿಸಿಕೊಟ್ಟಿಲ್ಲ. ಒಂದೊಂದು ಮನೆಗೆ 25-50 ಸಾವಿರ ರೂಪಾಯಿಗಳನ್ನು ಎಲ್.ಟಿ.ಟಿ.ಯ ಸಹಚರರು ಅಲ್ಲಿ ಯಾರಿದ್ದಾರೆ ಅವರು ಹಣವನ್ನು ಕೊಟ್ಟಿದ್ದಾರೆ. ಆ ಹುಡುಗರಿಗೆ ಅವರದ್ದೇ ಆದಂಥ ತರಬೇತಿಯನ್ನು ಕೊಡುವ ವ್ಯವಸ್ಥೆ ಮಣಿ ಎಂಬುವವರ ಕೇಂದ್ರದಲ್ಲಿ ನಡೆಯುತ್ತಿದೆ. ಆ ಹುಡುಗರ ತಂದೆತಾಯಂದಿರ ಹೆಸರನ್ನು ಗೌಪ್ಯವಾಗಿ ಹೇಳಿ ಎಂದಿದ್ದೀರಿ ಅದನ್ನು

ಹೇಳುತ್ತೇನೆ. ಎಲ್.ಟಿ.ಟಿ. ಕೇಡರ್ ರಾಜ್ಯದಲ್ಲಿ ನಿರ್ಮಾಣವಾಗಿದೆಯಲ್ಲ ಎಂಬ ನೋವಿನಿಂದ ನಿನ್ನೆ ದಿವಸ ಇದನ್ನು ಹೇಳಿಕೊಂಡಿದ್ದೆ. ಡಾ: ರಾಜ್‌ಕುಮಾರ್‌ರವರ ಅಪಹರಣವಾದ ಮೇಲೆ ಇದೇ ಪ್ರದೇಶದಲ್ಲಿರುವ ಗುಂಡ್ಲುಪೇಟೆ, ಟಿ.ನರಸೀಪುರ, ಕೊಳ್ಳೇಗಾಲ ಮುಂತಾದ ಕಡೆಗಳಲ್ಲಿ ಐ.ಎಸ್.ಐ. ಚಟುವಟಿಕೆಗಳು ಆಗಿ ಅದಕ್ಕೆ ಸಂಬಂಧಪಟ್ಟಂತೆ ರಶೀದ್, ಬಶೀರ್, ಅಬ್ದುಲ್ ರಜಾಕ್ ಮುಂತಾದವರ ಹೆಸರುಗಳನ್ನೂ ಹೇಳಿದ್ದೆ. ಪಾಕಿಸ್ತಾನ, ಆಫ್ಘಾನಿಸ್ತಾನ, ಬಲೂಚಿಸ್ತಾನ, ಮುಂತಾದ ಕಡೆಗಳಿಗೆ ಅವರು ದೂರವಾಣಿಯನ್ನು ಮಾಡಿದ್ದು, ಅನಂತರ ಅವರನ್ನು ಅರೆಸ್ಟ್ ಮಾಡಿದ ಸಂದರ್ಭದಲ್ಲಿ ಅವರು ಐ.ಎಸ್.ಐ. ಚಟುವಟಿಕೆಯಲ್ಲಿ ತೊಡಗಿದ್ದರು ಎಂಬುದನ್ನು ಹೇಳಿದ್ದೆ. ಎಲ್.ಟಿ.ಟಿ.ಯವರು ಕೊಳತ್ತೂರಿನಲ್ಲಿ 26ರಂದು ನಡೆಯುತ್ತಿರುವ ಕಾರ್ಯಕ್ರಮಕ್ಕೆ ನಮ್ಮ ರಾಜ್ಯದಿಂದಲು ಭಾಗವಹಿಸಲು ಮೈಸೂರು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಕರಪತ್ರಗಳನ್ನು ಹಂಚಿರುವಂಥ ವಿಚಾರವನ್ನು ತಮ್ಮ ಮುಂದೆ ಹೇಳಿದ್ದೇನೆ. ಈ ವಿಚಾರಗಳ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಡಾ: ರಾಜ್‌ಕುಮಾರ್‌ರವರ ಅಪಹರಣವಾಗತ್ತದೆ ಎಂಬ ಬಗ್ಗೆ ಇಂಟಲಿಜೆನ್ಸ್‌ನವರು ವರದಿ ಕೊಟ್ಟ ಬಗ್ಗೆ ಡಾ: ರಾಜ್‌ಕುಮಾರ್‌ರವರ ಸ್ವತ: ರಕ್ಷಣೆ ಬೇಡವೆಂದು ಬರೆದುಕೊಟ್ಟರು ಮುಂತಾದ ಬಗ್ಗೆ ದಿನಾಂಕಗಳನ್ನು ಕೊಟ್ಟಿದ್ದಾರೆ. ಆದು ಆದಮೇಲೆ ಡಾ: ರಾಜ್‌ಕುಮಾರ್‌ರವರ ಅಪಹರಣವಾಯಿತು. ಹಾಗಿದ್ದರೆ ಇದರ ಜವಾಬ್ದಾರಿಯನ್ನು ಯಾರು ಹೊರಬೇಕು ಎಂಬುದು ಮುಖ್ಯವಾಗದುದು. 108 ದಿವಸಗಳ ಕಾಲ ಇಡೀ ರಾಜ್ಯ ಇದರಿಂದ ತೊಂದರೆ ಒಳಗಾಗಿತ್ತು. ಮಾಗಡಿ ರಸ್ತೆಯಲ್ಲಿ ವಾಸವಾಗಿರುವ ಶಿವಕುಮಾರ್ ಎಂಬುವವರ ಪ್ರಾಣಹಾನಿಯಾಗಿದೆ. ಈ ಘಟನೆಯಲ್ಲಿ ಮೃತಪಟ್ಟ ಅವನ ಕುಟುಂಬದವರಿಗೆ ಸರ್ಕಾರ ಪರಿಹಾರವನ್ನೇನಾದರೂ ಕೊಟ್ಟಿದೆಯೇ? ಅನೇಕರು ಆಸ್ತಿಯನ್ನು ಕಳೆದುಕೊಂಡಿದ್ದಾರೆ, ಅವರಿಗೆ ಸರ್ಕಾರ ಏನು ವ್ಯವಸ್ಥೆಯನ್ನು ಮಾಡಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ಮಹದೇಶ್ವರಬೆಟ್ಟ ಮತ್ತು ಅದರ ಸುತ್ತಮುತ್ತಲಿನ ಭಾಗ ಎಲ್.ಟಿ.ಟಿಯ ಥಾಣವಾಗಬಹುದು, ಆದ್ದರಿಂದ ಸರ್ಕಾರ ಇದರ ಬಗ್ಗೆ ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ. ಅದಕ್ಕಾಗಿ ಹಾನೂರನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕು ಮತ್ತು ನಮ್ಮ ಭಾಗದ ಅರಣ್ಯ ಅಂಚಿನಲ್ಲಿರುವ ಪೋಲೀಸ್ ಠಾಣೆಗಳಿಗೆ ಒಳ್ಳೆಯ ವಾಹನಗಳು ಮತ್ತು ಅಗತ್ಯವಿರುವಷ್ಟು ಸಿಬ್ಬಂದಿಯನ್ನು ಒದಗಿಸಬೇಕು. ಅರಣ್ಯ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.

*6.00* ಪಿ.ಎಂ.

ಶ್ರೀ ಎಸ್. ಎಂ. ಕೃಷ್ಣ :— ಮಾನ್ಯ ಸದಸ್ಯರಾದ ರಾಮ್‌ದಾಸ್‌ರವರು ಎತ್ತಿದಂಥ ಪ್ರಶ್ನೆಗಳಿಗೆ ನನ್ನ ಉತ್ತರದಲ್ಲಿ ಪ್ರಸ್ತಾಪಿಸದಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆ. ಸರ್ಕಾರ

ಅವೊತ್ತು ಟಾಡಾ ಬೇಲ್ ಅಪ್ಲಿಕೇನ್ ಅನ್ನು ಏಕೆ ಫೈಲ್ ಮಾಡಲಿಲ್ಲವೆಂದು ಕೇಳಿದ್ದಾರೆ. ಬೇಲ್ ಅಪ್ಲಿಕೇಶನ್ ಮಾಡಿರುವವರು ಅಕ್ಯೂಸ್ಡ್. ಯಾರು ಬಂಧನದಲ್ಲಿದ್ದರೋ ಅವರು ಬೇಲ್ ಅಪ್ಲಿಕೇಶನ್ ಮಾಡಬೇಕೆ ಹೊರತು ಸರ್ಕಾರದವರು ಮಾಡುವುದಕ್ಕಾಗುತ್ತದೆಯೇ? ಇದರಲ್ಲಿ ಸ್ವಲ್ಪ ಹೆಚ್ಚು-ಕಡಿಮೆಯಾಯಿತೆಂಬುದನ್ನು ನಾನು ಒಪ್ಪುತ್ತೇನೆ. ಜೊತೆಗೆ ನಾಪತ್ತೆಯಾಗಿರುವುದರ ಬಗ್ಗೆ ತಾವು ಪ್ರಸ್ತಾಪಿಸಿದ್ದೀರಿ. ಇದು ಬಹಳ ಕಳವಳಕಾರಿಯಾದ ಸಂಗತಿಯಾಗಿದೆ. ಯಾರ್‍ಯಾರು ನಾಪತ್ತೆಯಾಗಿದ್ದಾರೆಂಬ ಬಗ್ಗೆ ತಾವು ಒಂದು ಪಟ್ಟಿ ಕೊಟ್ಟರೆ ನಾವು ಕೂಡಲೇ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರಿಗೆ ದೂರವಾಣಿ ಕರೆ ಮಾಡಿ ಪೊಲೀಸ್ ವ್ಯವಸ್ಥೆ ಮತ್ತು ನಮ್ಮ ಹಲವಾರು ಏಜೆನ್ಸಿಗಳ ಮೂಲಕ ಅವರುಗಳು ಎಲ್ಲಿದ್ದಾರೆಂಬುದನ್ನು ಪತ್ತೆಹಚ್ಚುವುದಕ್ಕೆ ತೀವ್ರ ಸ್ವರೂಪದ ಪ್ರಕ್ರಿಯೆ ಪ್ರಾರಂಭಿಸುವುತ್ತೇವಲ್ಲದೆ, ಬಲೂಚಿಸ್ತಾನ್ ಮತ್ತು ಅಫ್ಘಾನಿಸ್ತಾನದ ಬಗ್ಗೆ ಏನು ಹೇಳಿದ್ದೀರಿ, ಇದರ ಬಗ್ಗೆಯೂ ವಿಶೇಷ ನಿಗಾ ಇಡುವ ಮೂಲಕ ಕಟ್ಟುನಿಟ್ಟಾದ ನಿರ್ದೇಶನವನ್ನು ಅವರಿಗೆ ಕೊಡುತ್ತೇವೆ. ಕರ್ನಾಟಕ ರಾಜ್ಯ ಸುರಕ್ಷಿತವಾಗಿರುವುದಕ್ಕೆ ಆಗತ್ಯವಿರುವ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲು ಪ್ರಯತ್ನಿಸುತ್ತೇವೆ. ಇದಕ್ಕೆ ನಾನು ತಮ್ಮ ಸಹಕಾರ ಕೋರುತ್ತೇನೆ. ಇನ್ನು ಮತ್ತೊಬ್ಬ ಮಾನ್ಯ ಸದಸ್ಯರಾದ ಮಹದೇವ ಪ್ರಸಾದ್‌ರವರ ವಿಷಯಕ್ಕೆ ಪ್ರತಿಕ್ರಿಯಿಸುವುದಾದರೆ, ಹನೂರನ್ನು ತಾಲ್ಲೂಕು ಮಾಡುವ ವಿಚಾರ ಬೇರೆ ಪ್ರಶ್ನೆ. ಆದರೆ, ಉಳಿದ ಬಂದೋಬಸ್ತ್‌ಅನ್ನು ಮಾಡುತ್ತೇವೆ. ರಾಜ್ಯದ ಗುಲ್ಬರ್ಗ ಮತ್ತು ಹೈದರಾಬಾದ್-ಕರ್ನಾಟಕ ಭಾಗಗಳಲ್ಲಿ, ಹಳೆಯ ಮೈಸೂರು ಭಾಗದ ಪಾವಗಡ ತಾಲ್ಲೂಕು ಮತ್ತಿತರ ತಾಲ್ಲೂಕುಗಳಲ್ಲಿ ಆಂಧ್ರಪ್ರದೇಶದ ಪೀಪಲ್ಸ್ ವಾರ್ ಗ್ರೂಪ್‌ನ ದಾಂಧಲೆ ಹಾಗೂ ಅದರ ಪ್ರಭಾವ ಸಾಕಷ್ಟಿರುವುದರಿಂದ ಆರು ತಿಂಗಳ ಹಿಂದೆ ಕೇಂದ್ರದ ಗೃಹ ಸಚಿವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ಈ ಎಲ್ಲಾ ಅಂಶಗಳನ್ನು ಅವರ ಗಮನಕ್ಕೆ ತಂದು ರಾಜ್ಯಕ್ಕೆ ವಿಷೇಶ ಸಂಪನ್ಮೂಲಗಳನ್ನು ಕಳ್ಳಿಸಿಕೊಡಬೇಕೆಂದು ಅವರನ್ನು ಕೇಳಿಕೊಂಡಿದ್ದೆವು. ಈಗ ಅಧಿವೇಶನ ನಡೆಯುತ್ತಿರುವುದರಿಂದ, ಇದು ಮುಗಿದ ಬಳಿಕ 26ನೇ ತಾರೀಖು ದೆಹಲಿಗೆ ತೆರಳಿ ಮತ್ತೊಮ್ಮೆ ಕೇಂದ್ರ ಗೃಹಸಚಿವರನ್ನು ಭೇಟಿಯಾಗಿ ಪೊಲೀಸ್ ವ್ಯವಸ್ಥೆಯನ್ನು ಆಧುನಿಕರಣಗೊಳಿಸುವ ನಿಟ್ಟಿನಲ್ಲಿ ವಿಶೇಷ ಸಂಪನ್ಮೂಲ ಒದಗಿಸಿಕೊಡಲು ಕೇಳುತ್ತೇನೆ. Modernising the police force has been very high on our agenda. ನಮ್ಮ ಹತ್ತಿರ ಬಹಳ ಹಳೆಯ ಮಾಡಲ್ ವಾಹನಗಳಿರುವುದರಿಂದ ಕ್ರಿಮಿನಲ್‌ಗಳು ಎಷ್ಟು ವೇಗವಾಗಿ ಹೋಗುತ್ತಾರೋ, ಅವರಿಗಿಂತಲೂ ವೇಗವಾಗಿ ಹೋಗಿ ಅವರನ್ನು ಅಪ್ರಹೆಂಡ್ ಮಾಡುವ ಶಕ್ತಿ ನಮಗೆ ಬರಬೇಕಾಗಿದ್ದರೆ, ನಮ್ಮ ಪೊಲೀಸ್ ವ್ಯವಸ್ಥೆಯನ್ನು ಆಧುನಿಕರಣಗೊಳಿಸಬೇಕು ಮತ್ತು ಕಮ್ಯುನಿಕೇಷನ್ ಸಿಸ್ಟಂ ಅನ್ನು ಸಹ ಇವೊತ್ತು ರೆವಲ್ಯೂಷನೈಸ್ ಮಾಡಬೇಕಾಗುತ್ತದೆ. ಆದಕ್ಕೆ ಬಹಳಷ್ಟು ಹಣ ಖರ್ಚಾಗುವುದರಿಂದ ಸಂಪನ್ಮೂಲವನ್ನು ಕ್ರೋಢೀಕರಿಸಬೇಕಾಗುತ್ತದೆ. ಏಕೆಂದರೆ, ಲಾ ಅಂಡ್

ಆರ್ಡರ್ ಬಹಳ ಮಹತ್ವದ ವಿಚಾರವಾಗಿದ್ದು, ಅದಕ್ಕೆ ನಾವು ಹೆಚ್ಚು ಆದ್ಯತೆ ಕೊಡಬೇಕಾಗುತ್ತದೆ ಮತ್ತು ಗಡಿ ಭಾಗದಲ್ಲಿರುವ ಚಾಮರಾಜನಗರ ಜಿಲ್ಲೆಗೆ ನಾವು ವಿಶೇಷ ಗಮನಕೊಡಬೇಕಾಗಿದೆ. ಆ ಭಾಗದಲ್ಲಿಯೇ ಇಂತಹ ಕುಕೃತ್ಯದಂಥ ಪ್ರಯತ್ನಗಳು ನಡೆಯುತ್ತಿರುವುದು. ಇದರ ಬಗ್ಗೆ, ಸರ್ಕಾರ ಸದಾ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರಾದ ರಾಮದಾಸ್‌ರವರು ಮಾತನಾಡುತ್ತಾ, ಕರ್ನಾಟಕದಲ್ಲಿ 26ನೇ ತಾರೀಖಿನಂದು ಎಲ್ಲೋ ಒಂದು ಕಡೆ ಸಭೆ ನಡೆಯುತ್ತದೆಂದು ಹೇಳಿದರು. ಕರ್ನಾಟಕದಲ್ಲಿ ಆ ಸಭೆ ನಡೆಯುತ್ತದೆಯೇ?

ಶ್ರೀ ಎ. ರಾಮದಾಸ್ :— ಜರುಗುತ್ತಿರುವ ಸಭೆಯ ವಿವರಗಳುಳ್ಳ ಕರಪತ್ರಗಳ ಮೇಲೆ ಎಲ್‌ಟಿಟಿಇ ಚಿಹ್ನೆ ಇದ್ದು, ಇದನ್ನು ಮೈಸೂರು ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹಂಚಿದ್ದಾರೆ. ಈ ರೀತಿಯ ಚಟುವಟಿಕೆಗಳಾಗಬಾರದೆಂಬುದೇ ನನ್ನ ಕಳಕಳಿ.

ಶ್ರೀ ಎಸ್.ಎಂ. ಕೃಷ್ಣ :— ತಾವು ಏನು ಹೇಳಿದ್ದೀರಿ, ಇದರ ಮೇಲೆಯೂ ಕೂಡ ನಿಗಾ ಇಡಬೇಕೆಂದು ನಾನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

### (6) ಶಾಸನ ರಚನೆ

ಅ) ವಿಧೇಯಕವನ್ನು ಮಂಡಿಸುವುದು

(1) ಕರ್ನಾಟಕ ಮಾರಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ "2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.